ಮಾಡುತ್ತೇನೆ. ಆದುದರಿಂದ ಈ ಸುತ್ತೋಲೆಗೆ ನಾವು ಸೂಕ್ತವಾದಂಥ ತಿದ್ದುಪಡಿಯನ್ನು ಮಾಡಿ ಕೇವಲ ಕಾನೂನುಬಾಹಿರ ಎಂದು ಯಾವುದು ಈಗಗಾಲೇ ನೇಮ್ ಆಗಿವೆ, ಅಂಥ ಸಂಸ್ಥೆಗಳ ಬಗ್ಗೆ ನಮೂದಿಸಿ ಮಿಕ್ಕ ಬೆಳವಣಿಗೆಗಳನ್ನು ಆಗಿಂದಾಗ್ಗೆ ಸ್ಥಳೀಯ ಸನ್ನಿವೇಶಗಳ ಮೇಲೆ ನಾವು ತೀರ್ಮಾನ ಮಾಡಿಕೊಳ್ಳಬಹುದು.

ಅಧ್ಯಕ್ಷರು : ಆಯಿತು. ಈ ವಿಷಯವನ್ನು ಇಲ್ಲಿಗೆ ಸಾಕು ಮಾಡೋಣ. ಈಗ 2002-03 ನೇ ಸಾಲಿನ ಪೂರಕ ಅಂದಾಜು ಮೊದಲನೇ ಕಂತು ಬೇಡಿಕೆಗಳ ಮೇಲೆ ಚರ್ಚೆ. ಯಾರಾದರೂ ಮಾತನಾಡುವವರು ಇದ್ದರೆ ಮಾತನಾಡಬಹುದು.

3. ವಿತ್ತೀಯ ಕಾರ್ಯಕಲಾಪಗಳು

(ಅ) 2002-2003ನೇ ಸಾಲಿನ ಪೂರಕ ಅಂದಾಜು (ಮೊದಲನೇ ಕಂತು) ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು 2002-03ನೇ ಸಾಲಿನ ಪೂರಕ ಅಂದಾಜುಗಳ ಬಗ್ಗೆ. ಈ ವರ್ಷದ ಖರ್ಚುಗಳನ್ನು ಈ ಬಜೆಟ್ ಮಂಡನೆಯಾದಂಥ ಸಂದರ್ಭದಲ್ಲಿ ಮಾರ್ಚ್ ತಿಂಗಳಲ್ಲಿ ನಾವು ಸೇರಿದಾಗ ಸರ್ಕಾರದ ವೆಚ್ಚಗಳನ್ನು ಮಾಡಲಿಕ್ಕೆ ನಾಲ್ಕು ತಿಂಗಳಿಗೆ ಅನುದಾನವನ್ನು ನಾವು ಕೊಟ್ಟಿದ್ದೆವು; ನಾಲ್ಕು ತಿಂಗಳಿಗೆ ಖರ್ಚು ಮಾಡುವುದಕ್ಕೆ ಈ ಸದನದ ಮೂಲಕ ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಒಪ್ಪಿಗೆಯನ್ನು ಪಡೆದಿದ್ದರು. ಈ ಸಂದರ್ಭದಲ್ಲಿ ಯಾವುದನ್ನು ಆಯವ್ಯಯದಲ್ಲಿ ಮಂಡನೆ ಮಾಡಿರಲಿಲ್ಲ, ಯಾವುದಕ್ಕೆ ಹೆಚ್ಚು ಖರ್ಚುಗಳಾಗಿವೆ ಎನ್ನುವುದರ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಒಂದು ವಿಚಾರ ಪೇಜ್ ನಂ. 73, ಐಟಂ ನಂ. 6ರಲ್ಲಿ "There is no budget provision for the construction of Anganawadi Buildings with the assistance of NABARD during the current year. A sum of Rs.11.00 crores is indluced in the Demand." ಎಂದು ಹೇಳಿದ್ದಾರೆ. ಇದು ಬಹಳ ಒಳ್ಳೆಯ ಕೆಲಸ. ಏಕೆಂದರೆ ಇಡೀ ರಾಜ್ಯದಲ್ಲಿ ಒಂದು ಕೆಲಸ ನಾವು ಮಾಡಲಿಕ್ಕೆ ಆಗದೇ ಇರತಕ್ಕಂಥಾದ್ದು ಎಂದು ಹೇಳಿದರೆ ಪ್ರತಿಯೊಂದು ಕ್ಷೇತ್ರದ ಅಂಗನವಾಡಿ ಕಾರ್ಯಕ್ರಮ ಇರತಕ್ಕ ಎಲ್ಲಾ ಕಡೆಗಳಲ್ಲೂ ಸಹಿತ ಅಂಗನವಾಡಿಯ ಕಟ್ಟಡಗಳು ಇಲ್ಲ, ಅದರಿಂದಾಗಿ ಈ 11 ಕೋಟಿ ರೂಪಾಯಿಗಳನ್ನು ಈ ವರ್ಷ ಕೊಟ್ಟಿರತಕ್ಕಂಥಾದ್ದು ಒಂದು ಸರಿಯಾದ ಕ್ರಮ. ಆಯವ್ಯಯದಲ್ಲಿ ಅದನ್ನು ಮುಂಚೆಯೇ ಯೋಚನೆ ಮಾಡಿದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು ಎಂದು ನಾನು ತಿಳಿದಿದ್ದೇನೆ. ನಾನು ಮತ್ತೊಂದು ಹೆಜ್ಜೆ ಮುಂದೆ ಹೋಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳತಕ್ಕದ್ದು ಏನೆಂದರೆ, ಈ ನಬಾರ್ಡ್‌ನಿಂದ ಮತ್ತು ಬೇರೆ ಬೇರೆ ಸಂಸ್ಥೆಗಳಿಂದ at a time ಈ ಒಂದು ಸಾಲವನ್ನು ಪಡೆದು ರಾಜ್ಯದಲ್ಲಿರತಕ್ಕ ಎಲ್ಲಾ ಅಂಗನವಾಡಿಗಳಿಗೂ ಸಹಿತ ಕಟ್ಟಡಗಳನ್ನು ಕಟ್ಟಿತಕ್ಕಂಥ, ಕೆಲಸ ಮಾಡತಕ್ಕಂಥ ಒಂದು ಕಾರ್ಯಕ್ರಮಕ್ಕೆ ಸರ್ಕಾರ ಒಪ್ಪಿಗೆಯನ್ನು ಕೊಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಈ ಸಂದರ್ಭದಲ್ಲಿ ನಿಮ್ಮ ಕಿವಿಗೆ ಇಂಪಾಗಿರತಕ್ಕಂಥ ಕೆಲವು ವಿಚಾರಗಳನ್ನು ನಾನು ಹೇಳಬೇಕಾಗುತ್ತದೆ. ಸ್ತ್ರೀ ಶಕ್ತಿಯ ಕಾರ್ಯಕ್ರಮ ಏನು ಇದೆ, ಅದು ಒಳ್ಳೆಯ ಕಾರ್ಯಕ್ರಮ. ಈ ಸರ್ಕಾರ ಬಂದಮೇಲೆ ಸ್ತ್ರೀ ಶಕ್ತಿಯ ಒಳ್ಳೆಯ ಕಾರ್ಯಕ್ರಮ ಇಡೀ ರಾಜ್ಯದಲ್ಲಿ ಸಂಘಟನೆಯನ್ನು ಮಾಡುವ ದೃಷ್ಟಿಯಿಂದಾಗಿ ಮಹಿಳಾ ಸಂಘಟನೆಯ ದೃಷ್ಟಿಯಿಂದಾಗಿ, ಮಹಿಳೆಯರ ಜಾಗೃತಿ

ದೃಷ್ಟಿಯಿಂದಾಗಿ ಈ ಕಾರ್ಯಕ್ರಮ ಒಳ್ಳೆಯ ರೀತಿಯಲ್ಲಿ ಚೆನ್ನಾಗಿ ಆಗುತ್ತಿದೆ. ನಾನು ಕಳೆದ ಸಾರಿ ಬಜೆಟ್‌ನಲ್ಲಿ ಮಾತನಾಡಿದಾಗಲೂ ಸಹ ಹೇಳಿದ್ದೆ. ದುರ್ಬಲ ವರ್ಗದ ಮಹಿಳೆಯರು, ಪರಿಶಿಷ್ಟ ಜಾತಿ ಪರಿಶಿಷ್ಠ ವರ್ಗದ ಮಹಿಳೆಯರು, ಬಡಹೆಣ್ಣುಮಕ್ಕಳು, ಕೂಲಿ ಮಾಡತಕ್ಕ ಹೆಣ್ಣುಮಕ್ಕಳು ಈ ಒಂದು ಸ್ತ್ರೀ ಶಕ್ತಿ ಕಾರ್ಯಕ್ರಮದಲ್ಲಿ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿರತಕ್ಕಂಥಾದ್ದು ನಮ್ಮ ಆರೋಗ್ಯಕರವಾದ ಸಮಾಜವನ್ನು ನಿರ್ಮಾಣ ಮಾಡುವ ದೃಷ್ಟಿಯಿಂದಾಗಿ ಬಹಳ ಒಂದು ಒಳ್ಳೆಯ ಕಾರ್ಯಕ್ರಮ ಇದು. ಆದರೆ ಇದೇನಾಗಿದೆ ಎಂದು ಹೇಳಿದರೆ, ಈ ಅಂಗನವಾಡಿ ಕಾರ್ಯಕರ್ತರೇ, ಪಾಪ. ಇದಕ್ಕೋಸ್ಕರ ಎಂದು ಹೇಳಿ ದುಡಿಯುತ್ತಿದ್ದಾರೆ. ನನಗೆ ಗೊತ್ತಿರುವ ಹಾಗೆ ಈ ವರ್ಷದಲ್ಲಿ ಸುಮಾರು 80 ಕೋಟಿ ರೂಪಾಯಿಗಳು 100 ಕೋಟಿ ರೂಪಾಯಿಗಳ ವರೆಗೆ ಸೇವಿಂಗ್ಸ್ ಆಗಿದೆ. ಮಾನ್ಯ ಮಂತ್ರಿಗಳನ್ನು ಇದಕ್ಕಾಗಿ ನಾನು ಸ್ವಾಗತ ಮಾಡಿದ್ದೇನೆ ಎನ್ನತಕ್ಕಂಥಾದ್ದನ್ನು ನಾನು ಅನೇಕ ಸಾರಿ ತಮಗೆ ಹೇಳಿದ್ದೇನೆ. ಆದರೆ ಈಗ ಈ ಅಂಗನವಾಡಿ ಕಾರ್ಯಕರ್ತೆಯರಿಗೆ ಕೊಡುತ್ತಿರತಕ್ಕ ಸಂಭಾವನೆ ಏನು ಇದೆ, ಆ ಸಂಭಾವನೆ ಈ ಸ್ತ್ರೀ ಶಕ್ತಿ ಕಾರ್ಯಕ್ರಮವಾದ ಮೇಲೆ ಅವರಿಗೆ ಸಂಭಾವನೆ ಸ್ವಲ್ಪ ಮಾತ್ರ ಹೆಚ್ಚು ಮಾಡಿದ್ದೀರಿ. 50 ರೂಪಾಯಿಗಳಷ್ಟೋ, 100 ರೂಪಾಯಿಗಳಷ್ಟೋ ಹೆಚ್ಚು ಮಾಡಿದ್ದೀರಿ. ಅವರು ಬೆಳಗಿನ ಜಾವ ಏಳೂವರೆ- ಎಂಟು ಗಂಟೆಗೆ ಕೆಲಸ ಪ್ರಾರಂಭ ಮಾಡಿದರೆ 4 ಗಂಟೆಯವರೆಗೂ ಸಹಿತ ದುಡಿಯುತ್ತಾರೆ. ಮತ್ತು ಅವರಿಗೆ ಅನೇಕ ರೀತಿಯ ಹಿಂಸೆಗಳು ಇರತಕ್ಕಂಥಾದ್ದನ್ನು ಸಹಿತ ನಾವು ನೋಡಿದ್ದೇವೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯವನ್ನು ಮಾಡತಕ್ಕಂಥಾದ್ದು ಏನೆಂದರೆ, ಈ ಅಂಗನವಾಡಿ ಕಾರ್ಯಕರ್ತರು ಯಾರಿದ್ದಾರೆ, ಸುಮಾರು 60-70 ಸಾವಿರ ಜನ ಕಾರ್ಯಕರ್ತರು ಇಡೀ ರಾಜ್ಯದಲ್ಲಿದ್ದಾರೆ, ಅವರ ಸಂಭಾವನೆಯನ್ನು ಹೆಚ್ಚು ಮಾಡುವ ದೃಷ್ಟಿಯಿಂದಾಗಿ ಈ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಮತ್ತೆ ತಾವು ಆ ಮಕ್ಕಳಿಗೆ ಊಟವನ್ನು ತಯಾರು ಮಾಡಲಿಕ್ಕೆ, ಆ ಮಕ್ಕಳು. ಬಂದು ಅಲ್ಲಿ ಆಟ ಆಡಲಿಕ್ಕೆ ಬೇಕಾಗಿರತಕ್ಕಂತಹ ಒಂದು ವಸತಿಯನ್ನು ನಿರ್ಮಾಣ ಮಾಡಲಿಕ್ಕೆ ಕಾರ್ಯಕ್ರಮವನ್ನು ಏನು ಹಾಕಿಕೊಂಡಿದ್ದೀರಿ ಅದು ಒಂದು ಒಳ್ಳೆಯ ಕಾರ್ಯಕ್ರಮ ಹಾಗೂ ಇದು ಬಹಳ ಮುಖ್ಯವಾಗಿ ಸರ್ಕಾರ ಈ ನಿಟ್ಟಿನಲ್ಲಿ ಹೋಗಿರತಕ್ಕದ್ದು ಒಂದು ಒಳ್ಳೆಯ ಹೆಜ್ಜೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಅದಾದ ನಂತರ ಈ ಸ್ವಚ್ಛ ಗ್ರಾಮಗಳ ವಿಚಾರ. ಪುಟ 63ರಲ್ಲಿ ಸ್ವಚ್ಛ ಗ್ರಾಮಗಳಿಗೋಸ್ಕರ 2002-03ನೇ ಇಸವಿಯಲ್ಲಿ 13 ಕೋಟಿ ರೂಪಾಯಿಗಳನ್ನು ಈ ವರ್ಷ ಡಿಮ್ಯಾಂಡ್‌ಗೆ ಇನ್‌ಕ್ಲೂಡ್ ಮಾಡಿದ್ದಾರೆ. ತಾವು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ, ಮೊದಲನೇ ವರ್ಷದಲ್ಲಿ ಅದೇನು ತಿಳಿಯದೇ ಹೇಳಿದ್ದಿರೋ ಅಥವಾ ತಿಳಿದೇ ಹೇಳಿದ್ದಿರೋ ಪ್ರತಿ ವರ್ಷವೂ ಸಹ ಒಂದು ಸಾವಿರ ಹಳ್ಳಿಗಳ ಸ್ವಚ್ಛವನ್ನು ನಾವು ಮಾಡುತ್ತೇವೆ, 5 ಸಾವಿರ ಹಳ್ಳಿಗಳ ಸ್ವಚ್ಛ ಗ್ರಾಮದ ಕಾರ್ಯಕ್ರಮವನ್ನು ನಾವು ರಾಜ್ಯದಲ್ಲಿ ತೆಗೆದುಕೊಳ್ಳುತ್ತೇವೆ ಎನ್ನತಕ್ಕದ್ದನ್ನು ತಾವು ಈ ಸದನದಲ್ಲಿ ಹೇಳಿ ಸದನದ ಗೌರವಾನ್ವಿತ ಸದಸ್ಯರುಗಳ, ಆಡಳಿತ ಪಕ್ಷದ ವಿಶೇಷ ಸದಸ್ಯರುಗಳ ಶಹಭಾಸ್ ಗಿರಿಯನ್ನು ಪಡೆದಿದ್ದಿರಿ. ಆದರೆ ಈಗ ಏನಾಗಿದೆ ಅಂದರೆ ತಾವು ಈ 13 ಕೋಟಿ ರೂಪಾಯಿಗಳನ್ನು ಏತಕ್ಕೆ ಅಲಾಟ್ ಮೆಂಟ್ ಮಾಡಿಕೊಂಡಿದ್ದೀರಿ ಎಂದರೆ, ``The budget provision for the year 2002-2003 under swatcha grama yojana for the payment of interest and loan instalment towards loan demand from HUDCO is found

inadequate, an additionality of Rs.13.00 crores has been included in the Demand." ಅಂದರೆ ತಾವು ಈಗಾಗಲೇ ಈ ಯೋಜನೆಗೋಸ್ಕರ ಎಂದು ಹೇಳಿ ಹುಡ್ಕೋ ಸಂಸ್ಥೆಯಿಂದ ಸಾಲವನ್ನು ತೆಗೆದುಕೊಂಡಿದ್ದೀರಿ ಆ ಸಾಲದ ಮರುಪಾವತಿಯನ್ನು ಮಾಡಲಿಕ್ಕೆ ಬಡ್ಡಿಯ ರೂಪದಲ್ಲಿ ಕಟ್ಟಲಿಕ್ಕೆ ಎಂದು ಹೇಳಿ 13 ಕೋಟಿ ರೂಪಾಯಿಗಳನ್ನು ತಾವು ಈ ವರ್ಷದಲ್ಲಿ ಮಂಜೂರಾತಿಯನ್ನು ಅಡಿಷನಲ್ ಆಗಿ ತೆಗೆದುಕೊಂಡಿದ್ದೀರಿ. ನಾನು ಕೇಳತಕ್ಕದ್ದು, ಈ ಸ್ವಚ್ಛ ಗ್ರಾಮದ ಕಾರ್ಯಕ್ರಮಗಳು ಎರಡು ವರ್ಷಗಳಲ್ಲಿ ಆಗಿದೆ ನಿಮ್ಮ ಅಧಿಕಾರದಲ್ಲಿ, ಇನ್ನು ಎರಡು ತಿಂಗಳಲ್ಲಿ ಮೂರನೇ ವರ್ಷದ ಅಧಿಕಾರ ಮುಗಿಯುತ್ತದೆ, ಅನೇಕ ಜನ ಶಾಸಕರು ಇದನ್ನು ವ್ಯಕ್ತ ಮಾಡಿದ್ದಾರೆ. ಆರ್.ಡಿ.ಪಿ.ಆರ್. ಡಿಮ್ಯಾಂಡ್ ಮೇಲೆ ಮಾತನಾಡುವಾಗ ಸ್ವಚ್ಛ ಗ್ರಾಮದ ಕೆಲಸಗಳು ಇದುವರೆಗೂ ಸಹಿತ ರಾಜ್ಯದಲ್ಲಿ ಪ್ರಾರಂಭ ಆಗಿಲ್ಲ. ಎಲ್ಲೋ ಒಂದು ಕಡೆ, ಎರಡು ಕಡೆ, ಜಿಲ್ಲೆಯಲ್ಲಿ ಒಂದು ಹಳ್ಳಿ, ಎರಡು ಹಳ್ಳಿಗಳು, ಮೂರು ಹಳ್ಳಿಗಳಲ್ಲಿ ಕಾರ್ಯಕ್ರಮ ಪ್ರಾರಂಭ ಆಗಿರಬಹುದೇ ವಿನಹ ತಾವು ಯಾವ ಯಾವ ಪ್ರಮಾಣದಲ್ಲಿ ಒಂದು ಸಾವಿರ ಹಳ್ಳಿಗಳನ್ನು ಸ್ವಚ್ಛ ಮಾಡುತ್ತೇವೆಂದು ಹೇಳಿದ್ದೀರಿ, ಮೂರು ವರ್ಷಗಳಾಯಿತು, ಇದುವರೆಗೂ ಸಹಿತ ಈ ಕೆಲಸ ಇನ್ನೂ ಪ್ರಾರಂಭ ಆಗಿಲ್ಲ. ನನಗೇನು ಮಾಹಿತಿ ಬೇಕಾಗಿರತಕ್ಕದ್ದು ಎಂದರೆ, ಈ ಕಾರ್ಯಕ್ರಮ ಇಲ್ಲಿಗೇ ನಿಲ್ಲುತ್ತದೋ ಅಥವಾ ಇದನ್ನು ಮುಂದುವರಿಸುತ್ತೀರೋ ಎನ್ನುವುದು ಬೇಕಾಗಿದೆ. ಮತ್ತೆ ಇದೇನಾಗಿದೆ ಅಂದರೆ, ತಮ್ಮ ಗಮನಕ್ಕೆ ಬಂದಿರಬಹುದು, ಕಂಟ್ರಾಕ್ಟ್ ದಾರರು ಅನೇಕ ಕಡೆಗಳಲ್ಲಿ ಹಳ್ಳಿಗರ ಪರವಾಗಿ ದುಡ್ಡನ್ನು ಕಟ್ಟಿದ್ದಾರೆ. ಹಳ್ಳಿಯವರು ಇವತ್ತಿನ ಪರಿಸ್ಥಿತಿಯಲ್ಲಿ ಆ ಹಣವನ್ನು ಕಟ್ಟತಕ್ಕ ಸ್ಥಿತಿಯಲ್ಲಿ ಇಲ್ಲ. ಅವರ ಪರರಾಗಿ ಕಂಟ್ರಾಕ್ಟ್ ದಾರರು ಕೊಟ್ಟಿದ್ದಾರೆ ಅಥವಾ ಶಾಸಕರುಗಳು ಆಸಕ್ತಿಯನ್ನು ತೆಗೆದುಕೊಂಡು ಎಲ್ಲಿ ಸಾಧ್ಯ ಇದೆ. ಅಲ್ಲಿ ಅವರು ಬೇರೆ ಬೇರೆ ಸೋರ್ಸ್‌ಗಳಿಂದ ಕಷ್ಟಪಟ್ಟು ಅವರಿವರ ಕಡೆಯಿಂದ ದುಡ್ಡನ್ನು ಸಂಗ್ರಹ ಮಾಡಿ ಕಟ್ಟಿತಕ್ಕಂತಹ ದುಡ್ಡು ಇದು. ಇದನ್ನು ಯಾವಾಗ ಮುಗಿಸುತ್ತೀರಿ? ಈ ಸ್ವಚ್ಛ ಗ್ರಾಮದ ಕಾರ್ಯಕ್ರಮಗಳನ್ನು ಮುಂದಿನ ಆರು ತಿಂಗಳಲ್ಲಿ ಆದರೂ ಮಾಡುತ್ತೀರಾ? ಇದಕ್ಕೆಲ್ಲಾ ಮುಂಚೆ ಸ್ಟೇಟ್ ಲೆವೆಲ್ ಕಮಿಟಿ ಎಂದು ಮಾಡಿದಿರಿ. ಈ ಸ್ಟೇಟ್ ಲೆವೆಲ್ ಕಮಿಟಿಯನ್ನು ಅಬಾಲಿಷ್ ಮಾಡಿ ಜಿಲ್ಲಾ ಲೆವೆಲ್‌ನಲ್ಲಿ ಈಗ ಒಂದೊಂದು ಕಮಿಟಿಯನ್ನು ಮಾಡಿದ್ದೀರಿ. ಸಿ.ಇ.ಓ. ಎಕ್ಸಿಕ್ಯುಟಿವ್ ಆಫೀಸರ್ ಈ ಸ್ವಚ್ಛ ಗ್ರಾಮದ ಕಾರ್ಯಕ್ರಮಗಳಿಗೆ ಈಗ ಇನ್‌ಛಾರ್ಜ್ ಆಗಿದ್ದಾರೆ. ಈ ಕಂಟ್ರಾಕ್ಟ್ ದಾರರನ್ನು ನೇಮಕ ಮಾಡಿದ್ದೀರಿ. ಆದರೆ ದುಡ್ಡನ್ನು ರಿಲೀಸ್ ಮಾಡಿಲ್ಲ. ಮತ್ತೆ ಕೆಲವು ಕಡೆಗಳಲ್ಲಿ ಕೆಲಸವನ್ನು ಲ್ಯಾಂಡ್ ಆರ್ಮಿಗೆ ವಹಿಸಿ ಕೊಟ್ಟಿದ್ದೀರಿ. ಆ ಲ್ಯಾಂಡ್ ಆರ್ಮಿಯವರು ಏನು ಮಾಡುತ್ತಾರೆ ಎಂದರೆ ಸಬ್-ಕಂಟ್ರಾಕ್ಟ್ ಮಾಡುತ್ತಾರೆ. ಅವರೂ ಸಹಿತ ಕಂಟ್ರಾಕ್ಟರ್ ಅವರ ಮುಖಾಂತರ ಮಾಡಿಸತಕ್ಕಂತಹದು ಇದೆ. ನನ್ನದೊಂದು ಸಲಹೆ ಏನೆಂದರೆ, ನಮ್ಮ ಅನೇಕ ಕಡೆಗಳಲ್ಲಿ ಲ್ಯಾಂಡ್ ಆರ್ಮಿ ಆಕ್ಚುಯಲ್ ಆಗಿ ಎಕ್ಸಿಸ್ಟೆನ್ಸೇ ಇಲ್ಲ. ಆ ಡೆಪ್ಯುಟಿ ಡೈರೆಕ್ಟ್ ಒಬ್ಬ ಡಿಸ್ಟ್ರಿಕ್ಟ್ ಲೆವೆಲ್ ಆಫೀಸರ್ ಬಿಟ್ಟರೆ ಲ್ಯಾಂಡ್ ಆರ್ಮಿ ಎಕ್ಸಿಸ್ಟೆನ್ಸ್‌ನಲ್ಲಿ ಇಲ್ಲ. ಆ ಲ್ಯಾಂಡ್ ಆರ್ಮಿಗೆ ನೀವು ಕೆಲಸ ಕೊಟ್ಟಿದ್ದೀರಿ. ಅವರು ವಾಪಸ್ ದುಡ್ಡನ್ನು ಮುಚಿತವಾಗಿ ಡ್ರಾ ಮಾಡಿಕೊಳ್ಳುತ್ತಾರೆ. ದುಡ್ಡು ಡ್ರಾ ಮಾಡಿಕೊಂಡ ಮೇಲೆ ಅಲ್ಲಿ ಕೆಲಸ ಪ್ರಾರಂಭ ಮಾಡುವುದಿಲ್ಲ. ಹೀಗಾಗಿ ನಮ್ಮ ಅನೇಕ ಕಡೆಗಳಲ್ಲಿ ನಮ್ಮ ಅನುಭವವೂ ಸಹ, ನಮ್ಮ ಸರ್ಕಾರ ಆಡಳಿತದಲ್ಲಿ ಇದ್ದಂತಹ ಸಂದರ್ಭದಲ್ಲಿ ಲ್ಯಾಂಡ್ ಆರ್ಮಿನಲ್ಲಿ ಮಾಡಿರತಕ್ಕಂತಹ ಕೆಲಸ ಬಹಳ ಲೋ ಕ್ವಾಲಿಟಿ ಕೆಲಸ ಆಗಿದೆ. ಮನೆಗಳೆಲ್ಲಾ

ಬಿದ್ದು ಹೋಗಿದೆ. ಅನೇಕ ಕಡೆಗಳಲ್ಲಿ ಮನೆ ಬಿದ್ದಿರುವುದನ್ನು ನಾವು ನೋಡಿದ್ದೇವೆ. ಕೆಲವು ಕಡೆ ಎಲ್ಲೋ ಎಕ್ಸ್ ಪೆಷನ್ ಇದೆ. ಲ್ಯಾಂಡ್ ಆರ್ಮಿಯ ಡೆಪ್ಯುಟಿ ಡೈರೆಕ್ಟರ್ ಚೆನ್ನಾಗಿರುವ ಕಡೆಗಳಲ್ಲಿ ಒಳ್ಳೆಯ ಕೆಲಸ ಮಾಡಿರಬಹುದು. ಆದರೆ ಬಹುತೇಕ ಕಡೆಗಳಲ್ಲಿ ಈ ಲ್ಯಾಂಡ್ ಆರ್ಮಿ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಆದರಿಂದಾಗಿ ಮಾನ್ಯ ಅಧ್ಯಕ್ಷರೆ, ಈ ಸ್ವಚ್ಛ ಗ್ರಾಮದ ಕೆಲಸಗಳನ್ನು ಈ ವರ್ಷದಲ್ಲೇ ಮುಗಿಸಬೇಕು ಎನ್ನತಕ್ಕ ಒತ್ತಾಯವನ್ನು ನಾನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಮಾಡಲಿಕ್ಕೆ ಬಯಸುತ್ತೇನೆ. ಇನ್ನೊಂದು ಬಹಳ ಪ್ರಮುಖವಾಗಿ, ನಮ್ಮೆಲ್ಲಾ ಸದಸ್ಯರುಗಳಿಗೂ ಸಹಿತ ಸಂಬಂಧಪಟ್ಟಂತಹ ವಿಚಾರ ಇದೆ. ಪೇಜ್ ನಂಬರ್ 23ರಲ್ಲಿ ಇದೆ. Item No., "An additionality of 200 lakhs has been relaeased from Contingency Fund for payment of remuneration for preparation and printing of Electoral Rolls and the same is to be recouped to the Fund. Hence included in the Demand."

Item No. 5ರಲ್ಲಿ " An additionality of 200 crore, has been sanctioned for issue of photo identity cards to voters. Hence included in the Demand." ಎಂದು ಹೇಳಿದ್ದಾರೆ.

ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇದು ಬಂದಿದೆಯೋ ಇಲ್ಲವೋ ಗೊತ್ತಿಲ್ಲ, ಇದೊಂದು ಸಾರಿ ಐಡೆಂಟಿಟಿ ಕಾರ್ಡ್‌ಗಳನ್ನು ಮಾಡಿಸಿದ್ದೇವೆ. ನಾನೂ ಸಹಿತ ವೋಟರ್ ಆಗಿ ಮಾಡಿಸಿದ್ದೇನೆ. ಅದಕ್ಕೆ ನೇರವಾಗಿ ಇದು ಸರ್ಕಾರಕ್ಕೆ ಬರುವುದಿಲ್ಲ. ವೋಟರ್ಸ್ ಐಡೆಂಟಿಫಿಕೇಷನ್ ಕಾರ್ಡ್ ಮಾಡತಕ್ಕದ್ದು ಇದನ್ನು ಡೆಪ್ಯುಟಿ ಕಮೀಷನರ್‌ಗಳ ಮೂಲಕ ಎಲೆಕ್ಷನ್ ಕಮೀಷನರ್ ಅವರು ಮಾಡಿಸುತ್ತಾರೆ. ವೋಟರ್ಸ್ ಲಿಸ್ಟನ್ನು ಫೈನಲೈಸ್ ಮಾಡತಕ್ಕಂತಹ ಕೆಲಸ ಸಹಿತ ಎಲೆಕ್ಷನ್ ಕಮೀಷನರ್, ಡೆಪ್ಯುಟಿ ಕಮೀಷನರ್ ಅವರ ಮೂಲಕವಾಗಿ ಮಾಡಿಸುತ್ತಾರೆ. ಆದರೆ ನಾವು ಇಲ್ಲಿ ದುಡ್ಡನ್ನು ಕೊಡತಕ್ಕಂತಹ ಕೆಲಸವನ್ನು ಮಾಡುತ್ತೇವೆ. ಆದರೆ ಮೊನ್ನೆ ಕಾರ್ಪೊರೇಷನ್ ಎಲೆಕ್ಷನ್ಸ್ ನಲ್ಲಿ ಒಂದು ವಿಚಾರ ಆಗಿದೆ. ಬೆಂಗಳೂರಿನ ಒಬ್ಬ ಖ್ಯಾತ ವೈದ್ಯರು ವೋಟು ಹಾಕುವುದಕ್ಕೆ ಹೋಗುತ್ತಾರೆ. ಅವರ ಹೆಂಡತಿಯ ಹೆಸರು ವೋಟರ್ಸ್ ಲಿಸ್ಟ್‌ನಲ್ಲಿದೆ. ಅವರ ಹೆಸರು ವೋಟರ್ಸ್ ಲಿಸ್ಟ್‌ನಲ್ಲಿ ಇಲ್ಲ. ಇದೊಂದಾಯಿತು, ಸ್ವತಃ ಆ ವೈದ್ಯರೇ ಬಂದು ನನಗೆ ಹೇಳಿದ್ದು. ಇದಾದ ನಂತರ ಮೊನ್ನೆ ಕಾರ್ಪೊರೇಷನ್ ಎಲೆಕ್ಷನ್‌ನಲ್ಲಿ ಆದಂತಹ ವಿಚಾರ. ಇದರಲ್ಲಿ ಆಡಳಿತ ಪಕ್ಷ, ವಿರೋಧ ಪಕ್ಷ ಎಂದು ನಾನು ಹೇಳುತ್ತಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಸಿಂಧ್ಯಾ ಅವರು ಈಗ ಏನು ಹೇಳಿದರು ಅದೇ ವಿಚಾರದಲ್ಲಿ ನಾನು ಹೇಳಬೇಕಾಗಿದೆ. ನನ್ನ ಮನೆ ಇಂದಿರಾನಗರದಲ್ಲಿ ಇದೆ. ನನ್ನ ಹೆಂಡತಿಯ ಐಡೆಂಟಿಫಿಕೇಷನ್ ಕಾರ್ಡ್ ಇದೆ, ಆದರೆ ವೋಟರ್ಸ್ ಲಿಸ್ಟ್ ನಲ್ಲಿ ಹೆಸರು ಇಲ್ಲ. ಇದು ನನ್ನ ಪರಿಸ್ಥಿತಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇದು ಬಹಳ ಪ್ರಮುಖವಾದ ವಿಚಾರ. ನಾವೇನು ಮಾಡುತ್ತೇವೆ? ಶಾಸಕರು, ನಮ್ಮದೂ ಸಹಿತ ತಪ್ಪು ಇದೆ. ಚುನಾಯಿತ ಪ್ರತಿನಿಧಿಗಳದ್ದೂ ಸಹ ತಪ್ಪು ಇದೆ. ಆ ಗ್ರಾಮ ಪಂಚಾಯಿತಿಯಲ್ಲಿ ಅಥವಾ ತಾಲ್ಲೂಕು ಬೋರ್ಡ್ ಆಫೀಸಿನಲ್ಲಿ ಅಥವಾ ತಹಶೀಲ್ದಾರ್ ಆಫೀಸಿನಲ್ಲಿ ವೋಟರ್ಸ್ ಲಿಸ್ಟನಲ್ಲಿ ಛೇಂಜಸ್ ಮಾಡಲಿಕ್ಕೆ, ಆಬ್ಜೆಕ್ಷನ್ಸ್

ಕೊಡಲಿಕ್ಕೆ ಇಂತಹ ಡೇಟ್ ಎಂದು ಹೇಳಿರುತ್ತಾರೆ.ಆದರೆ ನಾನು ಇತ್ತೀಚಿನ ದಿನಗಳಲ್ಲಿ ಗಮನಿಸಿದ್ದು ಏನೆಂದರೆ, ಕೆಲವು ಚುನಾವಣೆಗಳಲ್ಲಿ ಏನಾಗಿದೆ ಎಂದರೆ ಹೊರಗಡೆ ಕುಳಿತಿರುವ ಏಜೆಂಟ್ ವೋಟರ್ಸ್ ಲಿಸ್ಟ್‌ನಲ್ಲಿ ನಿಮ್ಮ ಹೆಸರು ಇದೆ ಎಂದು ಹೇಳುತ್ತಾನೆ. ಅಲ್ಲಿ ಒಳಗಡೆ ಹೋದ ತಕ್ಷಣವೇ ಒಂದು ರೆಡ್ ಮಾರ್ಕ್ ಹಾಕಿರುತ್ತಾರೆ. ಆ ರಿಟರ್ನಿಂಗ್ ಆಫೀಸರ್ ಹಿಂದಿನ ದಿನ ರಾತ್ರಿ ಹಾಕಿ, ಇಲ್ಲರೀ, ಇದು ಬೇರೆ ಕಡೆಗೆ ಶಿಫ್ಟ್ ಆಗಿದೆ ಎಂದು ಹೇಳುತ್ತಾರೆ. ವೋಟರ್ಸ್ ಲಿಸ್ಟ್, ಮೊನ್ನೆ ನರಸಿಂಹರಾಜ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ನಡೆದಂತಹ ಚುನಾವಣೆ ಇರಬಹುದು,ಬೆಂಗಳೂರು ಸಿಟಿ ಕಾರ್ಪೊರೇಷನ್ ನಲ್ಲಿ ನಡೆದಿರತಕ್ಕ ಚುನಾವಣೆಗಳು ಇರಬಹುದು, ಕನಕಪುರ ಪಾರ್ಲಿಮೆಂಟರಿ ಬೈ-ಎಲೆಕ್ಷನ್ ಚುನಾವಣೆಗಳು ಇರಬಹುದು, ಎಲ್ಲಾ ಕಡೆಗಳಲ್ಲಿಯೂ ಸಹಿತ ವೋಟರ್ಸ್ ಲಿಸ್ಟ್ ಟ್ಯಾಂಪರ್ ಆಗಿರತಕ್ಕಂತಹದನ್ನು ನಾವು ಗಮನಿಸಿದ್ದೇವೆ. ಇದು ಆ ಪಕ್ಷಕ್ಕೆ, ಈ ಪಕ್ಷಕ್ಕೆ ಎನ್ನುವುದಕ್ಕಿಂತ ಹೆಚ್ಚಾಗಿ ನಿಷ್ಪಕ್ಷಪಾತವಾಗಿ ಇದರ ಬಗ್ಗೆ ಸರ್ಕಾರ ಏನಾದರೂ ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು, ಇಲ್ಲದೇ ಹೋದರೆ ತೊಂದರೆ ಆಗಬಹುದು. ಈಗ ದುಡ್ಡು ಕೊಡತಕ್ಕವರು ನಾವು. ಐಡೆಂಟಿಫಿಕೇಷನ್‌ಗೆ ನಾವು ದುಡ್ಡು ಕೊಡುತ್ತೇವೆ. ಎಲೆಕ್ಟೊರಲ್ ರೋಲ್ ಪ್ರಿಪೇರ್ ಮಾಡುವುದಕ್ಕೆ ನಾವು ದುಡ್ಡು ಕೊಡುತ್ತೇವೆ. ಆದರೆ ವಸ್ತುಸ್ಥಿತಿಯಲ್ಲಿ ಈ ವೋಟರ್ಸ್ ಲಿಸ್ಟ್ ಈ ಪ್ರಜಾತಂತ್ರ ವ್ಯವಸ್ಥೆಯನ್ನೇ ಬುಡಮೇಲು ಮಾಡತಕ್ಕಂತಹ ಒಂದು ಪರಿಸ್ಥಿತಿಗೆ ಹೋಗಿದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಆದಾದ ಮೇಲೆ ಈ ಡಿಪಿಎಪಿ ಸ್ಕೂಲ್ ವಿಚಾರ. ಪುಟ 17ರಲ್ಲಿ, ಇಲ್ಲಿ ಈ ವರ್ಷ ಡಿಪಿಎಪಿ ಸ್ಕೂಲಿಗೆ ಅಡಿಷನಲ್ ಆಗಿ ಸುಮಾರು 21 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಮಾಡಿದ್ದಾರೆ. ಶ್ರೀಮಾನ್ ಗೋವಿಂದೇಗೌಡರು ಶಿಕ್ಷಣ ಇಲಾಖಾ ಮಂತ್ರಿಗಳು ಆಗಿದ್ದಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಯೋಜನೆಯಿಂದಾಗಿ ಈ ಒಂದು ಡಿಪಿಎಪಿ ಸ್ಕೂಲ್ ರೂಮುಗಳನ್ನು ಕೊಡುವಂತಹ ಕಾರ್ಯಕ್ರಮ ಆಯಿತು. ಮಾನ್ಯ ವೀರಪ್ಪ ಮೊಯಿಲಿಯವರು ರಾಜ್ಯದ ಮುಖ್ಯಮಂತ್ರಿಗಳು ಆಗಿದ್ದಾಗ ಈ ಕಾರ್ಯಕ್ರಮ ಪ್ರಾರಂಭವಾಯಿತು. ಬಹಳಷ್ಟು ಕಡೆಗಳಲ್ಲಿ 7 ವರ್ಷಗಳಿಂದ, 8 ವರ್ಷಗಳಿಂದ, 10 ವರ್ಷಗಳಿಂದ ಈ ಡಿಪಿಎಪಿ ಸ್ಕೂಲ್ ರೂಮುಗಳ ಕಟ್ಟಡಗಳು ಕಂಪ್ಲೀಟ್ ಆಗದೇ ಇರುವುದನ್ನು ನಾವು ನೋಡಿದ್ದೇವೆ. ಇದೊಂದು ವಿಶೇಷವಾಗಿ ಬಹಳ ಮಾಡೆಲ್ ಆಗಿ ಮಾಡಿತಕ್ಕಂತಹ ಸ್ಕೂಲ್ ಬಿಲ್ಡಿಂಗ್ ರೂಮುಗಳು. ಆದರೆ ದುರಾದೃಷ್ಟವಶಾತ್ ಈ ಆರ್ ಡಿಪಿಆರ್ ಡಿಪಾರ್ಟ್‌ಮೆಂಟಿನವರು ಸರಿಯಾಗಿ ರಿವ್ಯೂ ಮಾಡದೇ ಇರುವುದರಿಂದಾಗಿ ಮತ್ತೆ ಅದಕ್ಕೆ ಹಣಕಾಸಿನ ಸಂದಾಯ ಸರಿಯಾಗಿ ಆಗದೇ ಇರುವುದರಿಂದಾಗಿ, ಆಗಾಗ ರಿಲೀಸಸ್ ಆಗದೇ ಇರುವುದರಿಂದಾಗಿ ಇವತ್ತು ಡಿಪಿಎಪಿ ಬಿಲ್ಡಿಂಗ್‌ಗಳು 7, 8 ವರ್ಷಗಳಿಂದ ಲಿಂಗರಿಂಗ್ ವರ್ಕ್ಸ್ ಆಗಿ ಉಳಿದಿದೆ. ಅದಕ್ಕೋಸ್ಕರವಾಗಿ ನಾನೇನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ ಎಂದು ಹೇಳಿದರೆ, ತಾವೇನು 60 ಸಾವಿರ ಸ್ಕೂಲ್ ರೂಮುಗಳನ್ನು, 70 ಸಾವಿರ ಸ್ಕೂಲ್ ರೂಮುಗಳನ್ನು ಈ ವರ್ಷ ನಾವು ಕಟ್ಟಿಸುತ್ತೇವೆ ಎನ್ನತಕ್ಕ ಘೋಷಣೆಯನ್ನು ಏನು ಮಾಡಿದ್ದೀರಿ? ಅದನ್ನು ಘೋಷಣೆ ಮಾಡಿ, ಆದರೆ ಈ ಡಿಪಿಎಪಿ ಸ್ಕೂಲ್ ರೂಮುಗಳು ಏನು ಇವೆ? ಕಳೆದ ಎಂಟು ವರ್ಷಗಳಿಂದ ಬಾಕಿ ಇರತಕ್ಕಂತಹ ಎಲ್ಲಾ ಡಿಪಿಎಪಿ ಸ್ಕೂಲ್ ರೂಮ್‌ಗಳನ್ನು ಸಹಿತ ಕಂಪ್ಲೀಟ್ ಮಾಡುವುದಕ್ಕೆ ಇಡೀ ರಾಜ್ಯದಲ್ಲಿ ಬೇಕಾಗಿರತಕ್ಕಂತ ಹಣವನ್ನು ಬಿಡುಗಡೆ ಮಾಡಬೇಕು ಎನ್ನತಕ್ಕದ್ದನ್ನು ನಾನು ಈ ಸಂದರ್ಭದಲ್ಲಿ

ಹಣಕಾಸಿನ ಜವಾಬ್ದಾರಿಯನ್ನು ಹೊತ್ತಿರತಕ್ಕಂತಹ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡಲಿಕ್ಕೆ ಬಯಸುತ್ತೇನೆ.

ಆದಾದ ಮೇಲೆ ಇನ್ನೊಂದು ಬಹಳ ಮುಖ್ಯವಾಗಿರತಕ್ಕಂತಹ ಸಮಸ್ಯೆ. ನಿನ್ನೆ ದಿವಸ ಹೊಸದುರ್ಗದಲ್ಲಿ ಒಬ್ಬ ಶಿಕ್ಷಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪತ್ರಿಕೆಗಳಲ್ಲಿ ಅದು ಬಂದಿದೆ. ಅದರ ವಿವರಣೆಯನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರತ್ಯೇಕವಾಗಿ ಒಂದು ಪತ್ರವನ್ನು ಬರೆದು ಕಳಿಸಿಕೊಡುತ್ತೇನೆ. ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಇದು ಬಹಳ ಇಂಟರೆಸ್ಟಿಂಗ್ ಆಗಿದೆ. ಎಂಟನೇ ತರಗತಿಯ ಗಣಿತ ಪಠ್ಯಪುಸ್ತಕವನ್ನು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಈ ಪುಸ್ತಕ ಗಣಿತದ್ದು, ಆದರೆ, ಇದರಲ್ಲಿ ಪ್ರಿಂಟ್ ಆಗಿರುವುದು ಸೋಷಿಯಾಲಜಿ. ಏಕೆಂದರೆ, ಪ್ರೈಮರಿ ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಹೇಳುವವರು, ಕೇಳುವವರು ಯಾರೂ ಇಲ್ಲ, ಮಾನ್ಯ ಅಧ್ಯಕ್ಷರೆ, ನಿಮ್ಮ ಮೊಮ್ಮಗ್ಗಳು ಯಾವ ಶಾಲೆಗೆ ಹೋಗುತ್ತಾರೋ ಗೊತ್ತಿಲ್ಲ. ನಮ್ಮ ಮಕ್ಕಳೆಲ್ಲಾ ಬೆಂಗಳೂರಿನಲ್ಲಿರುವ ಕಾನ್ವೆಂಟ್ ಇಂಗ್ಲೀಷ್ ಶಾಲೆಯಲ್ಲಿ ಓದುತ್ತಾರೆ. ಗೌರ್ವನರ್ಮೆಂಟ್ ಪ್ರೈಮರಿ ಶಾಲೆಗೆ ಹೋಗುವವರು ಬಡವರ ಮಕ್ಕಳು, ಸ್ಲಂನಲ್ಲಿರುವವರು ಗೌರ್ವನರ್ಮೆಂಟ್ ಶಾಲೆಗೆ ಹೋಗುತ್ತಿರುವವರು. ನಾವು ಈಗಾಗಲೇ ಆಗಸ್ಟ್ ತಿಂಗಳ ಆರನೇ ತಾರೀಖಿನಲ್ಲಿದ್ದೇವೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಯೋಚನೆ ಮಾಡಬೇಕು. ಪ್ರಾಥಮಿಕ ಶಾಲೆಗಳಲ್ಲಿ ಇದುವರೆವಿಗೂ ಪಠ್ಯಪುಸ್ತಕಗಳನ್ನು ಕೊಟ್ಟಿಲ್ಲ, ಜೂನ್ ಮೊದಲನೇ ತಾರೀಖಿನಿಂದ ಶಾಲೆಗಳು ಪ್ರಾರಂಭವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೋ ಏನೋ ಗೊತ್ತಿಲ್ಲ, ಜೂನ್, ಜುಲೈ ಕಳೆದು ಆಗಸ್ಟ್ ತಿಂಗಳು ಬಂದಿದ್ದರೂ ಇದುವರೆವಿಗೂ ಶಾಲೆಗಳಲ್ಲಿ ಪಠ್ಯಪುಸ್ತಕಗಳನ್ನು ಕೊಟ್ಟಿಲ್ಲವೆಂದರೆ ಏನರ್ಥ? ಇಲ್ಲದಿದ್ದರೆ ನೀವು ಕೊಡುವುದಿಲ್ಲವೆಂದು ಹೇಳಿ. ಕೂಲಿ ಮಾಡುವವರು ಒಂದು ವರ್ಷದ್ದೋ, ಒಂದು ತಿಂಗಳದ್ದೋ ಏನಾದರೂ ಸ್ವಲ್ಪ ಉಳಿಸಿಕೊಂಡು ಪಠ್ಯಪುಸ್ತಕಗಳನ್ನು ತೆಗೆದುಕೊಳ್ಳುತ್ತಾರೆ. ಒಂದು ಕಡೆ ಪಠ್ಯಪುಸ್ತಕಗಳನ್ನು ಉಚಿತವಾಗಿ ಕೊಡುತ್ತೇವೆಂದು ಸಿಕ್ಕಾಪಟ್ಟೆ ಪ್ರಚಾರ ತೆಗೆದುಕೊಳ್ಳುತ್ತೀರಿ. ಇನ್ನೊಂದು ಕಡೆ ಅದನ್ನು ಕೊಡುವುದಕ್ಕೂ ಸಹ ತಯಾರಿಲ್ಲ. ಕಳೆದ ವರ್ಷದ ಗಣಿತ ಪಠ್ಯಪುಸ್ತಕದ ಕುರಿತು ತಮ್ಮ ಗಮನಕ್ಕೆ ತರುವುದಾದರೆ, ಗಣಿತ ಪುಸ್ತಕವೆಂದು ಹೇಳಿ ಸೋಷಿಯಾಲಜಿಯನ್ನು ಪ್ರಿಂಟ್ ಮಾಡಿದ್ದಾರೆ. ಇದು ಹೋದ ವರ್ಷದ್ದು, ಈ ವರ್ಷದ್ದು ಇನ್ನೂ ಪ್ರಿಂಟಾಗಿಲ್ಲ. ನಾವು ಯಾರನ್ನು ಕೇಳುವುದು? ಇದರ ಬಗ್ಗೆ ತಾವು ದಯವಿಟ್ಟು ಗಮನಕ್ಕೆ ತೆಗೆದುಕೊಳ್ಳಬೇಕು. ತತ್‌ಕ್ಷಣ ಈ ಪಠ್ಯಪುಸ್ತಕಗಳೆಲ್ಲವನ್ನೂ ಹಂಚತಕ್ಕಂಥ ಕೆಲಸ ಮಾಡಬೇಕೆಂದು ನಾನು ಒತ್ತಾಯ ಮಾಡಬಯಸುತ್ತೇನೆ. ಇದು ಎಲ್ಲಾ ಶಾಸಕರಿಗೂ ಸಂಬಂಧಪಟ್ಟಿರುವ ವಿಚಾರವಾಗಿದೆ. ಎಲ್ಲಾ ಕನ್ನಡದ ಪ್ರಾಥಮಿಕ ಶಾಲೆಗಳಲ್ಲಿ ಮಾಧ್ಯಮಿಕ ಶಾಲೆಗಳಲ್ಲಿ, ಪಠ್ಯಪುಸ್ತಕಗಳನ್ನು ಉಚಿತವಾಗಿ ಕೊಡುತ್ತೇವೆಂದು ಘೋಷಣೆಗಳ ಮೇಲೆ ಘೋಷಣೆ ಮಾಡಿ ಇದುವರೆವಿಗೂ ಕೊಡದಿರುವಂಥ ವಿಚಾರದಲ್ಲಿ ಯಾರು ನಾಚಿಕೆಪಟ್ಟುಕೊಳ್ಳಬೇಕು? ತಾವು ದಯವಿಟ್ಟು ಹೇಳಿ. ಇದು ಒಂದು ಕಡೆಯಾದರೆ ಪ್ರಾಥಮಿಕ, ಮಾಧ್ಯಮಿಕ ಮತ್ತು ಖಾಸಗಿ ಶಿಕ್ಷಣ ಶಾಲೆಗಳ ಬಗ್ಗೆ ಇರುವ ನಿಮ್ಮ ನೀತಿ ಏನೆಂದು ನನಗೆ ಅರ್ಥವಾಗುತ್ತಿಲ್ಲ. You are supposed to be the No.1 Chief Minister as far as India is concerned. You are supposed to be the most progressive Chief Minister. ಆದರೆ, ನನಗೆ ಒಂದು ಅರ್ಥವಾಗದಿರುವಂಥಾದ್ದು,

ಏನೆಂದರೆ, ತಾವು ಈ ಖಾಸಗಿ ಶಿಕ್ಷಣ ಶಾಲೆಗಳ ಬಗ್ಗೆ ತಳೆದಿರುವ ಧೋರಣೆ ಏನಿದೆ, ಆ ಧೋರಣೆ ನನಗರ್ಥವಾಗುತ್ತಿಲ್ಲ. ಎನ್ ಜಿಇಎಫ್ ಕಾರ್ಖಾನೆಯನ್ನು ಖಾಸಗೀಕರಣ ಮಾಡಬೇಕೆಂದು ಹೇಳುತ್ತಾರೆ. ನಮ್ಮ ಕೈಗಾರಿಕಾ ಸಚಿವರಾದ ಮಾನ್ಯ ದೇಶಪಾಂಡೆಯವರು ತುದಿಗಾಲಿನಲ್ಲಿದ್ದಾರೆ. ಯಾವ್ಯಾವ ಫ್ಯಾಕ್ಟರಿಗಳನ್ನು ಎಷ್ಟು ಬೇಗ ಖಾಸಗೀಕರಣ ಮಾಡಬೇಕು ಎಂಬುದರ ಬಗ್ಗೆ ತುದಿಗಾಲಿನಲ್ಲಿದ್ದಾರೆ. ನನಗೆ ಗೊತ್ತಿದೆ. ಕ್ಯಾಬಿನೆಟ್‌ನಲ್ಲಿ ಇದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಕೆಲವರು ಇದನ್ನೆಲ್ಲಾ ಆದಷ್ಟು ಬೇಗ ಖಾಸಗೀಕರಣ ಮಾಡಬೇಕೆಂದು ಹೊರಟಿದ್ದಾರೆ. ಆದರೆ, ಇವೊತ್ತು ವಿಧಾನಪರಿಷತ್ತಿನ ಸದಸ್ಯರಾಗಿರುವ ಮಾನ್ಯ ಬಸವರಾಜ ಹೊರಟ್ಟಿಯವರ ನಾಯಕತ್ವದಲ್ಲಿ ಕರ್ನಾಟಕದ ಎಲ್ಲಾ ಮಠಾಧಿಪತಿಗಳೂ ಸಹ ಬಂದು, 'ಈ ಅನುದಾನವನ್ನು ಕಡಿಮೆ ಮಾಡಬೇಡಿ, ತಾವು ಮಾಡುತ್ತಿರುವ ನೀತಿ ಸರಿಯಿಲ್ಲ' ಎಂದು ತಮ್ಮನ್ನು ಪರಿಪರಿಯಾಗಿ ಬೇಡಿಕೊಂಡರು. ತಾವು ತಮ್ಮ ಪ್ರಾಥಮಿಕ ಶಿಕ್ಷಣ ಇಲಾಖೆಯ ಮಂತ್ರಿಗಳ ಖಾತೆಯನ್ನು ಬದಲಾವಣೆ ಮಾಡಿದ್ದೀರಿ. ಅವರು ಬೇಕೆಂದೇ ವಿವಾದದ ಸುಳಿಗಳನ್ನು ಎಬ್ಬಿಸುತ್ತಾರೆ. ಅವರು ಅಲ್ಲಿ ಹೋಗಿ ಒಂದು ಹೇಳಿಕೆ ಕೊಡುತ್ತಿದ್ದರು. ಇಲ್ಲಿ ಹೋಗಿ ಒಂದು ಹೇಳಿಕೆ ಕೊಟ್ಟರು. ಬಹುಶಃ ಅದಕ್ಕೋಸ್ಕರವೇ ಅವರಿಗೆ ವಹಿಸಿದ್ದ ಆ ಖಾತೆಯನ್ನು ನೀವು ಬದಲಾವಣೆ ಮಾಡಿದ್ದೀರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ, ಅವರಿಗೆ ಖಾತೆ ಕೊಡುವ ವಿಚಾರದಲ್ಲಿ ಪ್ರಮೋಷನ್ ಕೊಟ್ಟಿದ್ದೀರಿ. ಅದೇನು ಮಾಡುತ್ತಾರೊ ಅನ್ನೋದು ನನಗಂತೂ ಗೊತ್ತಿಲ್ಲ. ಆದರೆ, ತಾವು ಈ ವೇಕೆನ್ಸಿಗಳನ್ನು ಫಿಲ್-ಆಫ್ ಮಾಡಬಾರದು ಎನ್ನತಕ್ಕಂಥಾದ್ದನ್ನು ಹೇಳಿದ್ದೀರಿ. ವೇಕೆನ್ಸಿಗಳನ್ನು ಫಿಲ್-ಆಫ್ ಮಾಡದೆ ಹೋದರೆ ಹೇಗೆ ಈ ಶಾಲೆಗಳು ನಡೆಯಬೇಕು? ಸುಮಾರು ನಲವತ್ತು ವರ್ಷಗಳ ಕಾಲ ನೀವು ಈ ಸದನದಲ್ಲಿ ಕೆಲಸ ಮಾಡಿರತಕ್ಕಂಥವರು. ಇವೊತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ಮಾಡಿರತಕ್ಕಂಥ ಕೆಲಸ, ಕರ್ನಾಟಕದ ಸಾರ್ವಜನಿಕ ಜೀವನದಲ್ಲಿ ಮಾಡಿರತಕ್ಕಂಥ ಕೆಲಸ ಎಷ್ಟೊಂದು ಉದಾತ್ತವಾದುದು ಎನ್ನತಕ್ಕಂಥಾದ್ದು ತಮಗೆ ಗೊತ್ತಿದ್ದರೂ ಸಹ ಈ ವೇಕೆನ್ಸಿಗಳನ್ನು ಫಿಲ್-ಆಫ್ ಮಾಡುವುದಕ್ಕೆ ತಾವು ಏಕೆ ಅವಕಾಶ ಕೊಟ್ಟಿಲ್ಲ? ಯಾರು ನಿಮ್ಮ ಅಡ್ವೈಸರ್ ಎನ್ನುವುದು ಈ ವಿಚಾರದಲ್ಲಿ ನನಗೆ ಅರ್ಥವಾಗುತ್ತಿಲ್ಲ. ಆದಷ್ಟು ಬೇಗ ಈ ಟೀಚಿಂಗ್ ಸ್ಟ್ಯಾಫ್ ಅನ್ನು ರಿಕ್ರೂಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ತಾವು ಏನು ಬ್ಯಾನ್ ಮಾಡಿದ್ದೀರಿ, ಆ ಬ್ಯಾನ್ ಅನ್ನು ಲಿಫ್ಟ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಬಹುಶಃ ಆಗಸ್ಟ್ 19ನೇ ತಾರೀಖಿನಂದು ಏನೋ ಈ ಖಾಸಗಿ ಶಿಕ್ಷಣ ಸಂಸ್ಥೆಗಳವರೆಲ್ಲಾ ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಅನಿರ್ದಿಷ್ಟ ಕಾಲದವರೆಗೆ ಮುಚ್ಚಿಬಿಡಬೇಕೆಂದಿದ್ದಾರೆ. ಆದುದರಿಂದ, ದಯಮಾಡಿ ಇದರ ಬಗ್ಗೆ ತಾವು ಬಹಳ ದೊಡ್ಡ ವಿಚಾರವನ್ನಿಟ್ಟುಕೊಂಡು, ದೀರ್ಘಕಾಲದಲ್ಲಿ ಇದನ್ನು ಮಾಡಬೇಕೆಂದು ದೃಷ್ಟಿಯಿಟ್ಟುಕೊಂಡಿರುವ ಬಗ್ಗೆ ನಮ್ಮದೇನೂ ತಕರಾರಿಲ್ಲ. ಆದರೆ, ಒಂದು ಸಾರಿ ತಾವು ಅವರನ್ನು ಮಾತುಕತೆಗೆ ಕರೆದು ಮಾತನಾಡಿ ನಿಲ್ಲಿಸಿದ್ದೀರಿ. ಅದು ಸಾಲದು. ಅದನ್ನು ಮುಂದುವರೆಸಿಕೊಂಡು ಹೋಗಬೇಕು. ಅವರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಪಡಿಸುತ್ತೇನೆ.

ಇದಾದ ನಂತರ ಪೇಜ್ ನಂಬರ್ 26, ಡಿಮ್ಯಾಂಡ್ ನಂಬರ್ 25, ಇದರಲ್ಲಿ The KPCL has to pay a sum of Rs. 885 crores to Government towards

Interest on Principal. The Hon.ble Chief Minister is the Chairman of the Karantaka Power Corporation. Therefore, sanction has been accorded for tripartite adjustment between KPCL, Governemnt of Karnataka, and KPTCL for a sum of Rs. 885 crores. In order to carry out the adjustment, a sum of Rs. 842-68 crores, are requried. this is only a book adjustment and no cash out go is involved. Yes, I agree. ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಸದನ ಮುಗಿಯುತ್ತಾ ಬಂದಿದೆ. ಇನ್ನೆರಡು ದಿವಸಗಳಿವೆ. ನಿನ್ನೆ ದಿನ ಈ ಸದನದ ಗೌರವಾನ್ವಿತ ಸದಸ್ಯರು, ಅವರು ಮಂತ್ರಿಗಳಾಗಿದ್ದರು. ಈಗ ಕೆಪಿಟಿಸಿಎಲ್ ಅಧ್ಯಕ್ಷರನ್ನಾಗಿ ರಾಜಕೀಯ ಕಾರಣಕ್ಕೋಸ್ಕರ ಅವರನ್ನು ಅಪಾಯಿಂಟ್ ಮಾಡಿದ್ದೀರಿ, ಸಂತೋಷ, ಮಾಡಿ. ಅವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಪವರ್ ಅನ್ನು 30 ಪರ್ಸೆಂಟ್ ಕಟ್ ಮಾಡುತ್ತೇವೆ ಎಂದಿದ್ದಾರೆ. We can understand the situation because of this drought condition in Karnataka and also elsewhere in the country. ಆದರೆ, ಈ ಪವರ್ ಕಟ್ ಮಾಡುವ ಸಂದರ್ಭದಲ್ಲಿ ಇವೊತ್ತಿನ ಬರಗಾಲದಲ್ಲಿ ಫುಡ್ ಗ್ರೇನ್ಸ್ ಗೆ ನಮಗೆ ತೊಂದರೆಯಾಗದಿರಬಹುದು. ಆದರೆ, ಕುಡಿಯುವ ನೀರಿಗೆ ಬಹಳ ತೊಂದರೆಯಾಗುತ್ತದೆ ಎನ್ನುವುದನ್ನು ತಾವು ಗಮನದಲ್ಲಿಟ್ಟುಕೊಂಡು ಇವೊತ್ತು ಹಳ್ಳಿಗಳಲ್ಲಿ ಕನಿಷ್ಟಪಕ್ಷ ತ್ರೀ-ಫೇಸ್ ಕರೆಂಟ್ ಅನ್ನು ಬೆಳಿಗ್ಗೆ ಎರಡು ಗಂಟೆ ಮತ್ತು ಸಾಯಂಕಾಲ ಎರಡು ಗಂಟೆ ಬರುವಂತೆ ಮಾಡಬೇಕೆಂದು ನಾನು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. ನೀವು ಪವರ್ ಕಟ್ ಅನ್ನು ಬೇರೆ ಕಡೆಗಳಲ್ಲಿ ಮಾಡುವಂಥಾದ್ದರ ಬಗ್ಗೆ ನಿರ್ಧಿಷ್ಟಾಗಿ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುವುದಿಲ್ಲ. ಏಕೆಂದರೆ, power is a very vast subject. ಅದರ ಬಗ್ಗೆ ಪ್ರತ್ಯೇಕವಾದ ಒಂದು ಡಿಬೇಟ್ ಆಗಬೇಕಾಗಿತ್ತು. ಕಾರಣಾಂತರಗಳಿಂದ ನಾವು ಸದನದ ಈ ಸಮಯವನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕಾಗಿಲ್ಲ. ಈ ಬಜೆಟ್ ಅಧಿವೇಶನದಲ್ಲಿ ನಾವು ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದಕ್ಕಾಗಿಲ್ಲ. ಹಲವು ಕಾರಣಗಳು ಇವೆ. ಅದನ್ನು ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ, ಆದರ ಜೊತೆಗೆ ತಾವು ಪವರ್ ಹೈಕ್ ಮಾಡಲು ಹೊರಟಿದ್ದೀರಿ. ನನಗೆ ಅರ್ಥವಾಗದಿರುವಂಥಾದ್ದು, ಎಂದರೆ, ಈ ಡ್ರೌಟ್ ಸಿಚ್ಯುಯೇಷನ್ ನಲ್ಲಿ, ಇಂಡಸ್ಟ್ರೀಯಲ್ ರಿಸಿಶನ್ ಇರತಕ್ಕಂಥ ಸಂದರ್ಭದಲ್ಲಿ ನೀವು ಪವರ್ ಹೈಕ್ ಮಾಡಿದರೆ ನಿಮಗೆ ಪವರ್ ಹೈಕ್‌ನ ರಿಯಲೈಜೇಷನ್ ಹೇಗಾಗುತ್ತದೆ? ನಿಮಗೆ ಯಾವ ಇಂಡಸ್ಟ್ರಿಯವರು ಕೊಡುತ್ತಾರೆ? ಇದು ನಮಗೆ ಅರ್ಥವಾಗದಿರುವಂಥ ವಿಚಾರವಾಗಿದೆ. ಆದ್ದರಿಂದ, ಯಾವುದೇ ಕಾರಣಕ್ಕೂ ಸಹ ಇವೊತ್ತು ಪವರ್ ಹೈಕ್ ಅನ್ನು ಈ ಸಂದರ್ಭದಲ್ಲಿ ನೀವು ಮಾಡುವುದಕ್ಕೆ ಹೋಗಬೇಡಿ. ಮಾನ್ಯ ಅಧ್ಯಕ್ಷರೆ, ನಿಮಗೆ ಗೊತ್ತಿರುವಂತೆ agriculture gorwth is directly connected with the industrial growth. ಅಗ್ರಿಕಲ್ಚರ್ ಪ್ರೊಡಕ್ಷನ್ ಯಾವಾಗ ಆಗುವುದಿಲ್ಲವೋ, ರೈತರು ಯಾವಾಗ ಹಳ್ಳಕ್ಕೆ ಬಿದ್ದರೋ ಆಗ ಎಲ್ಲವೂ ಸಹ it will have an effect on the agriculture and industrial sector also. ಈ ಸಂದರ್ಭದಲ್ಲಿ ನೀವು ಪವರ್ ಹೈಕ್ ಮಾಡಲು ಹೊರಟರೆ ಹೇಗಾಗುತ್ತದೆ? ಇದನ್ನು ನಾವು ಸಂಪೂರ್ಣವಾಗಿ ವಿರೋಧ ಮಾಡುತ್ತೇವೆ. ಯಾವುದೇ ಕಾರಣಕ್ಕೂ ಸಹ ವಿದ್ಯುಚ್ಛಕ್ತಿ ಮಂಡಳಿಯವರಿಗೆ ತಾವು ಸಹಾಯಧನ

ಕೊಟ್ಟು ಈ ಬರಗಾಲದ ಸಂದರ್ಭದಲ್ಲಿ ಬಡವರ ಗಾಯದ ಮೇಲೆ ಬರೆ ಎಳೆಯಲು ಹೋಗಬೇಡಿ ಎನ್ನುವ ಮನವಿ ಮಾಡುತ್ತಿದ್ದೇನೆ. ಮತ್ತು ನನಗೆ ಇನ್ನೂ ಅರ್ಥವಾಗದಿರುವುದೇನೆಂದರೆ, ಸಿಸ್ಟಂ ಲಾಸಸ್ ಬಗ್ಗೆ. ನಾನು ಕೆಇಆರ್‌ಸಿ ಮುಂದೆ ಪಬ್ಲಿಕ್ ಇಂಟ್ರೆಸ್ಟ್ ನಿಂದಾಗಿ ಒಂದು ಪಿಟಿಷನ್ ಹಾಕಿದ್ದೆ. ಕೆಪಿಟಿಸಿಎಲ್ ಅನ್ನು ಆಗ ಇನ್ನೂ ನಾಲ್ಕು ಕಂಪನಿಗಳನ್ನಾಗಿ ಮಾಡಿರಲಿಲ್ಲ. ಇದು ಸುಮಾರು ಎರಡು ತಿಂಗಳುಗಳ ಹಿಂದಿನ ವಿಚಾರ. ಸಿಸ್ಟಂ ಲಾಸಸ್ 18 ಪರ್ಸೆಂಟ್ ಇದ್ದದ್ದು, 29 ಪರ್ಸೆಂಟ್ ಇದ್ದದ್ದು, ಈಗ 40 ಪರ್ಸೆಂಟ್‌ಗೆ ಹೋಗಿದೆಯೆಲ್ಲಾ ಇದಕ್ಕೆ ಕಾರಣವೇನು? Again it is a debatable thing. ಇದನ್ನು ಪ್ರೈವಟೈಸ್ ಮಾಡಲು ಹೊರಟಿದ್ದೇವೆ. ಪ್ರೈವೇಟ್ ನವರು ಒಂದು ಪಾರ್ಟಿಸಿಪೇಟ್ ಮಾಡಬೇಕಾದರೆ, ಬಂಡವಾಳ ತೊಡಗಿಸಬೇಕಾದರೆ ಡಿಸ್ಟ್ರಿಬ್ಯೂಷನ್ ಸಿಸ್ಟಂನಲ್ಲಿ ಅದಕ್ಕೋಸ್ಕರವಾಗಿ ರಿಯಾಲಿಟಿಯನ್ನು ನಾವು ತೋರಿಸಬೇಕು. ನಮ್ಮ ಸರ್ಕಾರವಿದ್ದಾಗ ರಿಯಾಲಿಟಿ ತೋರಿಸುತ್ತಿರಲಿಲ್ಲ, ಹಿಡನ್ ಲಾಸಸ್ ಹಾಗೇ ಇಟ್ಟುಕೊಂಡಿದ್ದಿರಿ, ಪಬ್ಲಿಕ್ ಪರ್ಪಸ್ ಗೋಸ್ಕರ 19 ಪರ್ಸೆಂಟ್ ತೋರಿಸುತ್ತಿದ್ದೀರಿ ಎನ್ನತಕ್ಕಂಥ ವಾದವನ್ನು ಕೆಪಿಟಿಸಿಎಲ್ ಅಧಿಕಾರಿಗಳು ಕೆಇಆರ್‌ಸಿ ಮುಂದಿಟ್ಟರು. ಆದರೆ, ನನಗೆ ಗೊತ್ತಿರುವಂತೆ something is wring somewhere. ನನಗನ್ನಿಸತಕ್ಕಂಥಾದ್ದು. ಆಡಳಿತದಲ್ಲಿ ಚುರುಕು ಮುಟ್ಟಿಸುವ ದೃಷ್ಟಿಯಿಂದಾಗಿ ಈಗ ಈ ನಾಲ್ಕು ಕಂಪನಿಗಳನ್ನು ಮಾಡಿದ್ದೀರಿ. ಈ ನಾಲ್ಕು ಕಂಪನಿಗಳಿಗೆ ನೀವು ನೇಮಿಸಿರುವ ಅಧಿಕಾರಿಗಳ ಜಾತಕಗಳನ್ನು ನೀವೇ ತೆಗೆದು ನೋಡಿ. ಅವರ ಮೇಲೆ ಎಷ್ಟೊಂದು, ಯಾವ್ಯಾವ ಚಾರ್ಜಸ್ ಇದೆ? ಲೋಕಾಯುಕ್ತದ ಮುಂದೆ ಏನೇನು ಕೇಸ್‌ಗಳಿವೆ? ಅಂತಹ ಅಧಿಕಾರಿಗಳನ್ನು ನೀವು ನೇಮಿಸಿ ಕೆಪಿಟಿಸಿಎಲ್‌ನ ಈ ನಾಲ್ಕು ಕಂಪನಿಗಳು ಉದ್ಧಾರವಾಗುತ್ತದೆಂದರೆ ಹೇಗೆ ಸಾಧ್ಯ? ಮತ್ತು ಅದಕ್ಕೆ ನೀವು ಡೈರೆಕ್ಟರ್‌ಗಳನ್ನು ಅಪಾಯಿಂಟ್ ಮಾಡಿದ್ದೀರಲ್ಲಾ, ಯಾರು ಪವರ್ ಸಪ್ಲೈ ಮಾಡುತ್ತಾರೆ, ಅವರನ್ನು ಸಹ ಒಬ್ಬ ಡೈರೆಕ್ಟರ್ ಆಗಿ ನೇಮಕ ಮಾಡಿದ್ದೀರಿ ಯಾವ ಉದ್ದೇಶಕ್ಕೋಸ್ಕರ ನೇಮಕ ಮಾಡಿದ್ದೀರಿ? ಇದು ನಮಗೆ ಅರ್ಥವಾಗದಿರುವ ವಿಚಾರವಾಗಿದೆ. ನಾನು ನಿಮ್ಮ ಟ್ರಾನ್ಸ್ ಪರೆನ್ಸಿ ಆಕ್ಟ್ ಕೆಳಗಡೆ ಆ ಕುರಿತು ಪ್ರತ್ಯೇಕವಾಗಿ ಚರ್ಚಿಸಲು ಅವಕಾಶ ಮಾಡಿಕೊಡಬೇಕು. ಆ ಆಕ್ಟ್ ಕೆಳಗಡೆ ಇವರು 4-5 ವಿಚಾರಗಳಲ್ಲಿ ಎಕ್ಸೆಂಷನ್ ಕೊಟ್ಟಿದ್ದಾರೆ. ಆ ನಾಲ್ಕೈದು ಎಕ್ಸೆಂಷನ್ ಕೊಟ್ಟಿರುವುದರ ಬಗ್ಗೆಯೂ ಸಹ ನನಗೆ ಅನೇಕ ಸಂಶಯಗಳು ಉದ್ಭವವಾಗುತ್ತದೆ. ಈ ನುಸಿರೋಗದ ಔಷಧಿ ತೆಗೆದುಕೊಳ್ಳುವ ವಿಚಾರದಲ್ಲಿ ಟ್ರಾನ್ಸ್‌ಪರೆನ್ಸಿ ಆ್ಯಕ್ಟ್‌ಗೆ ಎಕ್ಸೆಂಪೆಷನ್ ಕೊಟ್ಟಿದ್ದೀರಿ. ಅದೇ ರೀತಿ ಕೆಪಿಸಿಎಲ್‌ಗೆ ನೀವು ಕೋಲ್ ಅನ್ನು ಪರ್ಚೇಸ್ ಮಾಡುವ ವಿಚಾರದಲ್ಲಿ ಕೇಂದ್ರ ಸರ್ಕಾರದ ಯಾವುದೋ ಸಂಸ್ಥೆಯವರು ಕೋಲ್ ಸಪ್ಲೈ ಮಾಡುತ್ತೇರೆಂದು ಅದರಲ್ಲಿ ಟ್ರಾನ್ಸ್‌ಪರೆನ್ಸಿ ಆ್ಯಕ್ಟ್‌ಗೆ ನೀವು ಎಕ್ಸೆಂಷನ್ ಕೊಟ್ಟಿದ್ದೀರಿ.

4.40 ಪಿ.ಎಂ.

ನನಗೆ ಗೊತ್ತಿರುವ ಹಾಗೆ ನಾನು ಅಧಿಕೃತವಾಗಿ ಈ ವಿಚಾರವನ್ನು ತಿಳಿದುಕೊಂಡಿದ್ದೇನೆ, ತಮಗೆ ಮೋಸ ಮಾಡಿದ್ದಾರೆ. ಅವರು ಕೇಂದ್ರ ಸರ್ಕಾರದ ಸಂಸ್ಥೆ ಹೆಸರಿನಲ್ಲಿ ಮಧ್ಯಸ್ಥರುಗಳು ಕಲ್ಲಿದ್ದಲು ಬದಲಾಗಿ ಬೂದಿಯನ್ನು ಕೊಟ್ಟಿದ್ದಾರೆ ಎಂದು ನಾನು ಹೇಳುತತಿದ್ದೇನೆ. ಅದು ಕಲ್ಲಿದ್ದಲು ಅಲ್ಲ, ಅದು ಬೀದಿ. ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಆಗಿದೆ. ಇದರ ಬಗ್ಗೆ ತನಿಖೆಯಾಗಬೇಕು ಎನ್ನತಕ್ಕಂಥ ಆಗ್ರಹವನ್ನು ನಾನು ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೇ

ಇದರ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು. ಫೈನಾನ್ಸ್ ಮಿನಿಸ್ಟರ್ ಸಹ ನೀವೇ, ಪವರ್ ಕಾರ್ಪೊರೇಷನ್ ಛೇರ್ಮನ್ ಕೂಡ ನೀವೇ, transparency act ಕೆಳಗೆ exemption ಕೊಟ್ಟವರೂ ಸಹಾ ನೀವೇ, ಆದ್ದರಿಂದ ಇದರ ಸಂಪೂರ್ಣ ಜವಾಬ್ದಾರಿಯನ್ನು ತಾವೇ ಹೊತ್ತುಕೊಳ್ಳಬೇಕು. ಇದರ ಬಗ್ಗೆ ತನಿಖೆ ಆಗಬೇಕೆಂದು ಮತ್ತ ಮೂಲಕ ಒತ್ತಾಯ ಮಾಡಲಿಕ್ಕೆ ನಾನು ಬಯಸುತ್ತೇನೆ, ಮಾನ್ಯ ಅಧ್ಯಕ್ಷರೇ, ಇದಾದ ಮೇಲೆ ಕೆ.ಪಿ.ಟಿ.ಸಿ.ಎಲ್.ನ ಸಿಸ್ಟಮ್ ಲಾಸಸ್‌ಗಳೇನೂ ಇಂಪ್ರೂವ್ ಮೆಂಟ್ ಆಗಿಲ್ಲ, ಸಿಸ್ಟಮ್ ಲಾಸಸ್ ಜಾಸ್ತಿಯಾಗುತ್ತಿದೆ. ಟಿ ಅಂಡ್ ಡಿ ಲಾಸಸ್, ಟ್ರಾನ್ಸ್ ಮಿಷನ್ ಅಂಡ್ ಸಪ್ಲೈ, ಇದರ ಬಗ್ಗೆ ತಾವು ತಕ್ಷಣ ತೀವ್ರವಾದ ಗಮನ ಹರಿಸಬೇಕು ಎನ್ನತಕ್ಕಂಥ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ನಾಲ್ಕೈದು ದಿನಗಳ ಕಾಲ ದೆಹಲಿಯಲ್ಲಿದ್ದರು. ಪ್ರಧಾನಿಗಳನ್ನು ಭೇಟಿ ಮಾಡಿದ್ದರು. ಸಾಮಾನ್ಯವಾಗಿ ಇಂತಹ ಸಂದರ್ಭದಲ್ಲಿ, ಪ್ರಧಾನಿಗಳನ್ನು ಭೇಟಿ ಮಾಡಿ ಬಂದ ಮೇಲೆ, ರಾಜ್ಯದ ಸಮಸ್ಯೆಗಳ ಬಗ್ಗೆ ತಾವು ಚರ್ಚೆ ಮಾಡಿ ಬಂದಮೇಲೆ, ಸದನ ನಡೆಯುತ್ತಿದ್ದರೆ, ಸದನದಲ್ಲಿ ಹೇಳಿಕೆಗಳ ಮೂಲಕ ಅಲ್ಲಿ ನಡೆದಂತಹ ವಿಚಾರಗಳ ಮೂಲಕ ವಿಶ್ವಾಸಕ್ಕೆ ತೆಗೆದುಕೊಳ್ಳತಕ್ಕದ್ದನ್ನು ನಾವು ನೋಡಿದ್ದೇವೆ. ಮಾನ್ಯ ಅಧ್ಯಕ್ಷರೇ, ಬರಗಾಲದ ಬಗ್ಗೆ ಕಾಂಗ್ರೆಸ್ ಅಧ್ಯಕ್ಷರು, ನನಗೆ ಒಂದು ಸ್ವಲ್ಪ ಬೇಜಾರೂ ಆಯಿತು, ಒಂದು ಕಾಲದಲ್ಲಿ ಮಾನ್ಯ ರಾಮಲಿಂಗಾರೆಡ್ಡಿಯವರೇ, 27 ರಾಜ್ಯಗಳಲ್ಲಿ 25 ರಾಜ್ಯಗಳಲ್ಲಿ ಕಾಂಗ್ರೆಸ್‌ನ ಮುಖ್ಯಮಂತ್ರಿಗಳು ಇರುತ್ತಿದ್ದರು. ಇವತ್ತು ಆರೇ ರಾಜ್ಯಗಳಲ್ಲಿ ಇರತಕ್ಕಂಥದ್ದು, ನೀವು ಆರು ಜನ ಮುಖ್ಯಮಂತ್ರಿಗಳು ಸೇರಿಕೊಂಡು.....

ಶ್ರೀ ಮಲ್ಲಿಕಾರ್ಜುನ ಖರ್ಗೆ : 14 ರಾಜ್ಯಗಳಲ್ಲಿ ಇದ್ದಾರೆ, ಅದನ್ನು ಬಿಟ್ಟು ಆರೇ ರಾಜ್ಯಗಳಲ್ಲಿ ಇದ್ದಾರೆ ಎಂದು ಹೇಳುತ್ತೀರಲ್ಲಾ, ನೀವು ಒಂದು ಕಡೆಯಲ್ಲೂ ಇಲ್ಲ, ಅದಕ್ಕೇ ನಿಮಗೆ ನೆನಪಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾವು ಇರಲಿಕ್ಕೆ ಸಾಧ್ಯವೇ ಇಲ್ಲ ಬಿಡ. ನಾವು ಅದನ್ನು ಒಪ್ಪಿಕೊಂಡು ಬಿಟ್ಟಿದ್ದೇವೆ. ಬರಗಾಲ ಪೀಡಿತ ಪ್ರದೇಶದ ಆರು ಜನ ಮುಖ್ಯಮಂತ್ರಿಗಳು ನಿನ್ನೆ ಕಾಂಗ್ರೆಸ್ ಅಧ್ಯಕ್ಷರ ನಾಯಕತ್ವದಲ್ಲಿ ಪ್ರದಾನಿಗಳನ್ನು ಭೇಟಿ ಮಾಡಿದ್ದೀರಿ. ನನಗನ್ನಿಸುತ್ತದೆ, ನೀವು ಕರ್ನಾಟಕದ ಮುಖ್ಯಮಂತ್ರಿಗಳಾಗಿ, ಆ ಸಂದರ್ಭದಲ್ಲಿ ಏನಾಯಿತು, ಅದರ ಬಗ್ಗೆ ಕೇಳುವುದಕ್ಕೆ ನನಗೆ ಹಕ್ಕಿಲ್ಲ, ಇಲ್ಲಿ ಈ ಸದನದ ಮೂಲಕ ಕಾಂಗ್ರೆಸ್ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಆಗಿರತಕ್ಕಂಥ ವಿಚಾರಗಳ ಬಗ್ಗೆ ನಾನ್ಯಾರು ಕೇಳುವುದಕ್ಕೆ? ಅದನ್ನು ನಾನು ಕೇಳುವುದಕ್ಕೆ ಹೋದರೆ ನಿಮಗೆಲ್ಲಾ ಸಿಟ್ಟು ಬಂದು ಬಿಡುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವೂ ನಿಮ್ಮನ್ನು ಕೇಳುವುದಿಲ್ಲ, ನೀವೂ ನಮಗೂ ಕೇಳಲಿಕ್ಕೆ ಹೋಗಬೇಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಮಗೆ ನೀವು ಕೇಳುವುದಕ್ಕೆ ಆಗುವುದೇ ಇಲ್ಲ. ನಾವು ಅವರನ್ನು ....

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಣ್ಣ ಸಣ್ಣ ಮಾತಿಗೆ ಈ ಸ್ಲಮ್ ಏರಿಯಾದಲ್ಲಿ ಏನಾದರೂ ಗಲಾಟೆ ಆದರೆ ಸತ್ಯಾಗ್ರಹ ನಡೆಯುತ್ತವೆ, ಮತ್ತೆ ಎಲ್ಲಾದರೂ ಆದರೆ ಮಹಾತ್ಮಾ

ಗಾಂಧಿಯವರ ಸ್ಟಾಚ್ಯೂ ಮುಂದೆ ನಡೆಯುತ್ತವೆ. ಅದಕ್ಕಾಗಿ ನಾವು ನಿಮಗೂ ಕೇಳುವುದಿಲ್ಲ, ನೀವು ನಮಗೂ ಕೇಳಬೇಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸ್ವಾಮಿ ನೋಡಿ, ನೀವು ಅವರ ಕಳಕಳಿಯನ್ನು ಅರ್ಥ ಮಾಡಿಕೊಳ್ಳಬೇಕು. ಈಗ ಸೀಮೆಎಣ್ಣೆ ಬೆಲೆ ಸರ್ಕಾರ ಜಾಸ್ತಿ ಮಾಡಿದ್ದು ತಪ್ಪಲ್ಲದೇ ಸ್ವಾಮಿ, ನೀವೇ ಹೇಳಿ? ನೀವು ಹೋಗುತ್ತೀರಲ್ಲಾ ವಾರಕ್ಕೊಮ್ಮೆ ಒಂದು ಬಾರಿ ನಿಮ್ಮ ಕ್ಷೇತ್ರಕ್ಕೆ, ನೀವು ಎಷ್ಟೊಂದು ಜನಗಳ ಜೊತೆ ಸಂಪರ್ಕ ಇಟ್ಟಕೊಂಡಿದ್ದೀರಿ? ಜನ ಏನು ಅಂತ ಬಯ್ಯುತ್ತಿದ್ದಾರೆ? ನಾವೂ ನೀವೂ ಸೀಮೆಎಣ್ಣೆ ಡಬ್ಬವನ್ನು ತಲೆಯ ಮೇಲಿಟ್ಟುಕೊಂಡು ಹೋಗಿದ್ದೀವಾ? ಅಟ್‌ಲೀಸ್ಟ್ ಅವರು ಮಾಡಿದ್ದಾರೆ. we have to appreciate his concern for that. ಅದರಲ್ಲಿ ಕ್ರಿಟಿಸೈಸ್ ಮಾಡತಕ್ಕದ್ದು ಏನಿದೆ? ಮಾನ್ಯ ಅಧ್ಯಕ್ಷರೇ, ಹಾಗಾದರೆ ಒಂದು ನಿಮಿಷ ತಾಳಿ, ಈಗ ರೈಲ್ವೆ ಟ್ರಾಕ್ ಪಕ್ಕದಲ್ಲಿ ಗುಡಿಸಲುಗಳು ಇದ್ದವು, ಅವು ಇದ್ದಿದ್ದು ನಿಜ. ಅದು ಸರಿಯೋ ತಪ್ಪೋ ಅದರ ಬಗ್ಗೆ ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಅವರನ್ನೆಲ್ಲಾ ನೀವು ರಾತ್ರೋರಾತ್ರಿ, ಆಲ್ಟರ್‌ನೇಟಿವ್ ಜಾಗವನ್ನೂ ಕೊಡದೇ ಬೀದಿಗೆ ತೆಗೆದುಕೊಂಡು ಹೋಗಿ ಬಿಸಾಕಿ ಬಿಟ್ಟಿರಲ್ಲಾ, ಅವರು ಎಲ್ಲೋ ಇದ್ದವರು, ಅವರ ಆರೋಗ್ಯ ಚೆನ್ನಾಗಿರಲಿಲ್ಲ, ಆ ಕಡೆಗೆ ಎನ್.ಆರ್. constituency ಎಲೆಕ್ಷನ್ ನಡೆಯುತ್ತಿತ್ತು, ಅವರು ಬಂದು ಒಂದು ಸಾವಿರವೋ ಎರಡು ಸಾವಿರವೋ ಮೂಟೆ ಅಕ್ಕಿ ತೆಗೆದುಕೊಂಡು ಬಂದು, ಅವರನ್ನೆಲ್ಲಾ ಸೇರಿಸಿ ವಿತರಿಸಿದರು. ಬೆಂಗಳೂರು ಶಾಸಕರು ಮಾಡುವ ಕೆಲಸ ಸ್ವಾಮಿ ಅದು. ಅವರು ಮಾಡತಕ್ಕಂಥ ಅವಶ್ಯಕತೆ ಏನಿತ್ತು? You must appreciate his concern for that.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದಕ್ಕೇ ನಾನು ಆ ಗೋಜಿಗೆ ಬರುವುದಿಲ್ಲ ಎಂದು ಹೇಳಿದೆನಲ್ಲಾ ನೀವು ಹೇಳಿದ್ದಕ್ಕೆ ನಾನು ಹೇಳಿದೆ ಅಷ್ಟೇ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಗೋಜಿಗೆ ಬರುವುದಿಲ್ಲ ಎಂದ್ಹೇಳಿ ಅವರ ಹೆಸರು ಹೇಳದೇ ಹೇಳುತ್ತಿದ್ದೀರಲ್ಲಾ. ಮಾನ್ಯ ಅಧ್ಯಕ್ಷರೇ, ನಾನು ಡಿಫೆಂಡ್ ಮಾಡಿಕೊಳ್ಳುತ್ತೇನೋ ಇಲ್ಲವೋ ಎನ್ನುವುದನ್ನು ಟೆಸ್ಟ್ ಮಾಡಿಕೊಳ್ಳುವುದಕ್ಕೆ ಅವರು ಈ ಮಾತನ್ನು ಹೇಳುತ್ತಿದ್ದಾರೆ. ನೀವು ಮಾಡುವುದಕ್ಕೆ ಆಗುವುದಿಲ್ಲ ಅದು. ಅದು ಏನೇ ಇರಲಿ, ಈಗ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಲಿಕ್ಕೆ ಬಯಸತಕ್ಕದ್ದು ಏನೆಂದರೆ, ನೀವು ಪ್ರಧಾನಿಗಳನ್ನು ಭೇಟಿ ಮಾಡತಕ್ಕಂಥ ಸಂದರ್ಭದಲ್ಲಿ ಪ್ರಧಾನಿಗಳು ಏನು ಭರವಸೆಯನ್ನು ಕೊಟ್ಟಿದ್ದಾರೆ ಎನ್ನತಕ್ಕಂಥಾದ್ದು ನಮಗೆ ಬಹಳ ಮುಖ್ಯ. ಈಗ ಶಾಸಕರು ನಾವು 8ನೇ ತಾರೀಖು ಅಸೆಂಬ್ಲಿ ಮುಗಿದ ತಕ್ಷಣ ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗುತ್ತೇವೆ. ಹೋದ ತಕ್ಷಣವೇ, ಭಗವಂತನ ದಯೆಯಿಂದ ಮಳೆ ಬಂದರೆ, ಈಗಲೂ ಸಹಿತ ಕೆಲವು ಜಿಲ್ಲೆಗಳಲ್ಲಿ ಕುಡಿಯುವ ನೀರಿಗೇನೂ ತೊಂದರೆ ಇಲ್ಲವೆಂದು ನಾನು ಅಂದುಕೊಂಡಿದ್ದೇನೆ, ಪರಿಸ್ಥಿತಿ ಅನುಕೂಲ ಆಗಬಹುದು. ಆದರೆ ವಿದ್ಯುಚ್ಛಕ್ತಿ ಅಭಾವ ಮತ್ತು ಕುಡಿಯುವ ನೀರಿಗೆ ತೀವ್ರವಾದ ಅಭಾವ ಆಗುತ್ತದೆ ಎನ್ನತಕ್ಕಂಥಾದ್ದನ್ನು ತಾವೂ ಸಹಿತ ಒಪ್ಪುತ್ತೀರಿ. ಮಾನ್ಯ ಅಧ್ಯಕ್ಷರೇ, ತಾವು ಗಮನಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಒಂದು ಭರವಸೆಯನ್ನು ಕೊಟ್ಟಿರಿ. ಈಗ ಶಾಸಕರುಗಳ ಅಧ್ಯಕ್ಷತೆಯಲ್ಲಿ ಬರಗಾಲದ ಪರಿಸ್ಥಿತಿಯನ್ನು ನಿಭಾಯಿಸಲಿಕ್ಕೆ ಒಂದು ಸಮಿತಿಯನ್ನು ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ನೀವು ಹೇಳಿದ್ದಿರಿ. ಇದುವರೆಗೂ ಆ ಸಮಿತಿಗಳನ್ನು ಮಾಡುವುದಕ್ಕೆ ಆಗಿಲ್ಲ. ನೀವು ನಮ್ಮನ್ನು ಮಾಡದಿದ್ದರೂ

ಪರವಾಗಿಲ್ಲ, ಆಡಳಿತ ಪಕ್ಷದ ಶಾಸಕರುಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ತಕ್ಷಣ ಮಾಡತಕ್ಕದ್ದು ಸೂಕ್ತ. ನಮ್ಮ ಕಡೆ ಬೇಕಾದರೆ ಆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳನ್ನೇ ಹಾಕಿ. ನಾವು ಅವರ ಕೈ ಕೆಳಗೇ ಕೆಲಸ ಮಾಡುತ್ತೇವೆ. ನಮ್ಮದೇನೂ ತಕರಾರು ಇಲ್ಲ.

ಶ್ರೀ ಎಂ. ಶಿವಣ್ಣ : ಈಗಾಗಲೇ ಮಾಡಿದ್ದಾರಲ್ಲಾ, ಈ ಬರ ಪರಿಹಾರದ ವಿಚಾರದಲ್ಲಿ ಪ್ರತಿ ತಾಲ್ಲೂಕಿನಲ್ಲೂ ಟಾಸ್ಕ್ ಫೋರ್ಸ್ ಕಮಿಟಿಗಳಿವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಏನೋ ಸ್ವಾಮಿ, ಆಕಸ್ಮಿಕವಾಗಿ ನಮಗೂ ಒಂದೈದು ಸಾರಿ ನಮ್ಮ ಕ್ಷೇತ್ರದಿಂದ ಗೆಲ್ಲಿಸಿ ಕಳುಹಿಸಿದ್ದಾರೆ. ನಮಗೆ ಗೊತ್ತಿಲ್ಲ ಅದು ಯಾವುದು ಫೋರ್ಸ್ ಇದೆಯೋ? ನಿಮ್ಮ ಸರ್ಕಾರದಲ್ಲಿ ಮಾತೆತ್ತಿದರೆ ಟಾಸ್ಕ್ ಫೋರ್ಸ್.

ಶ್ರೀ ಎಂ. ಶಿವಣ್ಣ : ನಮ್ಮನ್ನೆಲ್ಲಾ ಕರೆದು ಮಾಡುತ್ತಿದ್ದಾರೆ. ನಾವೆಲ್ಲಾ ಸಮಿತಿಯಲ್ಲಿ ಇದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅವು ನಮ್ಮಲ್ಲಿ ಇಲ್ರಿ. ದಯವಿಟ್ಟು ನಾನು ಹೇಳುವುದನ್ನು ಕೇಳಿ. ನೀವು ಸುಮ್ಮನೆ ಇದೆ ಎಂದು ಹೇಳಿದರೆ ಹೇಗೆ? ಆ ಬಗ್ಗೆ ತೋರಿಸಿ ಗೌರ್ನಮೆಂಟ್ ಆರ್ಡರ್. ಅದು ಆಗಿಲ್ಲ, ನನಗೆ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಇನ್ನೂ ಶಾಸಕರ ಒಂದು ಅಧ್ಯಕ್ಷತೆಯಲ್ಲಿ ಈ ತರಹದ ಸಮಿತಿಗಳು ಆಗಿಲ್ಲ. ಮಾನ್ಯ ಕರಿಯಣ್ಣನವರೇ, ದಯವಿಟ್ಟು ತಾವು ಕುಳಿತುಕೊಳ್ಳಿ. ನಾನು ಮುಗಿಸಿ ಬಿಡುತ್ತೇನೆ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ, ಜಿಲ್ಲಾಧಿಕಾರಿಗಳು ನಮಗೆ ಮೀಟಿಂಗ್ ಕರೆದು ತಕ್ಷಣ ರಿಪೋರ್ಟ್ ಕಳುಹಿಸಿ, ನಿಮ್ಮ ಅಧ್ಯಕ್ಷತೆಯಲ್ಲಿ ತಹಸೀಲ್ದಾರ್ ರವರನ್ನು ಕನ್ವೀನರ್ ಮಾಡಿ ಕೊಟ್ಟಿದ್ದೇವೆ. ನೀವು ತಕ್ಷಣ ಮೀಟಿಂಗ್ ಮಾಡಿ ಅದರ ವರದಿಯನ್ನು ಕಳುಹಿಸಿಕೊಡಿ ಎಂದ್ಹೇಳಿ ಆಲ್‌ರೆಡಿ ನಮಗೆ ಇಂಟಿಮೇಷನ್ ಮಾಡಿದ್ದಾರೆ. ಕಮಿಟಿ ಇದೆ. ನಿಮ್ಮಲ್ಲಿ ಏಕೆ ಆಗಿಲ್ಲವೋ ಗೊತ್ತಿಲ್ಲ. ಅದು ....

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಮ್ಮ ಜಿಲ್ಲಾ ಮಂತ್ರಿಗಳು ನಿಮ್ಮ ಪಕ್ಷದಲ್ಲೇ ಇದ್ದಾರೆ. ಆ ವಿಶ್ವಾಸದ ಮೇಲೆ ನಮ್ಮಲ್ಲಿ ಅದು ಆಗಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಹೋಗಲಿ ಬಿಡಿ. ಆಮೇಲೆ ಬಹಳ ಆಶ್ಚರ್ಯಕರವಾದ ವಿಚಾರ ಎಂದರೆ, ಮುಖ್ಯಮಂತ್ರಿಗಳು ಗಮನಿಸಬೇಕಾಗಿರುವುದು, ತಾವು ಹೇಳಿದ್ದೀರಿ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡುತ್ತೇನೆ ಎಂದ್ಹೇಳಿ. ಇತ್ತೀಚೆಗೆ ಏಕೋ ಖರ್ಗೆಯವರ ಮೇಲೆ ನಿಮಗೆ ಬಹಳ ಪ್ರೀತಿ ಮತ್ತು ವಿಶ್ವಾಸ ಹೆಚ್ಚಾಗುತ್ತಾ ಇದೆ, ಒಂದು ರೀತಿ...

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕ್ಯಾಬಿನೆಟ್ ಸಬ್ ಕಮಿಟಿ ಮಾಡಿರುವುದು. ಕ್ಯಾಬಿನೆಟ್ ಸಬ್ ಕಮಿಟಿಗಳು ನೀವು ಇದ್ದಾಗ ಆಗಿರಲಿಲ್ಲವೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅದು ಒಳ್ಳೆಯದು ಎಂದರೆ ನೀವ್ಯಾಕೆ ಅದಕ್ಕೆ ಕೋಪ ಮಾಡಿಕೊಳ್ಳುತ್ತೀರಿ? ನಮ್ಮ ಎಲ್ಲಾ ಕ್ಯಾಬಿನೆಟ್ ಸಬ್ ಕಮಿಟಿಗಳಿಗೂ ಸಿದ್ಧರಾಮಯ್ಯನವರನ್ನೇ ಅಧ್ಯಕ್ಷರನ್ನಾಗಿ ಮಾಡುತ್ತಿದ್ದರು ಮಾನ್ಯ ಪಟೇಲರು, ಮಾನ್ಯ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿದ್ದಾರೆ. ಅದು ಎಷ್ಟು ಸಾರಿ ಮೀಟಿಂಗ್ ಸೇರಿದೆಯೋ ನನಗೆ ಗೊತ್ತಿಲ್ಲ, ನಾನ್ಯಾಕೆ ಇದನ್ನು, out of concern, I am speaking, ಏನಾಗಿದೆ ಎಂದು ಹೇಳಿದರೆ ಇದುವರೆಗೂ ಸಹಿತ ಲಿಖಿತವಾಗಿ ಡೆಪ್ಯುಟಿ ಕಮಿಷನರ್ ಗಳಿಗೆ, ಚೀಫ್ ಎಗ್ಸಿಕ್ಯೂಟಿವ್ ಆಫೀಸರ್‌ಗಳಿಗೆ ಈ

ಬರಗಾಲದ ಪ್ರದೇಶದಲ್ಲಿ ಆಗಬೇಕಾಗಿರತಕ್ಕಂಥ ಬರ ಪರಿಹಾರದ ಕೆಲಸಗಳ ಬಗ್ಗೆ ಸ್ಪೆಸಿಫಿಕ್ ರಿಟನ್ ಡೈರೆಕ್ಷನ್ ಈ ಘಳಿಗೆವರೆಗೂ ಹೋಗಿಲ್ಲ. ಓರಲ್ಲಾಗಿ ಏನು ಹೇಳಿದ್ದಾರೆ ಎಂದು ಹೇಳಿದರೆ, ಒಂದಷ್ಟು ಅಕ್ಕಿ ಕೊಡುತ್ತೇವೆ, ಅದಕ್ಕೆ ತಕ್ಕಂತೆ ನೀವು ಆ್ಯಕ್ಷನ್ ಪ್ಲಾನ್ ಅನ್ನು ಮಾಡಿ ಎಂದು ಹೇಳಿದ್ದಾರೆ. ಮಾನ್ಯ ಬಚ್ಚೇಗೌಡರಂತಹ ಶಾಸಕರುಗಳು ಆಸಕ್ತಿ ತೆಗೆದುಕೊಂಡು ಡೆಪ್ಯುಟಿ ಕಮೀಷನರ್‌ಗಳ ಜೊತೆಯಲ್ಲಿ ಮಾತನಾಡಿ, ಆ ಗ್ರಾಮ ಪಂಚಾಯಿತಿಯ ಅಧ್ಯಕ್ಷರುಗಳನ್ನು ಕರೆದು, ತಾಲ್ಲೂಕು ಬೋರ್ಡ್‌ ಅಧ್ಯಕ್ಷರುಗಳನ್ನು ಕರೆದು, ಜಿಲ್ಲಾ ಬೋರ್ಡ್‌ ಸದಸ್ಯರುಗಳನ್ನು ಕರೆದು, ಎಸ್.ಜಿ.ಆರ್. ವೈ. ನಲ್ಲಿ ಬರತಕ್ಕಂಥ ಅಕ್ಕಿಯನ್ನು, ಇದೊಂದು ಪ್ರಾಕ್ಟಿಕಲ್ ಪ್ರಾಬ್ಲಮ್ ಅನ್ನು ಹೇಳಬೇಕು ಅಂತ್ಹೇಳಿ ಇದನ್ನು ನಾನು ಮಾನ್ಯ ಅಧ್ಯಕ್ಷರೇ, ಈ ಸಮಯವನ್ನು ನಾನು ತೆಗೆದುಕೊಳ್ಳುತ್ತಿದ್ದೇನೆ. ಏನು ಪ್ರಾಕ್ಟಿಕಲ್ ಪ್ರಾಬ್ಲಮ್ ಎಂದರೆ, ಗೌವರ್ನಮೆಂಟ್ ಆಫ್ ಇಂಡಿಯಾದಿಂದ ಫುಡ್ ಗ್ರೈನ್ಸ್ ಅನ್ನು ಕೊಡುತ್ತಾರೆ, ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಮೂರರಿಂದ ಐದು ಲಕ್ಷ ರೂಪಾಯಿಗಳವರೆಗೆ depending on the population ಅಷ್ಟು ಅಕ್ಕಿ ಕಾಳನ್ನು ನೀವು ಕೊಡುತ್ತೀರಿ, ಒಂದೊಂದು ತಾಲ್ಲೂಕು ಪಂಚಾಯಿತಿಗೂ again depending on the population 40 ರಿಂದ 50 ಲಕ್ಷ ರೂಪಾಯಿಗಳಷ್ಟು ಅಕ್ಕಿಯನ್ನು ಕೊಡುತ್ತಾರೆ. ಜಿಲ್ಲಾ ಬೋರ್ಡ್‌ಗೂ ಸಹಿತ ಅಷ್ಟೇ ಕೊಡುತ್ತಾರೆ. 15 ಪರ್ಸೆಂಟ್ ಅದರಲ್ಲಿ money component ಇದೆ. ದುಡ್ಡಿನ ಕಾಂಪೋನೆಂಟ್ ಇರುವುದು 15 ಪರ್ಸೆಂಟ್ ಮಾತ್ರ. 80-85 ಪರ್ಸೆಂಟ್ ಅಕ್ಕಿ ಇರತಕ್ಕಂಥಾದ್ದು. ಈಗ ಏನಾಗಿದೆ, ಈಗ ನಾವು ಹಳ್ಳಿಯಲ್ಲಿ ತೆಗೆದುಕೊಂಡು ಹೋಗಿ ಬರಗಾಲದ ಕೆಲಸವಷ್ಟೆ ಅಕ್ಕಿ ಕೊಡುತ್ತೇವೆ, ಮಾಡಿ ಎಂದರೆ ಯಾರೂ ಮಾಡುವುದಿಲ್ಲ. ಎಲ್ಲಾ ಜೆ.ಸಿ.ಬಿ.ಗಳನ್ನು ತೆಗೆದುಕೊಂಡು ಬರುತ್ತಾರೆ. ಜೆ.ಪಿ.ಬಿ.ಗಳಲ್ಲಿ ಕೆಲಸ ಮಾಡುತ್ತಾರೆ. ಆ ಕಾಂಟ್ರಾಕ್ಟರ್ ದಾರರುಗಳಿಗೆ ಅಕ್ಕಿಯನ್ನು ನೇರವಾಗಿ ಅವನು ತೆಗೆದುಕೊಂಡು ಹೋಗುವುದಿಲ್ಲ. ಅಕ್ಕಿಯನ್ನು ತೆಗೆದುಕೊಳ್ಳುವವರೇ ಈಗ ಇಲ್ಲ. ಅಕ್ಕಿ ಈಗೇನು ನಾವು ರೇಟ್ ನಲ್ಲಿ ಕೊಡುತ್ತೇವೆ, ಆರೂವರೆ ರೂಪಾಯಿ - ಏಳೂವರೆ ರೂಪಾಯಿಗೆ, ಆ ದುಡ್ಡಿನಲ್ಲಿ ಅಕ್ಕಿಯನ್ನು ತೆಗೆದುಕೊಳ್ಳುವವರು ಇಲ್ಲ. ಕನ್‌ವರ್ಷನ್ ಮಾಡುವುದಕ್ಕೆ ಸಾಧ್ಯವಿಲ್ಲ. ಪ್ರಾಕ್ಟಿಕಲ್ಲಾಗಿ ಕಷ್ಟ ಇದೆ, ಕನ್‌ವರ್ಷನ್ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ, ಆಮೇಲೆ ಎನ್.ಎಂ.ಆರ್. ರಿಜಿಸ್ಟರ್‌ಗಳನ್ನು ಯಾರಿಗೆ ಮೆಂಟೇನು ಮಾಡುವುದು? ಪಾಪ ಈಗ, ಇನ್ನು ವೆಂಕಟಾಚಲರವರು ಬಂದು ರೈಡ್ ಮಾಡಬಹುದು ಎನ್ನುವ ಭಯದಿಂದ ಎನ್.ಎಂ.ಆರ್. ರಿಜಿಸ್ಟರ್‌ಗಳು ಎಂದು ಅವರು ಇಟ್ಟುಕೊಳ್ಳಬೇಕೇ ಹೊರತು ಪ್ರಾಕ್ಟಿಕಲ್ಲಾಗಿ ಬರಗಾಲದ ಕೆಲಸಗಳು ಇನ್ನೂ ಪ್ರಾರಂಭ ಆಗಿಲ್ಲ. ನೀವು ಯಾವುದೇ ಡೆಪ್ಯುಟಿ ಕಮೀಷನರ್‌ಗಳಿಗಾದರೂ ಕೇಳಿ. ಇದುವರೆಗೂ ಸಹಿತ ಬರಗಾಲದ ಕೆಲಸ ಪ್ರಾರಂಭ ಆಗಿಲ್ಲ. ಅದಕ್ಕೆ ನಾವೇನು ನಿಮ್ಮನ್ನು ಒತ್ತಾಯ ಮಾಡುತ್ತಿದ್ದೇನೆ ಎಂದರೆ, ಮಾನ್ಯ ಪ್ರಧಾನಿಗಳನ್ನು ಭೇಟಿ ಮಾಡಿದಾಗ ಎಷ್ಟು ದುಡ್ಡು ಕೊಡುತ್ತೇವೆ ಎಂದು ಹೇಳಿದ್ದಾರೆ ಎಂಬುದನ್ನು ತಾವು ಜನಗಳಿಗೆ ತಿಳಿಸಬೇಕು, ಕೊಡುವ ಆಸೆ ಏನಾದರೂ ವ್ಯಕ್ತ ಮಾಡಿದ್ದಾರಾ? ನೀವು ರಾಜ್ಯ ಸರ್ಕಾರದಿಂದ ಎಷ್ಟು ದುಡ್ಡನ್ನು ಕೊಡುತ್ತೀರಿ? ಏಕೆಂದರೆ, ಈ ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ಬರಗಾಲಕ್ಕೆ ಸಂಬಂಧಪಟ್ಟ ಹಾಗೆ ನೀವು ಇನ್ನೂ ಅಂದಾಜು ಮಾಡಿರಲಿಲ್ಲ. ಬರಗಾಲ ಬರುತ್ತದೆ ಎಂದು ನಾವು ಯಾರೂ ಭಾವಿಸಿಕೊಂಡಿರಲಿಲ್ಲ. ಆ ರೀತಿ ಭಾವನೆ ಮಾಡುವುದೂ ಕೂಡ ತಪ್ಪು. ಆದರೆ ಬರಗಾಲ ಬಂದಿರುವುದರಿಂದಾಗಿ, ತಾವು ದಯಮಾಡಿ ಸ್ಪೆಸಿಫಿಕ್ ಗೈಡ್ ಲೈನ್ಸ್ ಗಳನ್ನು ಡೆಪ್ಯುಟಿ

ಕಮಿಷನರ್‌ಗಳಿಗೆ ಕೊಡಬೇಕು, ಈ ಫುಡ್ ಕನ್‌ವರ್ಷನ್ ಯಾವರೀತಿ ಆಗಬೇಕು? ಮತ್ತೆ ಅಟ್ ಲೀಸ್ಟ್ 15-20 ಪರ್ಸೆಂಟ್ ಆದರೂ ಸಹಿತ ಅದರಲ್ಲಿ ನೀವು ದುಡ್ಡನ್ನು ಕೊಡದೇ ಹೋದರೆ, ಮಣ್ಣು ಹಾಕಿಕೊಂಡು ಹೋಗಬಹುದು ಅಷ್ಟೇ ಹೊರತು ಅಸೆಟ್ ಕ್ರಿಯೇಟ್ ಮಾಡುವುದಕ್ಕೆ ಆಗುವುದಿಲ್ಲ. ಅಟ್‌ಲೀಸ್ಟ್ ಒಂದು ಜಲ್ಲಿ ತೆಗೆದುಕೊಳ್ಳುವುದಕ್ಕೆ, ಸಿಮೆಂಟ್ ತೆಗೆದುಕೊಳ್ಳುವುದಕ್ಕೆ, ಒಂದಷ್ಟು ಕಬ್ಬಿಣ ತೆಗೆದುಕೊಳ್ಳುವುದಕ್ಕಾದರೂ ಸಹಿತ ಫೈನಾನ್‌ಷಿಯಲ್ ಅಮೌಂಟ್ ಅದರಲ್ಲಿ ಇನ್ ಕ್ಲೂಡ್ ಆಗಬೇಕಾಗುತ್ತದೆ. ಎಲ್ಲಾ ಕ್ಯಾಷ್ ಕಾಂಪೋಸೆಂಟ್ ಇದರಲ್ಲಿ ಇನ್ ಕ್ಲೂಡ್ ಆಗಬೇಕಾಗುತ್ತದೆ. ಆದ್ದರಿಂದ ಇದರ ಕಡೆಗೆ ತಾವು ಗಮನ ಕೊಡಬೇಕೆಂದು ಹೇಳಿ, ಸಪ್ಲಿಮೆಂಟರಿ ಎಸ್ಟಿಮೇಟ್ ನೆಪದಲ್ಲಿ ನಾನು ಈ ಬರಗಾಲ ಒಂದು ಬಹಳ ಪ್ರಮುಖರಾದ ಸಮಸ್ಯೆಯಾಗಿರುವುದರಿಂದ ಸ್ವಲ್ಪ ಡೀವಿಯೇಟ್ ಮಾಡಿ ಮಾತನಾಡಿದ್ದೇನೆಯೇ ಹೊರತು ಬಾಕಿ ಎಲ್ಲವೂ ನಿಮ್ಮ ಡಿಮಾಂಡ್ಸ್‌ನಲ್ಲಿ ಇರುವ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ನಾನು ಹೇಳಿರುವ ವಿಚಾರಗಳ ಕಡೆ ತಾವು ಆಧ್ಯತೆಯನ್ನು ಕೊಟ್ಟು ಈ ತನಿಖೆ ಮಾಡುವುದು ಏನಿದೆ ಅದು ಒಂದು, ಕಳೆದ ಸಾರಿ ನಾನು ತಮಗೆ ವಿನಂತಿ ಮಾಡಿಕೊಂಡಿದ್ದೆ, ತಾವು ಏಕೋ ಅದನ್ನು ಉದಾಸೀನ ಮಾಡಿಬಿಟ್ಟಿರಿ. ಏಕೆಂದರೆ ರಾಯಚೂರು ಥರ್ಮಲ್ ಪ್ಲಾಂಟ್ ಬಹಳ ಫ್ರೀಕ್ವೆಂಟಾಗಿ ಬ್ರೇಕ್ ಡೌನ್ ಆಗುತ್ತಿದೆ. ಮೊದಲು ಐದು ಮತ್ತು ಆರನೆಯದು ಬ್ರೇಕ್ ಡೌನ್ ಆಗುತ್ತಿತ್ತು, ಮೊನ್ನೆ ಪತ್ರಿಕೆಯಲ್ಲಿ ಓದಿದೆ, ಎರಡನೇ ಪ್ಲಾಂಟ್ ಸಹಿತ ಕೆಟ್ಟು ಹೋಗಿದೆ ಎಂದು ಕೇಳಿದೆ, ಬೆಂಗಳೂರಿನಿಂದ ವಾಸ್ತು ಹೋಗಿದ್ದರು, ವಾಸ್ತುನವರು ಹೋದ ಮೇಲೆ ಸಹಿತ ಉಪಯೋಗವಾಗಲಿಲ್ಲವೆಂದು ಕೇಳಿದ್ದೇನೆ. ಆದ್ದರಿಂದ ತಾವು ದಯಮಾಡಿ ರಾಯಚೂರು ಥರ್ಮಲ್ ಪ್ಲಾಂಟ್ ಬೇಸಿಕ್ ಡಿಫೆಕ್ಟ್ ಏನಿದೆ ಎಂಬ ಬಗ್ಗೆ ಆಲ್ ಇಂಡಿಯಾ ಲೆವಲ್ ಎಕ್ಸ್ ಪರ್ಟ್ಸ್ ಇರಬಹುದು, ಅಥವಾ ಪ್ರಪಂಚದ ಮಟ್ಟದಲ್ಲಿರತಕ್ಕಂತಹ ಎಕ್ಸಪರ್ಟ್ಸ್ ಇರಬಹುದು ಅವರಿಗೆ ಕರೆಸಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ. ಇನ್ನು ಕೊನೆಯದಾಗಿ, ನಿನ್ನೆ ತಾವು ಈ ಸದನದಲ್ಲಿ ಇರಲಿಲ್ಲ, ಅದಕ್ಕೋಸ್ಕರ ಮಾನ್ಯ ಅಧ್ಯಕ್ಷರು ದಯಮಾಡಿ ದೊಡ್ಡ ಮನಸ್ಸು ಮಾಡಿ ಈ ಅಪ್ರೋಪ್ರಿಯೇಷನ್ ಬಿಲ್ ಮತ್ತು ಸಪ್ಲಿಮೆಂಟರಿ ಎಸ್ಟಿಮೇಟನ್ನು ಇವತ್ತು ತೆಗೆದುಕೊಳ್ಳಬೇಕೆಂದು ಹೇಳಿದರು. ತಪ್ಪು ಕಲ್ಪನೆಗಳಿಂದ ಮಾನ್ಯ ಶ್ರೀಕಂಠಯ್ಯನವರ ಬಗ್ಗೆ ಪತ್ರಿಕೆಗಳಲ್ಲಿ ಒಂದು ವಿಚಾರ ಬಂದಿತ್ತು, ಅವರು ಅದರ ಬಗ್ಗೆ ಡಿನೈ ಮಾಡಿದರು. ಅಸೆಂಬ್ಲಿಯನ್ನು ಸೋಮವಾರ ಅಡ್ಜರ್ನ್ ಮಾಡುತ್ತಾರೆ ಎಂದು ಬಂದಿತ್ತು, ಇಲ್ಲ, ಅಡ್ಜರ್ನ್ ಮಾಡುವುದಿಲ್ಲ, ಶುಕ್ರವಾರದವರೆಗೆ ನಡೆಸುತ್ತಾರೆಂದು ಭರವಸೆ ಕೊಟ್ಟರು. ಅದಾದ ಮೇಲೆ ಮಾನ್ಯ ಅಧ್ಯಕ್ಷರು ಈ ಸಪ್ಲಿಮೆಂಟರಿ ಎಸ್ಟಿಮೇಟ್‌ಅನ್ನು ಇವತ್ತು ಸದನದ ಮುಂದೆ ತೆಗೆದುಕೊಳ್ಳುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ನಿನ್ನೆಯಿಂದ ಸದನದಲ್ಲಿ ಸದನದ ಎಲ್ಲಾ ಕಾರ್ನರ್‌ಗಳಿಂದ ಬಂದಿರತಕ್ಕಂತಹ ಬಹಳ ಪ್ರಮುಖವಾದ ವಿಚಾರ ಎಂದರೆ, ಮಲೆನಾಡು ಅಭಿವೃದ್ಧಿ ಮಂಡಳಿಗೆ ಬಿಡುಗಡೆಯಾಗುತ್ತಿರುವ ದುಡ್ಡು ಏತಕ್ಕೂ ಸಾಕಾಗುತ್ತಿಲ್ಲ. ಗಡಿನಾಡು ಪ್ರದೇಶ ಅಭಿವೃದ್ಧಿಗೆ ಬಿಡುಗಡೆ ಆಗುವ ದುಡ್ಡು, ಈ ಕಾರ್ಯಕ್ರಮ ಪ್ರಾರಂಭವಾದಾಗ, ಮಾನ್ಯ ವೀರೇಂದ್ರ ಪಾಟೀಲರನ್ನು ನಾನು ನೆನೆಸಿಕೊಳ್ಳುತ್ತೇನೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಪ್ಲಾನ್ನಿಂಗ್ ಕಮಿಷನ್‌ಗೆ ವೈಸ್ ಛೇರ್ಮನ್ ಆಗಿದ್ದರು; ಶ್ರೀಮಾನ್ ವೀರೇಂದ್ರ ಪಾಟೀಲರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಗಡಿನಾಡು ಪ್ರದೇಶಗಳಿಗೆ ದುಡ್ಡು ಕೊಡುವ ಕಾರ್ಯಕ್ರಮ

ಪ್ರಾರಂಭವಾಯಿತು. 25 ಲಕ್ಷ ರೂಪಾಯಿಗಳಿಂದ ಹೋಗಿ ಒಂದೂ ಕಾಲು ಲಕ್ಷ ರೂಪಾಯಿಗಳಿಗೆ ಇಳಿದಿದೆ. ನನಗೆ ತಮಿಳುನಾಡು ಬಾರ್ಡರ್ ಬರುತ್ತದೆ, 35 ಕಿ.ಮೀ.ಗೆ ಒಂದು ಕಾಲು ಲಕ್ಷ ರೂಪಾಯಿಗಳಲ್ಲಿ ನಾನು ಏನೇನು ಮಾಡುವುದಕ್ಕಾಗುತ್ತದೆ? ನನ್ನದಾದರೂ ಪರವಾಗಿಲ್ಲ, ಏನಾದರೂ ಮಾಡಿಕೊಳ್ಳಬಹುದು, ಔರಾದ್ ನಲ್ಲಿರತಕ್ಕಂತಹವರು, ಕಾರವಾರದಲ್ಲಿ ಬಾರ್ಡರ್‌ನಲ್ಲಿ ಇರತಕ್ಕಂಥವರು, ರಾಯಚೂರಿನಲ್ಲಿ ಇರತಕ್ಕಂತಹವರು ಕಲ್ಬುರ್ಗಿ, ಚಿಂಚೋಳಿ ಮತ್ತು ಇತರೆ ಪ್ರದೇಶಗಳಲ್ಲಿ ಇರುವವರು ಏನು ಮಾಡಬೇಕು? ಈ ಸಂದರ್ಭದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಇರುವುದು ಬಹಳ ಸಂತೋಷ. ತಾವು ಚಿಂಚೋಳಿಗೆ ಹೋಗಿ ಒಳ್ಳೆಯ ಕೆಲಸ ಮಾಡಿದ್ದೀರಿ. ಹೆಣ್ಣುಮಕ್ಕಳನ್ನು ಮಾರತಕ್ಕಂತಹ ಕಾರ್ಯಕ್ರಮ ಏನಿದೆ ಅದನ್ನು ನಿಲ್ಲಿಸಲಿಕ್ಕೆ ತಾವು ಬಹಳ ಪ್ರಯತ್ನವನ್ನು ಸಮಾಜ ಕಲ್ಯಾಣ ಸಚಿವರಾಗಿ ಮಾಡಿದ್ದೀರಿ. ಶ್ರೀಮತಿ ಮೋಟಮ್ಮನವರೂ, ಕೂಡ ಅಲ್ಲಿಗೆ ಭೇಟಿ ನೀಡಿದ್ದರು. ಆಗ ಮುಖ್ಯಮಂತ್ರಿಗಳು 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಒಂದು ವಿಶೇಷವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ನೀವು ಅಲ್ಲ, ನಾನು ನಿಮಗೆ ಹೇಳುತ್ತಿಲ್ಲ. ನಾನು ನಿಮಗೆ ಅಪ್ರಿಷಿಯೇಟ್ ಮಾಡುತ್ತೇನೆ. ಮುಖ್ಯಮಂತ್ರಿಗಳು ಹೇಳಿಕೆ ನೀಡಿದ್ದು, ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿದ್ದರು. ಮಾನ್ಯ ಕೈಲಾಸ್‌ನಾಥ್ ಪಾಟೀಲರು ಇಲ್ಲಿ ಇದ್ದಾರೆ, ಬೇಕಾದರೆ ಅವರಿಗೆ ಕೇಳಿ, ಅವರು ಹೇಳಲಿ.

ಶ್ರೀ ಕೈಲಾಸ್ ನಾಥ್ ಪಾಟೀಲ್ (ಚಿಂಚೋಳಿ) : ಮಾನ್ಯ ಅಧ್ಯಕ್ಷರೆ, ಚಿಂಚೋಳಿ ಮತ ಕ್ಷೇತ್ರದ ಬಗ್ಗೆ ಮಾನ್ಯ ಸಿಂಧ್ಯಾರವರು ಪ್ರಸ್ತಾಪಿಸಿದ್ದಾರೆ. ನನ್ನ ಮತಕ್ಷೇತ್ರದಲ್ಲಿ ಆದಂತಹ ಈ ಮಕ್ಕಳ ಮಾರಾಟ ವಿಚಾರದಲ್ಲಿ ನಮ್ಮ ಸರ್ಕಾರ 10 ಕೋಟಿ ರೂಪಾಯಿಗಳ ಯೋಜನೆಯನ್ನು ಹಾಕಿದ್ದಾರೆ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಾದ ಕಾಗೋಡು ತಿಮ್ಮಪ್ಪನವರೂ ಕೂಡ ನಮ್ಮ ಭಾಗಕ್ಕೆ ಬಂದಿದ್ದರು ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಹಚಿವರೂ ಕೂಡ ನಮ್ಮ ಭಾಗಕ್ಕೆ ಬಂದಿದ್ದರು ಹಾಗೂ ಈ ವಿಚಾರದಲ್ಲಿ ಇಲ್ಲಿಯವರೆಗೆ ನಾವು ತಾಲ್ಲೂಕು ಪಂಚಾಯಿತಿ ವತಿಯಿಂದ ಇನ್ನಿತರೆ ಕಾರ್ಯಕ್ರಮಗಳಿಂದ ಇಲ್ಲಿಯವರೆಗೆ 55 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದರಲ್ಲಿ ಮನೆಗಳು ಕಟ್ಟಿದ್ದೇವೆ, ಈ ಸಂಬಂಧದಲ್ಲಿ ಮಕ್ಕಳ ಮಾರಾಟದಲ್ಲಿ ಇನ್‌ವಾಲ್ವ್ ಆದ ಸಂಬಂಧಿಕರಿಗೆ ಸದಸ್ಯರಿಗೆ ಮತ್ತು ಕುಟುಂಬದವರಿಗೆ ಮನೆ ಕೊಟ್ಟಿದ್ದೇವೆ ಮತ್ತು ಇನ್ನೂ ಸಹ ಪಶು ಸಂಗೋಪನೆ ಇಲಾಖೆಯಿಂದ ಕೂಡ ಸ್ವಲ್ಪ ಧನ ಸಹಾಯ ಮಾಡಿದ್ದೇವೆ. ತಹಶೀಲ್ದಾರ್ ವತಿಯಿಂದ ವೃದ್ಧಾಪ್ಯ ವೇತನ, ವಿಧವಾ ವೇತನ ಕೊಟ್ಟಿದ್ದೇವೆ. ಸಮಾಜ ಕಲ್ಯಾಣ ಇಲಾಖೆಯಿಂದ 100 ವಿದ್ಯಾರ್ಥಿಗಳಿಗೆ ಆಶ್ರಮ ಶಾಲೆಗಳನ್ನು ಪ್ರಾರಂಭ ಮಾಡಿದ್ದೇವೆ. ಹಾಗೂ ಅರಣ್ಯ ಇಲಾಖೆ ಕಡೆಯಿಂದ ಇಲ್ಲಿಯವರೆಗೆ ನಮ್ಮಲ್ಲಿರತಕ್ಕಂತಹ ಲಂಬಾಣಿ ತಾಂಡಾಗಳಿಂದ ಮಕ್ಕಳ ಮಾರಾಟದ ಪ್ರಸಂಗ ನಡೆದಿದೆ ಅದು ಕುಂಚಾವರಂ ಪ್ರದೇಶ, ಅಲ್ಲಿ ಫಾರೆಸ್ಟ್ ಇದೆ. ಆ ಫಾರೆಸ್ಟ್ ನಲ್ಲಿ ಈ ಲಂಬಾಣಿ ಜನಾಂಗ ಹೋಗಿ ಕೆಲಸ ಮಾಡುತ್ತದೆ. ಅಲ್ಲಿ ಬರತಕ್ಕಂತಹ ಫಾರೆಸ್ಟ್ ಪ್ರೊಡ್ಯೂಸ್‌ನಿಂದ ಅವರು ಅಲ್ಪಸ್ವಲ್ಪ ಗಳಿಕೆ ಮಾಡಿಕೊಳ್ಳುತ್ತಾರೆ. ಆದರೆ ಇದನ್ನು ಇಷ್ಟು ವರ್ಷಗಳ ಕಾಲ ನಾವು ಹೊರ ರಾಜ್ಯದಿಂದ ಬಂದಂಥ ಗುತ್ತಿಗೆದಾರರಿಗೆ ಕೊಡುತ್ತಿದ್ದೆವು. ಅದನ್ನು ತಪ್ಪಿಸಿ ಈ ಸಾರಿ ನಾವು ನೇರವಾಗಿ ಅಲ್ಲಿರತಕ್ಕಂತಹ ಲಂಬಾಣಿ ಜನಾಂಗದ ಸಂಘಗಳಿಗೆ ಕೊಟ್ಟಿದ್ದೇವೆ. ಅಂದರೆ ಅಲ್ಲಿ ಅವರಿಗೆ ಉದ್ಯೋಗವಕಾಶ ಬರಲಿ ಎನ್ನುವ ಉದ್ದೇಶದಿಂದ ಮಾಡಿದ್ದೇವೆ. ನಮ್ಮ ರಾಜ್ಯದಲ್ಲಿ ಪ್ರಥಮ ಬಾರಿಗೆ ಚಿಂಚೋಳಿ ತಾಲ್ಲೂಕಿನಲ್ಲಿ ಅದನ್ನು

ಮಾಡಿದ್ದೇವೆಂದು ಹೇಳಿದರೆ ತಪ್ಪಾಗುವುದಿಲ್ಲ. ಹರಿಜನ ಗಿರಿಜನ ಕಲ್ಯಾಣ ನಿಗಮದಿಂದ ಸುಮಾರು 70 ಕುಟುಂಬಗಳಿಗೆ ಗಂಗಾ ಕಲ್ಯಾಣ ಕೊಳವೆ ಬಾವಿ ಹಾಕಿಸಿಕೊಟ್ಟಿದ್ದೇವೆ. ಇಷ್ಟು ಕಾರ್ಯಕ್ರಮಗಳನ್ನು ನಾವು ಮಾಡಿದ್ದೇವೆ. ನನಗೆ ಭರವಸೆ ಇದೆ. ಈ 10 ಕೋಟಿ ರೂಪಾಯಿಗಳಲ್ಲಿ ಇನ್ನೂ ಸಾಕಷ್ಟು ಹಣ ವೆಚ್ಚ ಆಗಬೇಕಾಗಿದೆ. ಸುಮಾರು ಒಂದು ಕೋಟಿ ರೂ. ಇಲ್ಲಿಯವರೆಗೆ ಖರ್ಚಾಗಿದೆ ಎಂದು ನನಗನ್ನಿಸುತ್ತದೆ. ಇನ್ನು ಉಳಿದ ಅಮೌಂಟ್‌ಗೆ ನಾನು ಸರ್ಕಾರಕ್ಕೆ ವಿನಂತಿ ಮಾಡಿದ್ದೇನೆ. ಇನ್ನು ಉಳಿದ ಎರಡೂವರೆ ವರ್ಷಗಳಲ್ಲಿ ಉಳಿದ ಹಣ ಖರ್ಚು ಮಾಡುತ್ತವೆಂದು ಭರವಸೆ ಇದೆ ಹಾಗೂ ವಿಶ್ವಾಸವಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಖರ್ಗೆಯವರು ಸ್ವಲ್ಪ ಸಿಟ್ಟು ಮಾಡಿಕೊಂಡರು. ಏಕೆಂದರೆ ಅವರು ಅಲ್ಲಿಯ ಉಸ್ತುವಾರಿ ಮಂತ್ರಿಗಳು. 10 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿ ಎರಡು ವರ್ಷಗಳು ಆಗಿ ಒಂದು ಕೋಟಿ ರೂಪಾಯಿ ಖರ್ಚಾಗಿದೆ. ನಿಮ್ಮ ಆಡಳಿತ ಪಕ್ಷದ ಶಾಸಕರು ಹೇಳಿದರೆ ನಿಮಗೆ ರುಚಿ ಕಾಣುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಒತ್ತಾಯ ಮಾಡತಕ್ಕಂಥಾದ್ದು ಏನೆಂದರೆ ಗಡಿನಾಡಿನ ಅಭಿವೃದ್ಧಿಗೆ ಕೊಡತಕ್ಕಂಥ ಹಣ ಸಾಕಾಗುವುದಿಲ್ಲ. ಮಲೆನಾಡು ಅಭಿವೃದ್ಧಿ ಮಂಡಳಿಗೆ ಕೊಟ್ಟಿರತಕ್ಕಂಥ ಹಣ ಸಾಕಾಗುವುದಿಲ್ಲವೆಂದು ನಿನ್ನೆ ಸಾಕಷ್ಟು ಚರ್ಚೆಯಾಯಿತು. ತಾವು ಒಂದು ಭರವಸೆಯನ್ನು ಕೊಟ್ಟಿದ್ದೀರಿ. ನೇತ್ರಾವತಿ ಹೊಳೆ ನೀರನ್ನು ನಮ್ಮ ಭಾಗಕ್ಕೆ ಕೊಡದೆ ಹೋದರೆ ನಾನು ಅಧಿಕಾರ ಸ್ಥಾನ ಬಿಟ್ಟು ಹೋರಾಟ ಮಾಡುತ್ತೇನೆಂದು ಮಾತು ಕೊಟ್ಟಿದ್ದೀರಿ. ಆ ಧೈರ್ಯವನ್ನು ತೋರಿಸಿದ್ದೀರಿ. ತಮಗೆ ಅಭಿನಂದಿಸುತ್ತೇನೆ. ಅದರ ಕಡೆ ಸರ್ವೆ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು, ಮಾಡಬೇಕೆಂದು ನಮ್ಮ ಒತ್ತಾಯ. ಬಹಳ ಮುಖ್ಯವಾಗಿ ಔರಾದ್‌ನಿಂದ ಹಿಡಿದು ಚಾಮರಾಜನಗರದವರೆಗೆ ಇರತಕ್ಕಂಥ ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಶ್ರೀ ರಮಾನಾಥ ರೈ ಅವರು ಮಂತ್ರಿಗಳಾದ ಸಂದರ್ಭದಲ್ಲಿ ಕಳೆದ ಮೂರು ವರ್ಷಗಳಲ್ಲಿ ತಮ್ಮ ಸರ್ಕಾರ ಬಂದಮೇಲೆ 50 ಲಕ್ಷ ರೂ. ಕೆಲಸಗಳನ್ನು ನಾವು ಮಾಡಿಸುತ್ತೇವೆಂದು ನಬಾರ್ಡ್‌ಗೆ ಆ್ಯಕ್ಷನ್ ಪ್ಲಾ್ಯನ್ ಮಾಡಿ ಕಳುಹಿಸಿರತಕ್ಕಂಥಾದ್ದು ಇದುವರೆಗೆ ಬಯಲು ಸೀಮೆ ಅಭಿವೃದ್ಧಿ ಮಂಡಳಿಯಲ್ಲಿ ಒಂದೊಂದು ಕ್ಷೇತ್ರಕ್ಕೆ 70 ರಿಂದ 80 ತಾಲ್ಲೂಕುಗಳು ಸೇರಿವೆ. ಬಿಡುಗಡೆ ಆಗಿರತಕ್ಕಂಥಾದ್ದು ಎರಡರಿಂದ ಮೂರು ಲಕ್ಷ ರೂ. ದುಡ್ಡು ಮಾತ್ರ. ಏಕೆ ಈ ಘೋಷಣೆಗಳನ್ನು ಮಾಡುವುದಕ್ಕೆ ಹೋಗುತ್ತೀರಿ? ಅದನ್ನು ಮಾಡಬೇಡಿ. ಮಾಡಿದರೆ ಅದನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂಬ ಮಾತನ್ನು ಹೇಳಿ, ಈ ಬೆಳೆ ವಿಮೆ ವಿಚಾರದಲ್ಲಿ ನಾನು ಇವತ್ತಿಗೂ ಹೇಳುತ್ತಿದ್ದೇನೆ, ಬೆಳೆ ವಿಮೆ ವಿಚಾರದಲ್ಲಿ ಇನ್ನೂ ಹಣ ಬಿಡುಗಡೆಯಾಗಿಲ್ಲ. ಈಗತಾನೇ ಚಾಮರಾಜನಗರದಿಂದ ಎರಡು- ಮೂರು ಹೋಬಳಿಗಳಿಂದ ರೈತರು ಹೊರಗಡೆ ಬಂದಿದ್ದರು. ನೂರಾರು ಜನ ಕೌಲಂಡೆ ಹೋಬಳಿಯಿಂದ ರೈತರು ಇಲ್ಲಿಗೆ, ಬಂದಿದ್ದರು. ಅದರಲ್ಲಿ ತಾರತಮ್ಯ ಆಗಿದೆ. ಆಗಸ್ಟ್ 15ನೇ ತಾರೀಖಿನವರೆಗೆ ವಿಸ್ತರಣೆ ಮಾಡುತ್ತೇವೆಂದು ಮಾನ್ಯ ಕೃಷಿ ಮಂತ್ರಿಗಳು ಪ್ರಯತ್ನ ಮಾಡುತ್ತೇವೆಂದು ಹೇಳಿದರು. ನಾನೂ ಕೂಡ ಕೇಂದ್ರದ ಮಾನ್ಯ ಕೃಷಿ ಮಂತ್ರಿಗಳಾದ ಅಜಿತ್‌ಸಿಂಗ್‌ರವರಿಗೆ ದೂರವಾಣಿ ಮೂಲಕ ಮಾತನಾಡಿ ಕರ್ನಾಟಕದ ಜನ ಬಹಳ ತೊಂದರೆಯಲ್ಲಿದ್ದಾರೆ, ತಾವು ಸಹಾಯ ಮಾಡಬೇಕೆಂದು ಒತ್ತಾಯ ಮಾಡಿದ್ದೇನೆ. ಅದರ ಕಡೆ ಮಾನ್ಯ ಕೃಷಿ ಮಂತ್ರಿಗಳು ಏನು ಹೇಳುತ್ತಾರೆಯೋ ನನಗೆ ಗೊತ್ತಿಲ್ಲ. ಬೆಳೆ ವಿಮೆ ವಿಚಾರದಲ್ಲಿ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು

ಹೇಳಿ, ಕೊನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಸಾಲ ವಸೂಲಾತಿಯನ್ನು ಮುಂದೆ ಹಾಕಬೇಕು. ಬಡ್ಡಿ ಮನ್ನಾ ಮಾಡಲೇಬೇಕೆಂದು ಹೇಳಿ, ಕೇಂದ್ರ ಸರ್ಕಾರದ ನೆರವು ತೆಗೆದುಕೊಂಡು ಬಡ್ಡಿ ಮನ್ನಾ ಮಾಡಿ ಸಾಲ ವಸೂಲಾತಿ ಮಾಡುವುದನ್ನು ಮುಂದಕ್ಕೆ ಹಾಕಿ ಎಂದು ಹೇಳಿ ಈ ಸಂದರ್ಭದಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

+ ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ನನಗೆ ಗೊತ್ತಿರುವ ಹಾಗೆ ಅನೇಕ ಇಲಾಖೆಗಳಿಗೆ ಪ್ಲಾನ್ ಸ್ಕೀಮ್‌ನಲ್ಲಿ ಸಂಬಳ ಕೂಡ ಕಟ್ ಆಗಿತ್ತು, 15 ರಿಂದ 20 ಪರ್ಸೆಂಟ್ ಕಟ್ ಮಾಡುತ್ತೇವೆಂದು ಹೇಳಿ, ಕೊನೆಯಲ್ಲಿ ಆಯವ್ಯಯ ಆದ ನಂತರ ಕಟ್ ಮಾಡುತ್ತಾರೆ, ಅದರ ಪರಿಣಾಮ ಏನಾಯಿತು ಎಂದರೆ ನಮ್ಮಲ್ಲಿ ಪಶುಸಂಗೋಪನಾ ಇಲಾಖೆಗೆ ಸಂಬಳ ಕಟ್ ಆಯಿತು, ಎರಡೆರಡು ತಿಂಗಳಿಗೆ ಸಂಬಳ ಇಲ್ಲ, ಈ ಸಾರಿ ನಾಲ್ಕು ತಿಂಗಳಿನ ಸಂಬಳ ಕಟ್ ಆಗುತ್ತದೆ ಎಂದು ಹೇಳುತ್ತಾರೆ. ಇದು ಹೇಗೆ ಬಜೆಟ್ ಮಾಡಿಕೊಳ್ಳುತ್ತಾರೆ, ಏಕೆ ಲೋಪ ಆಗುತ್ತಿದೆ, ಆಯವ್ಯಯ ಮಾಡುವ ಸಂದರ್ಭದಲ್ಲಿ ಇದನ್ನು ಏಕೆ ಕಟ್ ಮಾಡುತ್ತಾರೆ ಎಂಬುದು ನಮಗೆ ಗೊತ್ತಿಲ್ಲ. ಕಟ್ ಮಾಡಿದರೂ ಕೂಡ ಕಾಮಗಾರಿಗಳಲ್ಲಿ ಕಟ್ ಮಾಡುತ್ತಾರೆಯೇ ಹೊರತು ಸಂಬಳದ ಅಂಶವನ್ನು ಕೂಡ ಕಟ್ ಮಾಡುವುದರಲ್ಲಿ ಅರ್ಥವಿಲ್ಲ. ಕಳೆದ ಸಾರಿ ತುಂಬಾ ಗಲಾಟೆಯಾಯಿತು. ನಮ್ಮ ಶಿವಮೊಗ್ಗ ಜಿಲ್ಲಾ ಪರಿಷತ್‌ನ ಬೇರೆ ಬೇರೆ ಯಾವುದೋ ಲೆಕ್ಕದಲ್ಲಿ ಹೊಂದಾಣಿಕೆ ಮಾಡಿ ಅವರಿಗೆ ಸಂಬಳ ಕೊಡಲಾಯಿತು. ರಾಜ್ಯಮಟ್ಟದಲ್ಲಿ ಒಂದು ರೀತಿ ಕುರುಡಾಗಿ ಕಟ್ ಮಾಡುವಂಥಾದ್ದು ಖಂಡಿತವಾಗಿ ನಡೆಯಬಾರದು ಎಂದು ನಾನು ಹೇಳುತ್ತೇನೆ. ಶಿಕ್ಷಣ ಇಲಾಖೆ ಮತ್ತು ಪಶು ಸಂಗೋಪನಾ ಇಲಾಖೆ ಈ ಎರಡೂ ಇಲಾಖೆಗಳಲ್ಲಿ ಈ ರೀತಿ ನಡೆಯುತ್ತದೆ.

ಇನ್ನು ಸಣ್ಣ ನೀರಾವರಿ ಯೋಜನೆ ಬಗ್ಗೆ ಹೇಳಬೇಕೆಂದರೆ, ಕೇಂದ್ರ ಪುರಸ್ಕೃತ ಯೋಜನೆಯ ಕಾರ್ಯಕ್ರಮಗಳಿಗೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನ ಸಾಕಾಗದೇ ಇರುವುದರಿಂದ ಇದನ್ನು ಹೆಚ್ಚುವರಿ ಅನುದಾನವನ್ನಾಗಿ ಸೇರಿಸಲಾಗಿದೆ ಎಂದು ಎಲ್ಲವನ್ನೂ ಕೂಡ ಹೇಳಿದ್ದೀರಿ. ಈ ಸಣ್ಣ ನೀರಾವರಿ ಇಲಾಖೆಯನ್ನು ದಯವಿಟ್ಟು ಮುಚ್ಚುವುದು ಒಳ್ಳೆಯದು ಎಂದು ಕಾಣುತ್ತದೆ. ಅದಕ್ಕೊಂದಿಷ್ಟು ಸಿಬ್ಬಂದಿ ವರ್ಗ, ಅದಕ್ಕೊಂದಿಷ್ಟು ಯೋಜನೆಗಳು, ಇದನ್ನೆಲ್ಲಾ ಕೊಟ್ಟು ಅನವಶ್ಯಕವಾಗಿ ಆ ಸಿಬ್ಬಂದಿ ವರ್ಗದವರಿಗೆ ಏನೂ ಕೆಲಸವಿಲ್ಲ. ಏಕೆಂದರೆ ಅಲ್ಲಿ ಮಾಡಲಿಕ್ಕೆ ಏನೂ ಕೆಲಸವಿಲ್ಲದಿದ್ದಾಗ ಅಲ್ಲಿ ಇಂಜಿನಿಯರ್‌ರವರನ್ನು ಕೂರಿಸಿ, ಮತ್ತೆ ಎಲ್ಲಕ್ಕಿಂತ ಹೆಚ್ಚಾಗಿ ಮಂತ್ರಿಗಳು ಹೋದಲ್ಲೆಲ್ಲಾ ಹೇಳುವುದು, ನಾವೇನೋ ಕೆರೆ ಕಾಯಕ ಮಾಡುತ್ತೇವೆ, ಕೆರೆ ಹೂಳು ಎತ್ತುತ್ತೇವೆ, ಈ ರೀತಿ ದೊಡ್ಡ ದೊಡ್ಡ ಮಾತನ್ನು ಹೇಳುವುದು, ಮತ್ತೊಂದು ಹೇಳುವುದು ಏನಿದೆ, ಇದರಿಂದ ಮೀಡಿಯಾದವರಿಗೆ ಇದೊಂದು ಅಪ್ಯಾಯಮಾನ. ಈ ಕೆರೆ ಹೂಳೆತ್ತುವುದು, ಹೊಸ ಕೆರೆಗಳನ್ನು ಮಾಡುವಂಥಾದ್ದು, ಕೆರೆ ಕಾಯಕ ಯೋಜನೆ, ಇವೆಲ್ಲವೂ ಕೂಡ ಗ್ರಾಮೀಣಾಭಿವೃದ್ಧಿಯಲ್ಲಿ ಬಹಳ ಏನೋ ಆಗುತ್ತಾ ಇದೆ ಎಂದು ಹೇಳಿ ಅವರೂ ಕೂಡ ಬಾರಿ ದೊಡ್ಡ ಪ್ರಚಾರವನ್ನು ಕೊಡುತ್ತಾರೆ. ಅಲ್ಲಿಗೆ ಹೋದಾಗ, ಜನ ಇವೊತ್ತು ನಮ್ಮ ಶಾಸಕರುಗಳನ್ನು ಕೇಳುತ್ತಾ ಏನಪ್ಪಾ, ಸರ್ಕಾರ ಕೊಟ್ಟರೂ ಕೂಡ ನೀವ್ಯಾಕೆ ಕೊಡುವುದಿಲ್ಲ, ನಿಮ್ಮದೇ ಏನೋ ನ್ಯೂನತೆ ಇದೆ ಎಂದು ಹೇಳುವಂಥ ರೀತಿಯಲ್ಲಿ ನಮ್ಮನ್ನು ಅನುಮಾನದಿಂದ ನೋಡುವಂಥ

ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗಾಗಿ ಇವೊತ್ತು ಹೊಸ ಕೆರೆಗಳಿಗಾಗಲಿ, ಹಣವನ್ನು ಬಿಡಗಡೆ ಮಾಡುವುದರ, ಈಗಿರತಕ್ಕಂಥ ಏತ ನೀರಾವರಿ ಯೋಜನೆ, ನಾನು ಮೊನ್ನೆ ದಿನ ಹೇಳಿದೆ. ಮಾನ್ಯ ಖರ್ಗೆಯವರು ಕೇಳಬೇಕು, ಸಣ್ಣ ನೀರಾವರಿ ಯೋಜನೆಯಲ್ಲಿ ತಾವು ಹಣದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳೆ, ಇಲ್ಲೇನಾಗಿದೆಯೆಂದರೆ, ನಮ್ಮ ತೀರ್ಥಹಳ್ಳಿಯಲ್ಲಿ ಆರೇಳು ಸಣ್ಣ ಸಣ್ಣ ಏತ ನೀರಾವರಿ ಯೋಜನೆಗಳಿವೆ. ಬಹಳ ದೊಡ್ಡದು ಏನಿಲ್ಲ. ಒಂದೂನೂರು ಎಕರೆ, ಐವತ್ತು ಎಕರೆಗೆ ಫೀಡ್ ಮಾಡುವಂಥ ಏತ ನೀರಾವರಿ. ಅವೆಲ್ಲವೂ ಕರೆಂಟ್ ಚಾರ್ಜ್ ಕಟ್ಟದೇ ಇರುವುದರಿಂದ ಡಿಸ್ ಕನೆಕ್ಟ್ ಆಗಿದೆ. ಏನೋ ಎಂಟು ಲಕ್ಷ ರೂಪಾಯಿಗಳ ಬಾಕಿ ಉಳಿದಿದೆಯಷ್ಟೆ. ಅದನ್ನು ಕಟ್ಟಿಲಿಕ್ಕೇ ಆಗಿಲ್ಲ. ಆಯವ್ಯಯದಲ್ಲಿ ಅದನ್ನು ಏಕೆ ತೊಡಗಿಸಿರಲಿಲ್ಲವೋ ಗೊತ್ತಾಗಲಿಲ್ಲ.

(ಈ ಹಂತದಲ್ಲಿ ಮಾನ್ಯ ಶ್ರೀ ಯು.ಆರ್. ಸಭಾಪತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಡಿಸ್ ಕನೆಕ್ಟ್ ಮಾಡಿದ್ದಾರೆ. ಈಗ ಮಳೆಯ ನೀರು ಕೊರತೆಯಾಗಿ ತುಂಗಾ ನದಿಯಲ್ಲಿ ಏತ ನೀರಾವರಿ ಯೋಜನೆ ಕೆಳಗಡೆ ಸಾಗುವಳಿ ಮಾಡತಕ್ಕಂಥ ರೈತರುಗಳಿಗೂ ಕೂಡ ಅಲ್ಲಿ ಸಾಗುವಳಿ ಮಾಡದೇ ಇರುವ ರೀತಿಯಾಗಿದೆ. ಕರೆಂಟ್ ಚಾರ್ಜ್‌ನ್ನೇ ಕಟ್ಟುವುದಕ್ಕೆ ಆಗದಿದ್ದರೆ ಆ ಸಣ್ಣ ನೀರಾವರಿ ಇಲಾಖೆ ಇದ್ದೂ ಏನು ಪ್ರಯೋಜನ ಸ್ವಾಮಿ? ಅದಕ್ಕೆ ಏಕೆ ಒಂದಷ್ಟು ಬಜೆಟ್‌ನಲ್ಲಿ ಹಣ ತೊಡಗಿಸುತ್ತೀರಿ? ಅಲ್ಲಿ ಏಕೆ ಒಂದಷ್ಟು ಇಂಜಿನಿಯರ್‌ಗಳನ್ನು ಇಡುತ್ತೀರಿ? ಬೇರೆ ಏನಾದರೂ ಮಾಡಿಕೊಂಡು ಆ ಕೆಲಸವನ್ನು ಪೂರ್ಣ ಮಾಡಲಿಕ್ಕೆ ಆಗುತ್ತದೆ. ಮಾನ್ಯ ಅಧ್ಯಕ್ಷರೆ, ಇವೊತ್ತಿಗೂ ಬಜೆಟ್‌ನಲ್ಲಿ ಸೇರಿರತಕ್ಕಂಥ ಕಾಮಗಾರಿಗಳು ನಾಲ್ಕು ವರ್ಷ, ಐದು ವರ್ಷಗಳಾದರೂ, ಏಕೆ ಇನ್ನೂ ಆಗಲಿಲ್ಲ ಏತ ನೀರಾವರಿ ಯೋಜನೆಗಳು ಎಂಬುದು ನಮಗೆ ಗೊತ್ತಾಗುತ್ತಿಲ್ಲ. ಪೈಪ್ ಖರೀದಿ ಮಾಡುವುದಿಲ್ಲ. ಏನೇನು ಮಾಡಲಿಕ್ಕೂ ಹಣವಿಲ್ಲ. ಇವೊತ್ತೇನು ಒಂದು ಕೋಟಿ, ಎರಡು ಕೋಟಿ, 50 ಲಕ್ಷ ರೂಪಾಯಿ, 80 ಲಕ್ಷ ರೂಪಾಯಿಗಳ ಕಾಮಗಾರಿಗಳು ಇರುತ್ತವೆ; ಇದಕ್ಕೆ ಪೈಪ್ ಖರೀದಿ ಮಾಡಲಿಕ್ಕೂ ಕೂಡ ಹಣವಿಲ್ಲ. ಪೈಪ್ ಖರೀದಿ ಮಾಡಲಿಕ್ಕೆ ನಿಮ್ಮ ಎಸ್.ಪಿ.ಡಿ. ರೇಟ್ ಕಾಂಟ್ರಾಕ್ಟ್‌ನವನು ಒಪ್ಪಲಿಲ್ಲ. ಪ್ರೈವೇಟ್‌ನಲ್ಲಿ ಎಲ್ಲೋ ಬಿಂಡರ್ ಕರೆಯಬೇಕು. ಹೀಗೆ ಏನೋ ಒಂದು ಕಥೆಗಳನ್ನು ಹೇಳುತ್ತಾ ಹೋಗುತ್ತಾರೆ. ನಮಗಿದು ಅರ್ಥವಾಗದೇ ಇರುವಂಥಾದ್ದು. ಎಲ್ಲಾ ಆದರ ಮೇಲೆ ಬಜೆಟ್‌ನಲ್ಲಿ ದುಡ್ಡಿಲ್ಲವೆಂದು ಹೇಳುತ್ತಾರೆ. ನಾನ್ ಹೇಳ್ತೀನಿ ಸಣ್ಣ ನೀರಾವರಿ ಇಲಾಖೆಗೆ ಇವೊತ್ತು ಯಾವ ಗುತ್ತಿಗೆದಾರನೂ ಕೆಲಸಕ್ಕೆ ಬರುವುದಿಲ್ಲ. ಏನು ಹೇಳಿದರೂ ಕೂಡ ಕೆಲಸ ಮಾಡುವುದಿಲ್ಲ. ಆಯಾಯ ವರ್ಷದ ಬಜೆಟ್ ನಲ್ಲಿ ಇರುವಂಥ ಕೆಲಸ ಆಯಾಯ ವರ್ಷ ಮುಗಿಯುವುದಿಲ್ಲ. ಏಕೆಂದರೆ ಇವೊತ್ತು ಕೆಲಸ ಮಾಡಿರುವಂಥ ಜನರಿಗೆ ಬಿಲ್ ಕೊಡದೇ ಇರುವುದರಿಂದ ಅವರೆಲ್ಲಾ ಹರಾಜೆದ್ದು ಹೋಗಿದ್ದಾರೆ. ಅವರು ಎಲ್ಲಿಲ್ಲೋ ಸಾಲ ಮಾಡಿ ತಂದು ಹಾಕಿ ಕೆಲಸ ಮಾಡಿದ್ದಾರೆ. ಇವೊತ್ತಿಗೂ ಕೂಡ ಬಡ್ಡಿ ತೆತ್ತುತ್ತಾ ಇದ್ದಾರೆ. ನಿಮಗೆ ಬಿಲ್ ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಎರಡು ವರ್ಷ, ಮೂರು ವರ್ಷವಾಗಿದೆ ಕೆಲಸ ಮಾಡಿ ಸಣ್ಣ ನೀರಾವರಿ ಇಲಾಖೆಯಲ್ಲಿ. ಎಷ್ಟು ಮೂರು ಲಕ್ಷ ಎರಡು ಲಕ್ಷ, ಒಂದು ಲಕ್ಷವನ್ನೂ ಕೂಡ ನೀವು ಕೊಡಲಿಕ್ಕೆ ಸಾಧ್ಯವಾಗ್ತಾ ಇಲ್ಲ. ಮೊನ್ನೆ ದಿನ ಯಾರೋ ಗುತ್ತಿಗೆದಾರರು ಹೇಳ್ತಾ ಇದ್ದರು. ಐದೈದು ಸಾವಿರ ರೂಪಾಯಿ ರಿಲೀಸ್ ಆಗಿದೆಯಂತೆ, ಐದೈದು

ಸಾವಿರ ರೂಪಾಯಿ ಚೆಕ್ ಕೊಡ್ತಾ ಇದ್ದಾರಂತೆ. ಐದು ಲಕ್ಷ ರೂಪಾಯಿ ಕೊಡುವವನಿಗೆ ಕೇವಲ ಐದು ಸಾವಿರ ರೂಪಾಯಿ ಚೆಕ್ ಕೊಟ್ಟಿದ್ದೀರಿ. ಈ ರೀತಿಯಾದರೆ ಏನೂ ಪ್ರಯೋಜನವಾಗುವುದಿಲ್ಲ. ಈ ರೀತಿಯಾಗಿ ಇದ್ದರೆ ಪ್ರಯೋಜನವಿಲ್ಲದೇ ಇಲಾಖೆಗಳನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ರೀತಿ ಆಯವ್ಯಯದಲ್ಲಿ ಇಡುವುದೇ ಒಂದು, ಕೊನೆಯಲ್ಲಿ ಖರ್ಚು ಮಾಡುವುದಕ್ಕೂ ಕೂಡ ಸಾಧ್ಯವಾಗುವುದಿಲ್ಲ. ಕಾಮಗಾರಿ ಆಯಾಯ ವರ್ಷ ಮುಗಿಯದೇ ಇದ್ದರೆ ಎಸ್.ಆರ್. ರೇಟ್‌ಗಳು ಜಾಸ್ತಿಯಾಗಿ ಇದನ್ನು ಮಾಡಲಿಕ್ಕೆ ಸಾಧ್ಯ ಆಗದೇ ಇರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ದಯವಿಟ್ಟು ಆ ಕರೆಂಟ್ ಬಿಲ್‌ನ್ನು ತಕ್ಷಣ ಕಟ್ಟಿಸುವಂಥ ವ್ಯವಸ್ಥೆ ಮಾಡದೇ ಇದ್ದರೆ ರೈತರಿಗೆ ತೊಂದರೆಯಾಗುತ್ತದೆ. ಈ ವರ್ಷ ಒಂದಷ್ಟು ಕರೆಂಟ್ ಬಿಲ್ ಕಟ್ಟಿಸಿದರೆ ಏತ ನೀರಾವರಿ ಕೆಳಗಡೆ ಬರುವ ರೈತರು ಒಂದಷ್ಟು ಬೆಳೆಯನ್ನು ಬೆಳೆದುಕೊಳ್ಳುತ್ತಾರೆ. ಮತ್ತ್ಯಾರೂ ನಮ್ಮ ತಾಲ್ಲೂಕುಗಳಲ್ಲಿ ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನು ದೊಡ್ಡ ನೀರಾವರಿ ಯೋಜನೆ ಬಗ್ಗೆ ಪುಟ ಸಂಖ್ಯೆ 58ರಲ್ಲಿ ಪ್ರಸ್ತಾಪ ಮಾಡಿದ್ದೀರಿ ತುಂಗಭದ್ರಾ ನದಿಗೆ ನಿರ್ಮಾಣವಾಗುತ್ತಿರುವ ಹೊಸ ಅಣೆಕಟ್ಟು ಮತ್ತು ಬಿಜಾಪುರದ ಹುಬ್ಬಳ್ಳಿ ರಸ್ತೆಯಲ್ಲಿರುವ ಮದಲಿಗೆ ಘಟ್ಟ ಸೇತುವೆ, ನವಲಗುಂದ ಹತ್ತಿರ ಬೆಣ್ಣೆಹೊಳೆಗೆ ಸೇತುವೆ ನಿರ್ಮಾಣಕ್ಕೆ ಇದು ಪಿಡಬ್ಲ್ಯೂಡಿಯದ್ದು, ಇದರಲ್ಲಿ ನೀವು ಹೇಳುತ್ತೀರಿ, ಕೇಂದ್ರದ್ದು ಪೂರ್ತಿ ಹಣ ಬಂದಿದೆ, ರಾಜ್ಯ ಸರ್ಕಾರದ್ದನ್ನು ತುಂಬುವುದಕ್ಕೆ 385 ಲಕ್ಷ ರೂಪಾಯಿಗಳನ್ನು ಅಭಿಯೋಜನೆಯಲ್ಲಿ ಸೇರಿಸಿದೆ ಎಂದು ಹೇಳುತ್ತೀರಿ. ಇವೊತ್ತು ಕೇಂದ್ರ ಸರ್ಕಾರದ ಹಣವನ್ನು, ರಾಜ್ಯದ ಪಾಲನ್ನು ಕಟ್ಟುವುದಕ್ಕೆ ಆಗದೇ ಕೇಂದ್ರದ ಹಣವನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ. ಇದರಿಂದಾಗಿ ಸಾಕಷ್ಟು ಕಾಮಗಾರಿಗಳು ಸ್ಥಗಿತವಾಗಿವೆ. ಸಾಕಷ್ಟು ಕೇಂದ್ರ ಪುರಸ್ಕೃತ ಯೋಜನೆಗಳು ಇವೊತ್ತು ನಮ್ಮಲ್ಲಿ ಅನುಷ್ಠಾನಕ್ಕೆ ತರುವುದಕ್ಕೆ ಸಾಧ್ಯವಾಗುತ್ತಿಲ್ಲ. ದಯವಿಟ್ಟು ಇದರ ಬಗ್ಗೆ ಯೋಜನೆ ಮಾಡಿ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ರಾಜ್ಯದ ಪಾಲು ಎಷ್ಟು ಕಟ್ಟಬೇಕೋ ಅಷ್ಟನ್ನು ಕಟ್ಟಿದರೆ ಯೋಚನೆ ಅನುಷ್ಠಾನ ಮಾಡಲು ಸಹಾಯಕವಾಗುತ್ತದೆ. ಈ ವಿಚಾರದಲ್ಲಿ ಇವೊತ್ತು ಆಂಧ್ರಪ್ರದೇಶ ಮತ್ತು ಬೇರೆ ಬೇರೆ ರಾಜ್ಯಗಳ ಬಗ್ಗೆ ಬಹಳ ಹೆಗ್ಗಳಿಕೆಯ ಮಾತನ್ನು ಹೇಳುತ್ತಾರೆ. ಏಕೆಂದರೆ ಒಂದು ಸಿಂಹಪಾಲನ್ನು ಬಜೆಟ್‌ನಲ್ಲಿ ಅವರು ಒದಗಿಸುತ್ತಾರೆ. ಏಕೆಂದರೆ ಕೇಂದ್ರದ ಹಣವನ್ನು ತೆಗೆದುಕೊಳ್ಳುವುದಕ್ಕೋಸ್ಕರ. ನಮ್ಮಲ್ಲಿ 25 ಪರ್ಸೆಂಟ್, 15 ಪರ್ಸೆಂಟು ಈ ರೀತಿಯಲ್ಲಿ ಕಾಲುಭಾಗ, ಅರ್ಧ ಭಾಗವನ್ನೂ ಕೂಡ ನಮಗೆ ಕಟ್ಟುವುದಕ್ಕೆ ಸಾಧ್ಯವಾಗದೇ ಇರುವುದರಿಂದಾಗಿಯೇ ಇವೊತ್ತು ಕೇಂದ್ರದ ಹಣವನ್ನು ನಾವು ಕಳೆದುಕೊಳ್ಳುವಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡಿದ್ದೇವೆ. ಇವೊತ್ತು ಕಂದಾಯ ಇಲಾಖೆಯಲ್ಲಿ ಭೂಮಿ ಕಿಯಾಸ್ಕ್‌ನಲ್ಲಿ ಸಂಗ್ರಹಿಸಿದ 241 ಲಕ್ಷ ರೂಪಾಯಿಗಳನ್ನು ಜಿಲ್ಲಾಧಿಕಾರಿಗಳ ವಿವಿಧ ಉದ್ದೇಶಗಳಿಗೆ ವಿನಿಯೋಗಿಸಲು ಸರ್ಕಾರ ಅನುಮತಿ ನೀಡಿದೆ. ಈ ಒಂದು ಭಾಗದಲ್ಲಿ ನಾನು ಹೇಳ್ತೇನೆ, ನಾವು ಮೊನ್ನೆ ಕೂಡ ಹೇಳಿದ್ದೇವೆ. ಅಧ್ಯಕ್ಷರೆ, ಇವೊತ್ತು ಏನಾಗಿದೆಯೆಂದರೆ ಒಂದು ಪಹಣಿಗೆ 15 ರೂಪಾಯಿಗಳನ್ನು ನಿಗಧಿ ಮಾಡಿ ತೆಗೆದುಕೊಳ್ಳುತ್ತಿದ್ದಾರೆ. ಇದು ಬಹಳ ಸಣ್ಣ ಮೊತ್ತವಾಗಿ ನಮಗೆ ಕಾಣಬಹುದು. ಆದರೆ ರೈತರಿಗೆ ತುಂಬಾ ದೊಡ್ಡ ಮೊತ್ತವಾಗುತ್ತದೆ. ರೈತ ಒಂದು ಪಹಣಿ ಪಡೆಯಬೇಕು ಎಂದರೆ ನಮ್ಮ ತಾಲ್ಲೂಕಿನಲ್ಲಿ 50 ರೂಪಾಯಿ ಖರ್ಚು ಮಾಡಿ ಬಸ್ ಚಾರ್ಜ್, ಅವನ ಊಟ ಬೆಳಿಗ್ಗೆಯಿಂದ ಸಂಜೆಯವರೆಗೆ ಮತ್ತು ಪ್ರಯಾಣ ಸೇರಿ 50 ರೂಪಾಯಿ ಖರ್ಚು ಮಾಡಿದರೆ ಪಹಣಿಗೆ 15

ರೂಪಾಯಿಯನ್ನು ಕಟ್ಟಬೇಕಾಗುತ್ತದೆ. ಮೊದಲು ವಿಲೇಜ್ ಅಕೌಂಟೆಂಟ್‌ಗೆ ಮೂರು ರೂಪಾಯಿ ಕೊಟ್ಟರೆ ಒಂದು ಪಹಣಿ ಸಿಗುತ್ತಿತ್ತು. ಇವೊತ್ತು 15 ರೂಪಾಯಿ ಎಂದು ಹೇಳಿದರೆ ಅದು ತುಂಬಾ ಜಾಸ್ತಿಯಾಗುತ್ತದೆ. ನಮ್ಮ ಒಂದೊಂದು ತಾಲ್ಲೂಕಿನಲ್ಲಿ ಈಗಾಗಲೇ ಮೂರು, ನಾಲ್ಕು ಲಕ್ಷ ರೂಪಾಯಿಗಳು ಉಳಿತಾಯವಾಗಿದೆ. ಕೇವಲ ಎಂಟು ತಿಂಗಳು, ಹತ್ತು ತಿಂಗಳಲ್ಲಿ 15 ರೂಪಾಯಿಯನ್ನು ಕಲೆಕ್ಟ್ ಮಾಡಿದ್ದರಿಂದಾಗಿ. ಇಷ್ಟು ಹಣವನ್ನು ನೀವು ಕಲೆಕ್ಟ್ ಮಾಡುವಂಥ ಅವಶ್ಯಕತೆ ಇಲ್ಲ. ಏಕೆಂದರೆ ರೈತರಿಂದ ಪಹಣಿ ಹೆಸರಿನಲ್ಲಿ ದುಡ್ಡು ಕಲೆಕ್ಟ್ ಮಾಡಿ ಬೇರೆ ಯಾವುದೋ ಯೋಜನೆಗೆ ಉಪಯೋಗಿಸುವಂಥ ಅವಶ್ಯಕತೆ ಇಲ್ಲವೆಂದು ನಾನು ಅಂದುಕೊಂಡಿದ್ದೇನೆ. ಹಾಗಾಗಿ ಈ ಹಣ ಈಗೇನು ಒಟ್ಟಾಗಿದೆ ಇದನ್ನು ಬೇರೆ ಬೇರೆ ಭಾಗಗಳಿಗೆ ಅನ್ನುವುದಕ್ಕಿಂತಲೂ ಕೂಡ ಹೋಬಳಿ ಮಟ್ಟದಲ್ಲಿ, ಪಂಚಾಯತಿ ಮಟ್ಟದಲ್ಲಿ ಈ ರೀತಿ ಕಂಪ್ಯೂಟರೀಕರಣ ಮಾಡಲಿಕ್ಕೋಸ್ಕರ ವಿನಿಯೋಗ ಮಾಡುವಂಥಾದ್ದು ಒಳ್ಳೆಯದು. ಆಯಾಯ ಜಿಲ್ಲೆಯಲ್ಲಿ ಒಟ್ಟಾಗಿರತಕ್ಕಂಥ ಹಣವನ್ನು ಆಯಾಯ ಜಿಲ್ಲೆಗೆ ಕೊಟ್ಟರೆ ಒಳ್ಳೆಯದಾಗುತ್ತದೆ ಎಂದು ನನ್ನ ಅನ್ನಿಸಿಕೆ. ಅವರು ಮಲೆನಾಡು ಅಭಿವೃದ್ಧಿ ಬೋರ್ಡಿನ ಬಗ್ಗೆ ಹೇಳಿದರು. ದಯಮಾಡಿ ಮಲೆನಾಡು ಅಭಿವೃದ್ಧಿ ಬೋರ್ಡ್‌ನ್ನು ಮುಚ್ಚುವಂತಾದ್ದು ತುಂಬಾ ಒಳ್ಳೆಯದು ಎಂದು ನನಗೂ ಕೂಡ ಅನ್ನಿಸುತ್ತಿದೆ. ಏಕೆಂದರೆ ಮೂರು ಲಕ್ಷ, ಅಥವಾ ಎರಡು ಲಕ್ಷ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದರೆ ನಾವು ಈಗ 78 ಜನ ಶಾಸಕರು ಮಲೆನಾಡು ಅಭಿವೃದ್ಧಿ ಪ್ರದೇಶದಿಂದ ಬರತಕ್ಕಂಥವರಾಗಿದ್ದೇವೆ. ಸುಮ್ಮನೆ ಶಿವಮೊಗ್ಗದಲ್ಲಿ ಒಂದು ದೊಡ್ಡ ಬಿಲ್ಡಿಂಗ್, ಆ ಸೆಕ್ರೆಟರಿ, ಐ.ಎ.ಎಸ್. ಅಧಿಕಾರಿ, ಅವರ ಕೆಳಗಡೆ ಒಂದಷ್ಟು ಜನ ಅಸಿಸ್ಟೆಂಟ್ ಸೆಕ್ರೆಟರಿಗಳು, ಡೆಪ್ಯೂಟಿ ಸೆಕ್ರೆಟರಿ, ಸಿ.ಎ.ಓ.ಗಳು, ಈ ರೀತಿಯ ಅನಾವಶ್ಯವಾದ ಖರ್ಚನ್ನು ಕಡಿಮೆ ಮಾಡುವುದಕ್ಕೆ ಏನಾದರೂ ಒಂದು ಪ್ರಯತ್ನವನ್ನು ಮಾಡಬೇಕಾಗುತ್ತದೆ. ನಮಗೆ ಅಲ್ಲಿ ಜನ ಕೇಳ್ತಾರೆ, ಏನ್ರಿ, ಮಲೆನಾಡು ಅಭಿವೃದ್ಧಿ ಬೋರ್ಡ್‌ನಲ್ಲಿ ನಿಮಗೆ ಹಣ ಬರುವುದಿಲ್ಲವೇ? ನಮ್ಮೂರಿನ ರಸ್ತೆಗೆ ಏಕೆ ಕೊಡುವುದಿಲ್ಲ? ನಮ್ಮೂರಿನ ಸೇತುವೆಗೆ ಏಕೆ ಕೊಡುವುದಿಲ್ಲ ಎಂದು ಕೇಳುತ್ತಾರೆ. ಮೊದಲೆಲ್ಲಾ 40, 50 ಲಕ್ಷ ರೂ. ಕೊಡುತ್ತಾ ಇದ್ದದ್ದು ಈಗ ಬರೀ 5 ಲಕ್ಷ ರೂ. ಗೆ ಬಂತು. ಈಗ ಈ ವರ್ಷ ಏನೂ ಇಲ್ಲವೆಂದು ಹೇಳಿದ್ದಾರೆ. ಈ ದೃಷ್ಟಿಯಿಂದ ಇಲ್ಲಿ ಬೋರ್ಡ್‌ನ್ನು ಮುಚ್ಚಿ, ಶಾಸಕರಿಗೆ ಇರತಕ್ಕಂಥ ಅನುದಾನವನ್ನಾದರೂ ಕೂಡ ಜಾಸ್ತಿ ಮಾಡುವಂಥ ಪ್ರಯತ್ನವನ್ನಾದರೂ ಕೂಡ ಮಾಡಿದರೆ ಒಳ್ಳೆಯದಾಗುತ್ತದೆ. ಇದರ ಬಗ್ಗೆಯೂ ಕೂಡ ತಾವು ಪರಿಶೀಲನೆ ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ವಿನಂತಿ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಸನ್ಮಾನ್ಯ ವೈಸ್ ಛೇರ್ಮನ್‌ರವರೆ, ಈಗ ಅಧ್ಯಕ್ಷರಿಲ್ಲ. ರಾಜೀನಾಮೆ ಕೊಟ್ಟ ತಾವು ಈಗ ಸದನಕ್ಕೆ ಬಂದು ಏಕ್‌ದಂ ಇವೊತ್ತು ಅಧ್ಯಕ್ಷರಾಗಿ ಬಿಟ್ಟಿದ್ದೀರಿ. ನಮಗೆ ಬಹಳ ಸಂತೋಷವಾಗಿದೆ. ತಾವು ರಾಜೀನಾಮೆ ಕೊಟ್ಟಿರುವುದಕ್ಕೆ ಬಹಳ ದುಃಖ ವ್ಯಕ್ತಪಡಿಸಿದ್ದೆವು ಆದರೆ ಇವೊತ್ತು ಸುದೈವದಿಂದ ಇವೊತ್ತು ನಮ್ಮ ಸಭಾಧ್ಯಕ್ಷರಾಗಿದ್ದೀರಿ.

ಶ್ರೀ ಎಸ್.ಎಂ. ಕೃಷ್ಣ : ಅವರು ರಾಜೀನಾಮೆ ಕೊಟ್ಟು ಬಂದು ಏಕ್‌ದಂ ಅಧ್ಯಕ್ಷರಾಗಿ ಹೋಗಿದ್ದಾರೆ ಈಗ.

ಶ್ರೀ ಎಸ್.ಎಸ್. ಪಾಟೀಲ್ : ಹುಟ್ಟು ಸಭಾಪತಿಗಳು ಅವರು. ನೀವು ಮತ್ತೆ ರಾಜೀನಾಮೆ ಕೊಡಬೇಡಿ.

5.10 ಪಿ.ಎಂ.

ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ನಿನ್ನೆ ತಾವು ಇರಲಿಲ್ಲ. ನಮ್ಮ ಅಧ್ಯಕ್ಷರು ಇರಬೇಕಾಗಿತ್ತು. ಏಕೆಂದರೆ ಅವರು ನಮಗೆ ಬಯಲು ಸೀಮೆಗೆ ಬರುತ್ತಾರೆ. ಇದಕ್ಕೆ ಮಂತ್ರಿಗಳೇ ಇಲ್ಲ ಎಂದು ನಾವು ತಿಳಿದುಕೊಂಡಿದ್ದೆವು ಮಾನ್ಯ ಮುಖ್ಯಮಂತ್ರಿಗಳೇ ಅದಕ್ಕೆ ಯಾರು ಮಂತ್ರಿಗಳೆಂದು ಖಚಿತವಾಗಿ ಗೊತ್ತಿರಲಿಲ್ಲ. ಗೊತ್ತಾಗಿದ್ದು ಮೊನ್ನೆ ಲಿಖಿತ ಪ್ರಶ್ನೆಗೆ ಉತ್ತರ ಬಂದು, ಇಂತಹವರು ಒಬ್ಬರು ಬಯಲು ಸೀಮೆಗೆ ಮಂತ್ರಿಯಾಗಿದ್ದಾರೆ ಎಂದು? ಇದನ್ನು ಮಾನ್ಯ ರಾಜುಗೌಡರಿಗೆ ಕೊಟ್ಟಿದ್ದೀರಿ. ಅವರು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಏನಾದರೂ ಇದಕ್ಕೆ ಕೊಟ್ಟಿದ್ದಾರಾ ಎಂದು ನೋಡಿದರೆ ಪೂರಕ ಅಂದಾಜಿನಲ್ಲಿ ಏನೂ ದುಡ್ಡಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಬಯಲುಸೀಮೆ ಎಂದತಕ್ಷಣ ಎದ್ದು ಹೋಗಿಬಿಟ್ಟಿರಿ. ಹೀಗೆ ಇದೆ ನಮ್ಮ ಬಯಲು ಸೀಮೆ ಪರಿಸ್ಥಿತಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಬರುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ : ತಾವೂ ಕೂಡ ಬಯಲು ಸೀಮೆಗೆ ಬರುತ್ತೀರಿ.ದಯವಿಟ್ಟು ಮಾನ್ಯ ಮಂತ್ರಿಗಳು ಒಂದು ಕ್ಷೇತ್ರಕ್ಕೆ ಒಂದು ಕೋಟಿ ರೂಪಾಯಿ ಕೊಡುವ ಹಾಗೆ ವ್ಯವಸ್ಥೆ ಮಾಡಿ. ಇಲ್ಲದೇ ಇದ್ದರೆ ಬಯಲುಸೀಮೆ ಬಂದ್ ಮಾಡಿಬಿಡಿ. ಇದರಲ್ಲಿ ಏನಾದರೂ ಕೊಡುತ್ತೀರಾ ಎಂದು ನೋಡಿದರೆ, ಅದರ ಬಗ್ಗೆ ಏನೂ ಹೇಳಲಿಲ್ಲ. ಯಾವ ಭರವಸೆ ಕೂಡ ಇಲ್ಲ. ಒಂದು ಸಂತೋಷದ ಸಂಗತಿ ಎಂದರೆ, ಮಾನ್ಯ ಕೃಷಿ ಸಚಿವರು ದಯವಿಟ್ಟು ಈ ಕಡೆ ನೋಡಿ. ನಿಮ್ಮ ಇನ್ಸೂರೆನ್ಸ್‌ಗೆ ಈಗಾಗಲೇ 23.59 ಲಕ್ಷ ರೂಪಾಯಿಗಳನ್ನು ಪೂರಕ ಅಂದಾಜಿನಲ್ಲಿ ತೆಗೆದುಕೊಂಡಿದ್ದೀರಿ. ಆದರೆ ಪೂರಕ ಅಂದಾಜಿನಲ್ಲಿ ಇದನ್ನು ಬಿಡುಗಡೆ ಮಾಡಿದ್ದೀರೋ ಅಥವಾ ಇಲ್ಲವೋ ಗೊತ್ತಿಲ್ಲ. ಅದು ಅಂದಾಜಿನಲ್ಲಿ ಇದೆಯೋ ಏನೋ? ಆದರೆ ರೊಕ್ಕ ಇವತ್ತಿನವರೆಗೂ ಕೂಡ ಜಮಾ ಆಗಿಲ್ಲ. ಇವತ್ತು ನಮ್ಮಲ್ಲಿ ಪರಿಸ್ಥಿತಿ ಏನಾಗಿದೆ ಎಂದು ಹೇಳುತ್ತೇನೆ. ನಮ್ಮಲ್ಲಿ ಒಂದು ಸುದ್ದಿ ಬಂತು, ಏನೆಂದರೆ ಈ ಇನ್ಸೂರೆನ್ಸ್ ಬಗ್ಗೆ ಈಗಾಗಲೇ ಸತ್ಯಾಗ್ರಹ ನಡೆದಿದೆ. ತಮಗೆಲ್ಲಾ ಗೊತ್ತಿರಬೇಕು, ನಮ್ಮ ಧಾರವಾಡದಲ್ಲಿ ತಾಲ್ಲೂಕಿನಲ್ಲಿ ಶಿರಹಟ್ಟಿಯಲ್ಲಿ ಸತ್ಯಾಗ್ರಹ ನಡೆದಿದೆ. ಈ ಇನ್ಸೂರೆನ್ಸ್ ರೊಕ್ಕ ತುಂಬಿದ್ದೀರಿ. ಅಲ್ಲಿ ಜಮಾ ಆಗಿಲ್ಲ, ಜಮಾ ಆಗುತ್ತದೆ. ರೈತರು ಇಷ್ಟು ದಿನ ತಡೆದುಕೊಂಡಿದ್ದಾರೆ, ಇನ್ನೂ ತಡೆದುಕೊಳ್ಳುತ್ತಾರೆ ಆ ಮಾತು ಬೇರೆ. ಆದರೆ ಏನಾಗಿದೆ ಎಂದರೆ ಒಂದು ಹೆಕ್ಟೇರ್‌ಗೆ 11 ಸಾವಿರ ರೂ. ಇನ್ಸೂರೆನ್ಸ್‌ನ್ನೂ ರೈತರು ತುಂಬಿದ್ದಾರೆ. ಅದು ಎಷ್ಟು ಪರ್ಸೆಂಟ್ ಆಗುತ್ತದೆ ಎಂದರೆ, ಈಗ ನಮ್ಮಲ್ಲಿ 40-50 ಪರ್ಸೆಂಟ್ ಎಂದ್ಹೇಳಿ ಸಾಮಾನ್ಯವಾಗಿ ಆರು ಸಾವಿರ ರೂಪಾಯಿ ತುಂಬಬೇಕಾಗಿತ್ತು. ಆದರೆ ಅದರಲ್ಲಿ ಏನು ಮಾಡಿದ್ದಾರೆ ಎಂದರೆ ಅದನ್ನು ಕಟ್ ಮಾಡಿ ನಾಲ್ಕು ಸಾವಿರ ರೂಪಾಯಿಗೆ ಇಳಿಸಿದ್ದಾರೆ. ನಾಲ್ಕು ಸಾವಿರ ರೂಪಾಯಿ ತುಂಬುವುದಕ್ಕೆ ಹತ್ತಿದ್ದಾರೆ. ಈಗ ನಡೆದಿರುವುದು ಅದು. ಇದು ಏಕೆ ಹೀಗಾಗುತ್ತದೆಂದು ಉತ್ತರ ತರಿಸಿ ಹೇಳಬೇಕಾಗುತ್ತದೆ.

ಶ್ರೀ ವಿ.ಎಸ್. ಕೌಜಲಗಿ : ನಾನು ಧಾರವಾಡ ಜಿಲ್ಲೆಗೆ ಹೋಗಿ ಬಂದೆ. ಸುಮಾರು ಆರು ಕೋಟಿ ನಲ್ವತ್ತು ಲಕ್ಷ ರೂಪಾಯಿಗಳು ಬಿಡುಗಡೆ ಮಾಡಿದೆ. ತಾವು ಶಿರಹಟ್ಟಿ ಬಗ್ಗೆ ಹೇಳಿದಿರಿ, ಅದನ್ನೂ ಸಹ ಪರಿಶೀಲನೆ ಮಾಡಿದ್ದೇನೆ. ಈಗ ಏನು ತೋಂದರೆ ಆಯಿತು ಎಂದರೆ, ನಮಗೆ 18 ಕೋಟಿ ರೂಪಾಯಿಗಳ ಅಂದಾಜು ಅಷ್ಟೇ ಬಿಡುಗಡೆಗೆ ಉಳಿದಿದೆ. 132 ಕೋಟಿ

ರೂಪಾಯಿಯೊಳಗೆ ಎಲ್ಲಾ ಕೊಟ್ಟು ಇನ್ನು 18 ಕೋಟಿ ರೂಪಾಯಿಗಳು ಮಾತ್ರ, ಎಲ್ಲಿ ಡಿಸ್ಪ್ಯೂಟ್ ಇದೆ, ತೊಂದರೆ ಇದೆ, ಉದಾಹರಣೆಗೆ ಕೆಲವು ರೈತರು ಏನು ಮಾಡಿದ್ದಾರೆಂದರೆ ಹೆಚ್ಚಿನ ಕಂತನ್ನು ಕಟ್ಟಿದ್ದಾರೆ. ಎಷ್ಟು ಎಕರೆಗೆ ಬಿತ್ತಿದ್ದಾರೆ ಅದಕ್ಕಿಂತ ಹೆಚ್ಚು ಇವರು ಕಟ್ಟಿದ್ದಾರೆ. ಈ ಸಮಸ್ಯೆಗಳು ಇರುವುದರಿಂದ ಇನ್ನೂ 18 ಕೋಟಿ ರೂಪಾಯಿಗಳು ಇದರ ವಿಚಾರದಲ್ಲಿ ಸೆಟ್ಲ್ ಆಗಬೇಕಾಗಿದೆ. ಉಳಿದಂತಹ ಹಣವೆಲ್ಲಾ ಕೊಟ್ಟಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಚೇರ್‌ಮನ್‌ರವರೆ, ಶಿರಹಟ್ಟಿ ತಾಲ್ಲೂಕಿನ ಶಾಸಕರು ಇದ್ದಾರೆ. ಅಲ್ಲಿ ಒಬ್ಬ ರೈತರಿಗೂ ಕೂಡ ಇನ್ಸೂರೆನ್ಸ್ ಕೊಟ್ಟಿಲ್ಲ. ಏಕೆಂದರೆ ಅಲ್ಲಿ ಸರಿಯಾಗಿ ಸರ್ವೆ ಮಾಡಿಲ್ಲ. ಯಾರು ಶಿರಹಟ್ಟಿ ತಾಲ್ಲೂಕಿನಲ್ಲಿ ಪ್ರೀಮಿಯಂ ತುಂಬಿದ್ದಾರೆ ಆ ಲಿಸ್ಟ್ ಇಲ್ಲ. ಅಲ್ಲಿ ಕ್ರಾಪ್ ಇನ್ಸೂರೆನ್ಸ್ ಅಮೌಂಟ್ ಕೊಟ್ಟಿಲ್ಲ. ಸರ್ವೇ ಕೂಡ ಸರಿಯಾಗಿ ಮಾಡಿಲ್ಲ. ಅಲ್ಲಿ ರೈತರು ಏನು ಪ್ರೀಮಿಯಂ ತುಂಬಿದ್ದಾರೆ ಅವರು ಇವತ್ತಿಗೂ ಪರಿತಪಿಸುತ್ತಿದ್ದಾರೆ. ಇದರಲ್ಲಿ ಮುಂಡರಗಿ ಎಲ್ಲಾ ಸೇರಿದೆ. ಶಿರಹಟ್ಟಿ ತಾಲ್ಲೂಕಿನ ಒಬ್ಬ ರೈತರಿಗೂ ಕ್ರಾಪ್ ಇನ್ಸೂರೆನ್ಸ್ ಬೆನಿಫಿಟ್ ಸಿಕ್ಕಿಲ್ಲ. ಅಲ್ಲಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಅಧಿಕಾರಿಗಳ ತಪ್ಪಿನಿಂದ ರೈತರು ಸಫರ್ ಆಗುತ್ತಿದ್ದಾರೆ.

ಶ್ರೀ ಜೆ.ಎಸ್. ಗಡ್ಡದೇವರಮಠ್ : ಮಾನ್ಯ ಚೇರ್‌ಮನ್‌ರವರೆ, ಶಿರಹಟ್ಟಿ ಮತಕ್ಷೇತ್ರದಲ್ಲಿ ಸುಮಾರು 3700 ಜನ ರೈತರು ಪ್ರೀಮಿಯಂ ತುಂಬಿದ್ದಾರೆ. ಸುಮಾರು ಐದು ಬೆಳೆಗಳಿಗೆ ವಿಮೆ ಲಾಭವಾಗಿದೆ. ಆದರೆ ದುರ್ದೈವದ ಸಂಗತಿ ಎಂದರೆ ಅಲ್ಲಿ ಒಂದು ಬೆಳೆಗೂ ಕೂಡ ವಿಮೆ ಕೊಡುವ ಕೆಲಸವಾಗಿಲ್ಲ. ಆದರೆ ತೊಗರಿ ಬೆಳೆಗೆ ಸುಮಾರು 47 ಜನ ರೈತರು ವಿಮೆ ಕಟ್ಟಿದ್ದು ಅಲ್ಲಿ ಮುಖ್ಯವಾಗಿ ಎರಡು ಹೋಬಳಿಗಳು ಬರುತ್ತವೆ. ಲಕ್ಷ್ಮೇಶ್ವರ ಮತ್ತು ಶಿರಹಟ್ಟಿ ಲಕ್ಷ್ಮೇಶ್ವರಭಾಗದಲ್ಲಿ ತೊಗರಿ ಬೆಳೆ ಬೆಳೆದಂತಹ ಸುಮಾರು 15 ರಿಂದ 20 ಜನ ರೈತರಿಗೆ ಮಾತ್ರ ಬೆಳೆ ವಿಮೆ ಲಾಭವಾಗಿದೆ ಎಂದು ತಿಳಿಸಿದ್ದಾರೆ. ಇದರ ಬಗ್ಗೆ ನಾವು ಚುಕ್ಕೆ ಗುರುತಿನ ಪ್ರಶ್ನೆಯನ್ನು ಸಹ ಹಾಕಿದ್ದೇವೆ. ಆದರೆ ಅದು 19ನೇ ತಾರೀಖು ಇದ್ದದ್ದು 2ನೇ ತಾರೀಖಿಗೆ ಬಂತು. ಮತ್ತೆ ಅದು 2ನೇ ತಾರೀಖಿನಿಂದ ಯಾವ ತಾರೀಖಿಗೆ ಬರುತ್ತದೆಂಬುದು ನಮಗೆ ತಿಳಿದಿಲ್ಲ. ಇದು ನಮ್ಮ ದುರ್ದೈವ ಎಂದು ನಾವು ಭಾವಿಸಿಕೊಂಡಿದ್ದೇವೆ. ಈ ಸದನದೊಳಗೆ ಏನೇನೋ ವಿಚಾರಗಳು ನಡೆಯುತ್ತವೆ, ಆದರೆ ಪ್ರಮುಖವಾಗಿ ಯಾರು ಈ ದೇಶದ ಬೆನ್ನೆಲುಬು ರೈತ ಎಂದು ಹೇಳುತ್ತೇವೆ, ಆ ರೈತರ ಬಗ್ಗೆ ಇಂತಹ ಕಠಿಣವಾದಂತಹ ಪ್ರಸಂಗವನ್ನು ಎದುರಿಸುವಂತಹ ಸಂದರ್ಭದಲ್ಲಿ ಆ ಸಮಸ್ಯೆಗಳ ಬಗ್ಗೆ ಮಾತನಾಡಲು ಅವಕಾಶ ಸಿಗದೆ ಇರುವುದು ನಿಜವಾಗಲೂ ಬಹಳ ದುರ್ದೈವವೆ ಎಂದು ಭಾವಿಸಿಕೊಂಡಿದ್ದೇನೆ. ಆದರೆ ಒಂದು ಹಕ್ಕೀಕತ್ತು ಏನಾಗಿದೆ ಎಂದರೆ, ಒಂದು ಜಿಗುಪ್ಸೆ ಭಾವನೆ ಈ ಶಿರಹಟ್ಟಿ ತಾಲ್ಲೂಕಿನ ರೈತರಿಗಾಗುತ್ತಿದೆ. ಇವತ್ತು ಸಾಮಾನ್ಯವಾಗಿ ಇನ್ಸೂರೆನ್ಸ್ ಪ್ರೀಮಿಯಂ ತುಂಬಿದರೆ ನಮಗೆ ಇನ್ಸೂರೆನ್ಸ್ ಬರುತ್ತದೆಂದು ಆಶಾದಾಯಕವಾದಂತಹ ರೀತಿಯಲ್ಲಿ ಇದ್ದರು. ಆ ಇನ್ಸೂರೆನ್ಸ್ ಹಣ ಜೂನ್ ಒಳಗೆ ಬರುತ್ತದೆಂದು ಆಸೆ ಇತ್ತು. ಆದರೆ ಜೂನ್ ಬಂದು ಎಲ್ಲಾ ತಾಲ್ಲೂಕಿನಲ್ಲಿ ಈ ಇನ್ಸೂರೆನ್ಸ್ ಹಣ ಕೊಡುತ್ತಿದ್ದರೂ, ನಮ್ಮ ಶಿರಹಟ್ಟಿ ತಾಲ್ಲೂಕಿನಲ್ಲಿ ಮಾತ್ರ ಲಾಗುವಾಗಿಲ್ಲ, ಕೊಡುತ್ತಿಲ್ಲವೆಂದರೆ, ನಿಜವಾಗಲೂ ಅಲ್ಲಿನ ರೈತರು ಬಹಳ ಕಂಗಾಲಾಗಿದ್ದಾರೆ. ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಮೊನ್ನೆ ತಹಸೀಲ್ದಾರ್ ಆಫೀಸಿಗೆ ಸಹ ಘೇರಾವ್ ಮಾಡಿದ್ದರು. ಇದನ್ನು ಸರ್ಕಾರದ ಗಮನಕ್ಕೆ ತರುವಂತಹ ವ್ಯವಸ್ಥೆಯನ್ನು ಸಹ

ಮಾಡಿದ್ದೇವೆ. ಆ ದಿಸೆಯಲ್ಲಿ ಅಲ್ಲಿ ಪರಿಸ್ಥಿತಿ ಇನ್ನೂ ಸಹಿತ ಕಠಿಣವಾಗಿದೆ. ಇದರಲ್ಲಿ ಅನೇಕ ಮಾರ್ಪಾಡು ಆಗಬೇಕಾಗಿದೆ. ತಮಗೆಲ್ಲರಿಗೂ ಗೊತ್ತಿದ್ದ ಹಾಗೆ ಹೋದವರ್ಷ ಭೀಕರವಾದಂತಹ ಬರಗಾಲ ಪರಿಸ್ಥಿತಿ ಇದ್ದು, ನನ್ನ ಮತಕ್ಷೇತ್ರದಲ್ಲಿ ದನಗಳಿಗೆ ತಿನ್ನುವುದಕ್ಕೆ ಸೊಪ್ಪು ಸಹ ಇರಲಿಲ್ಲ. ಜೋಳದ ದಂಟುಗಳನ್ನು ಅಲ್ಲಿ ಜಾನುವಾರುಗಳಿಗೆ ಮೇಯಿಸುತ್ತಿದ್ದೆವು. ಹಾಗೆ ದಂಟುಗಳು ಇಲ್ಲದೆ ಇರುವ ಕಾರಣದಿಂದ ಸರ್ಕಾರ ಗೋಶಾಲೆಗಳನ್ನು ಪ್ರಾರಂಭ ಮಾಡಿತು. ಆದರೆ ಜೋಳದ ಥ್ರೆಶೋಲ್ಡ್ ಯೀಲ್ಡ್ ತೋರಿಸುವಂತಹ ಸಂದರ್ಭದಲ್ಲಿ ಹೆಚ್ಚಿಗೆ ಥ್ರೆಶೋಲ್ಡ್ ಯೀಲ್ಡ್ ತೋರಿಸಿದ್ದಕ್ಕೆ ಜೋಳಕ್ಕೆ ವಿಮೆ ಲಾಗು ಆಗಿತ್ತು. ಇದು ಬಹಳ ದುರ್ದೈವದ ಸಂಗತಿ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ದಿಸೆಯಲ್ಲಿ ಇವತ್ತು ಜಾನುವಾರುಗಳು ತಿನ್ನುವುದಕ್ಕೆ ಮೇವು ಇಲ್ಲದೇ ಇರುವಂತಹ ಪರಿಸ್ಥಿತಿಯೊಳಗೆ ಹೇಗೆ ಅವರು ಥ್ರೆಶೋಲ್ಡ್‌ಯೀಲ್ಡ್ ಜೋಳಕ್ಕೆ ಹೆಚ್ಚಿಗೆ ಬಂತು ಎಂದು ತೋರಿಸುತ್ತಾರೆ, ಇದು ನಿಜವಾಗಲೂ ಬಹಳ ಆಶ್ಚರ್ಯಕರವಾದಂತಹ ಸಂಗತಿಯಾಗಿದೆ. ಆದಕ್ಕೆ ಅಲ್ಲಿ ಇವತ್ತು ಒಂದು ಸಂಶಯ ರೈತರಿಗೆ ಬಂದಿದೆ. ಇವತ್ತು ತಾಲ್ಲೂಕು ಮಟ್ಟದಲ್ಲಿ ಕ್ರಾಪ್ ಕಟ್ಟಿಂಗ್ ಎಕ್ಸ್‌ಪೆರಿಮೆಂಟ್ ಎಂದು ವಿಮೆಯವರು ಮಾಡುತ್ತಿದ್ದಾರೆ, ಅದರಲ್ಲಿ ಬಹಳ ಶುದ್ಧವಾದಂತಹ ತಪ್ಪಿದೆ. ಆ ಪದ್ಧತಿಯೊಳಗೆ ಮಾರ್ಪಾಡಾದರೆ ಬಹಳ ಅನುಕೂಲವಾಗುತ್ತದೆ. ಈಗ ನೀವು ಏನು ತಾಲ್ಲೂಕಿಗೆ 15 ಭಾಗಗಳನ್ನು ಮಾಡಿ ಅಲ್ಲಿ ಕ್ರಾಪ್ ಕಟಿಂಗ್ ಎಕ್ಸ್ ಪೆರಿಮೆಂಟ್ ಮಾಡುತ್ತಿರೋ ಅದರ ಬದಲಿಗೆ ಪಂಚಾಯತ್ ಮಟ್ಟಕ್ಕೆ ಸಹ ಅದನ್ನು ತೆಗೆದುಕೊಂಡು ಹೋಗಿ ಕ್ರಾಪ್ ಕಟಿಂಗ್ ಎಕ್ಸ್‌ಪೆರಿಮೆಂಟ್ ಮಾಡಿದರು ಅಲ್ಲಿ ಕ್ರಾಪ್ ಕಟಿಂಗ್ ಎಕ್ಸ್ ಪರಿಮೆಂಟ್ ಆಗುವಂತಹ ಸಂದರ್ಭದಲ್ಲಿ ಅಲ್ಲಿ ಇರುವಂತಹ ನಾನ್ ಪೊಲಿಟಿಕಲ್ ಆರ್ಗನೈಸೇಷನ್ ಆಗಲಿ ಅಥವಾ ರೈತ ಮುಖಂಡರುಗಳಾಗಲಿ ಅವರ ಸಮಕ್ಷಮದಲ್ಲಿ ಮಾಡಿದ್ದಾರೆ, ನಮ್ಮ ಸರ್ಕಾರ ಇವತ್ತೇನು ಪಾರದರ್ಶಕ ಆಡಳಿತ ಎಂದು ಹೇಳುತ್ತಿದೆ, ಅದಕ್ಕೆ ನಿಜವಾಗಿ ಕೂಡ ಒಂದು ಅರ್ಥ ಬರುತ್ತದೆ. ಈ ರೀತಿ ಮಾಡಿದಾಗ ರೈತರಿಗೂ ಕೂಡ ಕನ್‌ವಿನ್ಸ್ ಆಗುತ್ತದೆ. ಆ ದಿಸೆಯಲ್ಲಿ ನನ್ನ ತಾಲ್ಲೂಕಿನ, ಅದರಲ್ಲೂ ವಿಶೇಷವಾಗಿ ಶಿರಹಟ್ಟಿ ತಾಲ್ಲೂಕಿನ ರೈತರಿಗೆ ಬಹಳ ದುಃಖಕ್ಕೀಡಾಗಿದ್ದಾರೆ. ಈ ದಿಸೆಯಲ್ಲಿ ಸರ್ಕಾರ ಮುತುವರ್ಜಿ ವಹಿಸಿ ದುಃಖಕ್ಕೊಳಗಾದಂತಹ ರೈತರಿಗೆ ಒಂದು ಮಾರ್ಗದರ್ಶನವನ್ನು ಮಾಡುವುದಕ್ಕೆ ಅವರಿಗೆ ಬೇರೆ ಯಾವುದಾದರೂ ರೂಪದಲ್ಲಿ ಪರಿಹಾರ ಸಿಗುವಂತೆ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಹೇಳಿ ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಚೇರ್ ಮನ್ ರವರೆ, ಈ ಡಿಸ್ಪ್ಯೂಟ್ ಅಮೌಂಟ್ ಸಹ ತಾಂತ್ರಿಕವಾಗಿ ಅವರು ಏನು ಪ್ರೀಮಿಯಂ ತುಂಬಿದರು ಈ ಪ್ರಪೋಸಲ್ಸ್ ಬಂದು ಬ್ಯಾಂಕ್ ಮತ್ತು ಇನ್ಸೂರೆನ್ಸ್ ಕಂಪನಿಗಳೆಲ್ಲಾ ಸೇರಿ ಪೈನಲ್ ಮಾಡಿದರೂ ದುಡ್ಡು ಮಾತ್ರ ತುಂಬುವುದಿದೆ ಎಂದು ಹೇಳಿದರು. ಹೀಗಾಗಿ ಅದನ್ನು ವಾಪಸ್ಸು ಎಂದರೆ ಜಿಲ್ಲಾಧಿಕಾರಿಗಳಿಗೆ ಅವೆರಡು ಸರಿಯಾಗಿದೆ ಎಂದು ತಿಳಿದುಕೊಳ್ಳುವುದಕ್ಕೆ ಅಥವಾ ಹೋಲಿಕೆ ಮಾಡಿ ನೋಡಿ ಮತ್ತೊಂದು ವರದಿ ಕೊಡುವುದಕ್ಕೆ ಕಳುಹಿಸಿದ್ದಾರೆ. ಇದು ಹೋದವರ್ಷ ಕೊಟ್ಟಿದ್ದು. ಪಾಪ ರೈತರು ಕಟ್ಟಿದರು, ಆ ಪಹಣಿ ಏನಿತ್ತು ಅದನ್ನು ಕೊಟ್ಟರು. ಅವರು ಏನು ಪಡೆದುಕೊಂಡಿದ್ದರು ಅದರ ಆಧಾರದ ಮೇಲೆ ಪ್ರೋಸೆಸ್ ಆಯಿತು. ಈಗ ಅದನ್ನು ತಾಂತ್ರಿಕ ದೋಷ ಇತ್ತು ಇದನ್ನು ಕೊಡಬಾರದು ಎಂಡರಿ ಒಂದು ವರ್ಷದ ಹಿಂದೆ ಹೋಗಿ ಇವರು ಏನು ಮಾಡುವುದಕ್ಕೆ

ಸಾಧ್ಯವಿದೆ. ಎಲ್ಲಾ ಅಧಿಕಾರಿಗಳು ಹೋಗಿ ಪರಿಶೀಲನೆ ಮಾಡಿ ಹೇಳಿಕೇಳಿ ಸರಿಯಿತ್ತೋ ಇಲ್ಲವೋ ಪಹಣಿ ಸರಿ ಮಾಡಿ ಕೊಡಬೇಕಾದರೆ ಬಹುತೇಕ ಇನ್ನು ಒಂದು ವರ್ಷ ಹಿಡಿಯುತ್ತದೆ. ಆದಷ್ಟು ಬೇಗ ರೆಕಾರ್ಡ್‌ಗಳನ್ನು ಸರಿ ಮಾಡಿ, ಅವರು ಯಾವುದನ್ನು ಕೊಟ್ಟಿದ್ದಾರೆ ಅದರ ಆಧಾರದ ಮೇಲೆ ಅಥವಾ ಬಹಳಷ್ಟು ರೈತರು ಅದನ್ನು ನೋಡದೆ ಮಾಡಿರುವ ತಪ್ಪುಗಳನ್ನು ಬೃಹದಾಕಾರವಾಗಿ ಬೆಳೆಸದೆ ಅದನ್ನು ಸರಿ ಮಾಡಬೇಕೆಂದು ಮಾನ್ಯ ಸಚಿವರಿಗೆ ಹೇಳುತ್ತೇನೆ. ಆದಷ್ಟು ಬೇಗ ಹಣವನ್ನು ಬಿಡುಗಡೆ ಮಾಡಬೇಕು. ಇದನ್ನು ಕೊಡದೆ ಬಹಳಷ್ಟು ಹಳ್ಳಿಗಳಲ್ಲಿ ಉಳಿದಿದೆ.

ಶ್ರೀ ಪಾಟೀಲ ಶಿವಾನಂದ ಸಿದ್ರಾಮಗೌಡ : ಮಾನ್ಯ ವೈಸ್ ಚೇರ್ಮನ್‌ರವರೇ, ತಮ್ಮ ಮೂಲಕ ಮಾನ್ಯ ಕೃಷಿ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಕ್ರಾಪ್ ಇನ್‌ಶ್ಯೂರೆನ್ಸ್ ಬಗ್ಗೆ ಈಗಾಗಲೇ ಸ್ವಲ್ಪ ಸಹಾಯ ಮಾಡಬೇಕೆಂಬ ನಿರ್ಣಯವನ್ನು ತೆಗೆದುಕೊಂಡಿದ್ದೀರಿ, ಮತ್ತೊಂದು ಕಡೆ ಏನಾಗಿದೆ ಎಂದರೆ ಯಾವ ಬೆಳೆಗಳು ಮೊದಲು ಬೆಳೆ ವಿಮೆಯಲ್ಲಿ ಇರಲಿಲ್ಲ, ಆ ಹೊಸ ಬೆಳೆಗಳನ್ನು ಇದರಲ್ಲಿ ಅಳವಡಿಸಿಕೊಂಡಿದ್ದಾರೆ, ಉದಾಹರಣೆಗೆ ಹೇಳುವುದಾದರೆ ಹತ್ತಿ, ಕಬ್ಬು, ಮತ್ತೆ ಉಳ್ಳಾಗಡ್ಡೆ, ಇದರ ಪ್ರೀಮಿಯಮ್ ಎಷ್ಟಿದೆ, ಎಂದರೆ ಇದರಲ್ಲಿ ಲೋನಿ ಯಾರಿದ್ದಾನೆ. ಅವನಂತೂ ಬೇರೆ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಇಲ್ಲಿ ಲೋನ್‌ನ ಇಂಟ್ರಸ್ಟ್ ಎಷ್ಟಿದೆ ಎಂದರೆ ಶೇಕಡಾ 15 ರಿಂದ 16 ಪರ್ಸೆಂಟ್ ಇದೆ, ಇದರ ಜೊತೆಗೆ ಇನ್‌ಶ್ಯೂರೆನ್ಸ್ ಪ್ರೀಮಿಯಮ್ ಎಷ್ಟು ಇದೆಯೆಂದರೆ ಕಬ್ಬಿನ ಮೇಲೆ ಶೇಕಡಾ 4ರಷ್ಟು, ಇದೆ, ಹತ್ತಿ ಮೇಲೆ ಕಬ್ಬಿಗಿಂತ ಹೆಚ್ಚಿಗೆ ಅಂದರೆ ಶೇಕಡಾ 6 ಪರ್ಸೆಂಟ್ ಇದೆ, ಉಳ್ಳಾಗಡ್ಡೆಯ ಮೇಲೆ ಅತಿ ಹೆಚ್ಚಿದೆ, ಶೇಕಡಾ 11ರಷ್ಟು ಉಳ್ಳಾಗಡ್ಡೆಯ ಮೇಲೆ ಕ್ರಾಪ್ ಇನ್‌ಶ್ಯೂರೆನ್ಸ್ ಪ್ಲಸ್ ಬಡ್ಡಿ ಶೇಕಡಾ 16ರಷ್ಟು ಪ್ಲಸ್ 11 ಪರ್ಸೆಂಟ್ ಎಂದರೆ ಒಟ್ಟು 27 ಪರ್ಸೆಂಟ್ ಬಡ್ಡಿಯನ್ನೇ ಇನ್‌ಶ್ಯೂರೆನ್ಸ್ ಪ್ರೀಮಿಯಮ್ ಕಟ್ಟು ಎಂದರೆ ಯಾವ ರೈತರೂ ಮುಂದೆ ಬರುವುದಿಲ್ಲ. ಈಗ ಉದ್ದಾಹರಣೆಯಾಗಿ ಹೇಳಬೇಕೆಂದರೆ, ರಾಜ್ಯದಲ್ಲಿ ಹದಿಮೂರು ನೂರು ಕೋಟಿ ರೂಪಾಯಿಗಳಷ್ಟು ಕೃಷಿ ಸಾಲವನ್ನು ಡಿಸಿಸಿ ಬ್ಯಾಂಕ್‌ನವರು ಕೊಡುತ್ತಾರೆ., ಸದನದಲ್ಲಿ ಮಾನ್ಯ ಸಹಕಾರ ಸಚಿವರು ಇದ್ದರು, ಈಗ ಅವರು ಎಲ್ಲಿ ಹೋದರೋ ಗೊತ್ತಿಲ್ಲ, ಈ ಕೃಷಿ ಸಾಲ ಹದಿಮೂರು ನೂರು ಕೋಟಿ ರೂಪಾಯಿಗಳಿಂದ ಹದಿನೈದು ನೂರು ಕೋಟಿ ರೂಪಾಯಿಗಳವರೆಗೆ ಸಾಲ ಕೊಡುತ್ತದೆ, ಈಗ ರೈತರು ಯಾವ ಪರಿಸ್ಥಿತಿಗೆ ಬಂದಿದ್ದಾರೆಂದರೆ ಮರಳಿ ಸಾಲವನ್ನು ತುಂಬುವುದಕ್ಕೂ ತಯಾರಿಲ್ಲ, ಮತ್ತೆ ಸಾಲವನ್ನು ತೆಗೆದುಕೊಳ್ಳುವುದಕ್ಕೂ ತಯಾರಿಲ್ಲ. ಇವರು ಆ ಹಣವನ್ನು ತುಂಬಿ ಮತ್ತೆ ಹೊಸದಾಗಿ ಸಾಲವನ್ನು ತೆಗೆದುಕೊಳ್ಳಬೇಕೆಂದರೆ ಅವರು ಹೈಯೆಸ್ಟ್ ಪ್ರೀಮಿಯಮ್ ಹಣವನ್ನು ಕಟ್ಟಬೇಕು, ಮೊದಲೇ ಬಡ್ಡಿದರವನ್ನು ಹೆಚ್ಚಿಸಲಾಗಿದೆ, ಈ ಬಡ್ಡಿದರವನ್ನು ಕಡಿಮೆ ಮಾಡಿ ಎಂದು ಸರ್ಕಾರದ ಮೇಲೆ ಮೇಲಿಂದ ಮೇಲೆ ರೈತರ ಒತ್ತಡವೂ ಇದೆ. ಅದೇ ದಿಶೆಯಲ್ಲಿ ಸರ್ಕಾರ ಕೂಡ ಚಿಂತನೆ ಮಾಡುತ್ತಿದೆ, ಅದು ಏನೆಂದರೆ ಬಡ್ಡಿದರವನ್ನು ಶೇಕಡಾ 1,2 ರಷ್ಟು ಕಡಿಮೆ ಮಾಡಬೇಕೆಂದು ಇದೆ, ಪ್ಲಸ್ ಅಡಿಷನಲಿ ಜಿ.ಐ.ಸಿ. ಯಿಂದ ಏನು ಇನ್ ಶ್ಯೂರೆನ್ಸ್ ಕ್ಲೈಮ್ ಮಾಡುತ್ತಿದ್ದೀರಿ, ಅದು ನೀವು ಬರುವುದಕ್ಕಿಂತ ಮೊದಲು ಆಗಿರುವಂಥಾದ್ದು, ತಾವು ಕೃಷಿ ಸಚಿವರಾಗುವುದಕ್ಕಿಂತ ಮೊದಲು ನಮ್ಮ ರಾಜ್ಯದ ಯಾರಾದರೂ ಒಬ್ಬರು ಪ್ರತಿನಿಧಿಯೊಬ್ಬರು ಜನರಲ್ ಇನ್‌ಶ್ಯೂರೆನ್ಸ್ ಕಂಪನಿ ಆಫ್ ಇಂಡಿಯಾದವರ ಜೊತೆಗೆ ಮಾತನಾಡಿದ್ದರೆ, ಪ್ರಾಯಶಃ ಈ ಪ್ರೀಮಿಯಮ್ ಅನ್ನು ಸ್ವಲ್ಪ ಕಡಿಮೆ ಮಾಡಬಹುದಾಗಿತ್ತು. ಅಥವಾ ಈ ಕ್ರಾಪ್‌ಗಳನ್ನು

ಅದರಲ್ಲಿ ಅಳವಡಿಸದೇ ಇರುವಂತಹ ಸಲಹೆಯಾದರೂ ಬರಬಹುದಿತ್ತು. ಆದರೆ ದುರ್ದೈವವಶಾತ್ ಈ ವರ್ಷ ಎಲ್ಲಾ ಬೆಳೆಗಳನ್ನು ಅದರಲ್ಲಿ ಇನ್ ಕ್ಲೂಡ್ ಮಾಡಿದ್ದಾರೆ. ಆದುದರಿಂದ ತಾವು ದಯಮಾಡಿ ಈ ವಿಧಾನಸಭೆ ಮುಗಿದ ಮೇಲೆ ಜನರಲ್ ಇನ್ ಶ್ಯೂರೆನ್ಸ್ ಕಂಪನಿಯವರ ಜೊತೆಗೆ ವಿಚಾರ ವಿನಿಮಯ ಮಾಡಿ, ಈ ಕ್ರಾಪ್ ಇನ್ ಶ್ಯೂರೆನ್ಸ್ ಪ್ರೀಮಿಯಮ್ ಎಷ್ಟಿದೆ, ಅದನ್ನು ಕಡಿಮೆ ಮಾಡುವಂತಹ ಪ್ರಯತ್ನ ಮಾಡಿ, ಇಲ್ಲದಿದ್ದರೆ ಯಾರು ಲೋನಿ ಇದ್ದಾರೆ. ಅವರ ಸ್ವಲ್ಪ ಅಮೌಂಟನ್ನು ಗೌವರ್ನಮೆಂಟ್ ಅದು ಯಾವುದೇ ಕ್ರಾಪ್ ಇರಲಿ ಬೇರೆ ಮಾಡಿದರೆ ಈ ಲೋನ್ ತೆಗೆದುಕೊಳ್ಳುವುದಕ್ಕೆ ಮತ್ತೆ ವಾಪಸ್ಸು ಮಾಡುವಂಥಾದ್ದಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಯಾರೂ ಕೂಡ ಈ ಲೋನ್ ಕ್ಲಿಯರ್ ಮಾಡುವುದಿಲ್ಲ. ಆದುದರಿಂದ ಇದರ ಬಗ್ಗೆ ಸರ್ಕಾರದವರು ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ.ಆರ್. ಕೃಷ್ಣಮೂರ್ತಿ : ಮಾನ್ಯ ವೈಸ್-ಚೇರ್ಮನ್‌ರವರೆ, ಇವತ್ತಿನ ದಿವಸ ಈ ಕ್ರಾಪ್ ಇನ್‌ಶ್ಯೂರೆನ್ಸ್‌ನಲ್ಲಿ ರೈತರು ಹಣವನ್ನು ತುಂಬಿದ್ದಾರೆ, ಅದರಲ್ಲಿ ಬರುವಂತಹ ಇನ್‌ಶ್ಯೂರೆನ್ಸ್ ಅಮೌಂಟ್‌ನಲ್ಲಿ ಬಹಳಷ್ಟು ತಾರತಮ್ಯವಾಗಿದೆ, ಒಂದೇ ಬೆಳೆಗೆ ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ, ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಬಹಳಷ್ಟು ತಾರತಮ್ಯವಾಗಿದೆ, ಉದಾಹರಣೆಗೆ ಹೇಳುವುದಾದರೆ, ನಮ್ಮ ಭಾಗದ ರೈತರು ಕೌಲಂದೆ ಹೋಬಳಿಯವರು ಬಂದಿದ್ದರು. ಇಲ್ಲಿ ಒಂದು ಎಕರೆಗೆ ಕೇವಲ ಮೂರು ನೂರು ಚಿಲ್ಲರೆ ಎಂದು ಇನ್‌ಶ್ಯೂರೆನ್ಸ್ ಕ್ಲೈಮ್ ಮಾಡುವಂಥಾದ್ದಕ್ಕೆ ಅವಕಾಶವಾಗಿದೆ, ಚಾಮರಾಜನಗರದ ಜಿಲ್ಲೆಯ ಕೌಲಂಡೆ ಹೋಬಳಿಯ ಪಕ್ಕದ ಅಳವೆ ಹೋಬಳಿಯಲ್ಲಿ ಅದೇ ಬೆಳೆಗೆ ಸಾವಿರ ನಾಲ್ಕು ನೂರು ಚಿಲ್ಲರೆ ಒಂದು ಎಕರೆಗೆ ಕ್ಲೈಮ್ ಮಾಡುವಂತಹ ಅವಕಾಶವಾಗಿದೆ. ಈ ತಾರತಮ್ಯವನ್ನು ಸರಿಪಡಿಸುವಂತಹ ವಿಚಾರವಾಗಿ ನಾನು ನಿನ್ನೆ ತಮ್ಮ ಹತ್ತಿರ ಮಾತನಾಡಿದ್ದೆ, ತಾವೂ ಸಹ ವರದಿಯನ್ನು ತರಿಸಿಕೊಂಡು ನೋಡಿ ಸರಿಪಡಿಸುತ್ತೇನೆಂದು ಹೇಳಿದ್ದೀರಿ. ಈ ವಿಚಾರವಾಗಿ ಮಾನ್ಯ ಮಂತ್ರಿಯವರು ಗಂಭೀರವಾಗಿ ಚಿಂತನೆ ಮಾಡಿ ಈ ರೀತಿಯ ತಾರತಮ್ಯ ಒಂದು ತಾಲ್ಲೂಕಿನಿಂದ, ಮತ್ತೊಂದು ತಾಲ್ಲೂಕಿಗೆ ಈ ರೀತಿಯಾಗಬಾರದೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗ ಮಳೆ, ಬೆಳೆ ಇಲ್ಲದೇ ರೈತರು ಬಹಳಷ್ಟು ಕಂಗಾಲಾಗಿದ್ದಾರೆ, ಇವತ್ತು ಇವರ ಸಾಲವನ್ನು, ಬಡ್ಡಿಯನ್ನು ವಸೂಲು ಮಾಡುವಂಥಾದ್ದು, ಇದರ ಬಗ್ಗೆ ಸರ್ಕಾರ ಏನು ತೀರ್ಮಾನವನ್ನು ತೆಗೆದುಕೊಂಡಿದೆ? ಈಗ ಮಳೆ, ಬೆಳೆ, ಇಲ್ಲದ ಸಂದರ್ಭದಲ್ಲಿ ಆ ಸಾಲ ವಸೂಲಾತಿಯನ್ನು, ಮತ್ತು ಬಡ್ಡಿ ಮನ್ನಾ ಮಾಡುವಂತಹ ವಿಚಾರದಲ್ಲಿ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕೆಂದು ತಮ್ಮ ಮುಖಾಂತರ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ : ಮಾನ್ಯ ವೈಸ್ ಚೇರ್ಮನ್‌ರವರೆ, ತಮ್ಮ ಮುಖಾಂತರ ನಾನು ಮಾನ್ಯ ಕೃಷಿ ಸಚಿವರಲ್ಲಿ ಒಂದು ಕ್ಲಾರಿಫಿಕೇಷನ್ ಕೇಳಬೇಕೆಂದು ಇಚ್ಛಿಸುತ್ತೇನೆ. ನಮ್ಮಲ್ಲಿ ಈಗಾಗಲೇ ಆಲೂಗಡ್ಡೆಗೆ ಕ್ರಾಪ್ ಇನ್‌ಶ್ಯೂರೆನ್ಸ್ 31ನೇ ತಾರೀಖು ಕೊನೆಯ ದಿವಸವೆಂದು ಅನೌನ್ಸ್ ಮಾಡಿದ್ದಾರೆ. ಈ ವಿಚಾರ ಕೆಲವರಿಗೆ ಯಾರು ಹೇಳಲೇ ಇಲ್ಲ, ಹಳ್ಳಿಗಳ ಕಡೆಗಳಲ್ಲಿ ಯಾರೂ ಹೇಳಿಲ್ಲ, ಹಾಗಾಗಿ ಶೇಕಡಾ 50ಕ್ಕಿಂತ ಕಡಿಮೆ ಜನರು ಕ್ರಾಪ್‌ಇನ್‌ಶ್ಯೂರೆನ್ಸ್ ಮಾಡಿಸಿದ್ದಾರೆ. ಇದನ್ನು ಇನ್ನೂ ಕ್ರಾಪ್ ಇನ್‌ಶ್ಯೂರೆನ್ಸ್ ಮಾಡಿಸುವುದಕ್ಕೆ ಅವಧಿ ವಿಸ್ತರಣೆ ಮಾಡುತ್ತಾರೆಂದು ಈ ಸದನದಲ್ಲಿ ಮಾನ್ಯ ಮಂತ್ರಿಯವರು ಹೇಳಿಕೆ ಕೊಟ್ಟಮೇಲೆ ಅವರು ಇನ್ನೂ

ನಿರೀಕ್ಷಣೆಯಲ್ಲಿದ್ದಾರೆ ಹಾಗೂ ತೊಂದರೆಯಲ್ಲಿದ್ದಾರೆ. ಆದುದರಿಂದ ದಯಮಾಡಿ ಈ ಅವಧಿಯನ್ನು ವಿಸ್ತರಣೆ ಮಾಡುವುದಾದರೆ, ನಾವು ಇಷ್ಟು ದಿವಸ ಅವಧಿ ಕೊಟ್ಟಿದ್ದೇವೆಂದು ಖಚಿತವಾಗಿ ಹೇಳಬೇಕೆಂದು ನಾನು ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವಿ.ಎಸ್. ಕೌಜಲಗಿ : ಮಾನ್ಯ ವೈಸ್-ಚೇರ್ಮನ್‌ರವರೆ, ನಾವು ಈ ವಿಚಾರವಾಗಿ ಎಲ್ಲಾ ಪತ್ರಿಕೆಗಳಲ್ಲಿ, ದೂರದರ್ಶನದಲ್ಲಿ, ಎಲ್ಲದರಲ್ಲೂ 15ನೇ ಆಗಸ್ಟ್‌ವರೆಗೆ ಕಾಲ ವಿಸ್ತರಣೆ ಮಾಡಿದ್ದೇವೆಂದು ಹೇಳಿದ್ದೇವೆ, ಇದಕ್ಕಿಂತಲೂ ಹೆಚ್ಚಿಗೆ ನಮ್ಮ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ, ಮತ್ತೆ "ರೈತ ಮಿತ್ರ ಕೇಂದ್ರ"ದ ಮೂಲಕ ರೈತರಿಗೆ ತಿಳಿಸಿ ಹೇಳಿ ಎಂದು ಹೇಳಿದ್ದೇನೆ.

ಶ್ರೀ ಎ.ಆರ್. ಕೃಷ್ಣಮೂರ್ತಿ : ಆದರೂ ಕೂಡ ಕಾಲ ವಿಸ್ತರಣೆಗೆ ಅವಕಾಶ ಮಾಡಿಕೊಡುತ್ತಿಲ್ಲ, ನೀವು ಮಾಡಿದರೂ ಬ್ಯಾಂಕ್‌ನವರು ಅವಕಾಶ ಮಾಡಿಕೊಡುತ್ತಿಲ್ಲ. ಆದುದರಿಂದ ದಯಮಾಡಿ ಸರ್ಕಾರದವರು ಅವರಿಗೆ ಡೈರಕ್ಷನ್ ಕೊಡಬೇಕು.

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ವೈಸ್-ಚೇರ್ಮನ್‌ರವರೇ, ಆಲೂಗಡ್ಡೆ ಬೆಳೆ ವಿಚಾರದಲ್ಲಿ ಪತ್ರಿಕೆಗಳಲ್ಲಿ ಬಂದಿದೆ, ಅದನ್ನು ಜನರು ಓದಿದ್ದಾರೆ. ಅಲ್ಲಿ ಜನರು ಸಂಬಂಧಪಟ್ಟಂತಹ ಬ್ಯಾಂಕಿಗೆ ಹೋಗಿ ಅರ್ಜಿಯನ್ನು ಕೊಟ್ಟರೆ ರೈಟಿಂಗ್‌ನಲ್ಲಿ ಕೇಂದ್ರ ಸರ್ಕಾರದಿಂದ ಬರುವವರೆಗೆ ನಾವು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆನ್ನುವ ಮಾತನ್ನು ಹೇಳುತ್ತಾರೆ. ಆದುದರಿಂದ ತಾವು ಇಲ್ಲಿ ಹೇಳಿಕೆಯನ್ನು ಕೊಟ್ಟರೆ ಪ್ರಯೋಜನವಾಗುವುದಿಲ್ಲ, ಕೇಂದ್ರದಿಂದ, ಯಾರು ಸಂಬಂಧಪಟ್ಟಂತೆ ಆರ್ಡರ್ ಅನ್ನು ಕಳುಹಿಸಬೇಕೋ, ಅದನ್ನು ಕಳುಹಿಸುವಂಥಾದ್ದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಮಾಡಬೇಕು, ಏಕೆಂದರೆ ಈಗಾಗಲೇ ಹದಿನೈದು ದಿವಸಗಳು ಮುಗಿಯುತ್ತಾ ಬಂದಿದೆ,...

ಶ್ರೀ ವಿ.ಎಸ್. ಕೌಜಲಗಿ : ಇಮ್ಮೀಡಿಯಟ್ ಆಗಿ ಮಾಡಿಸುತ್ತೇನೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ವೈಸ್-ಚೇರ್ಮನ್‌ರವರೆ, ನಮ್ಮ ರಾಜ್ಯದಲ್ಲಿ ಬ್ಯಾಂಕರ್ಸ್ ಮೀಟಿಂಗ್ ಎಂದು ಆಗುತ್ತದೆ. ಇದರಲ್ಲಿ ಸಿಂಡಿಕೇಟ್ ಬ್ಯಾಂಕ್‌ನ ಅಧ್ಯಕ್ಷರು, ಇದರ ಅಧ್ಯಕ್ಷರು ಆಗಿರುತ್ತಾರೆ, ಡೆವಲಪ್‌ಮೆಂಟ್ ಕಮೀಷನರ್ ಇರುತ್ತಾರೆ, ಇದು this is a co-ordination between the Bank and the State Government for implementing schemes. ಆಗ ಪ್ರತಿ ಎರಡು, ಮೂರು ತಿಂಗಳಿಗೊಮ್ಮೆ ಮೀಟಿಂಗ್ ನಡೆಯುತ್ತಾ ಇರುತ್ತದೆ. ಪ್ರತಿಯೊಂದು ಕೂಡ ಖಾತೆಯನ್ನು ತೆರೆಯುವಂತಾದ್ದು ಇರಬಹುದು, ಫಲಾನುಭವಿಗಳಿಗೆ ಯಾವ ರೀತಿಯಾಗಿ ಅನುಕೂಲಗಳನ್ನು ಕಲ್ಪಿಸಬೇಕೆಂಬುದು ಇರಬಹುದು, ಎಲ್ಲಾ ವಿಚಾರಗಳಲ್ಲೂ ಇವತ್ತು ಏನಾಗಿದೆ ಎಂದರೆ ಬ್ಯಾಂಕ್‌ಗಳು ನಮಗೆ ಯಾವುದೇ ರೀತಿಯಲ್ಲೂ ರಾಜ್ಯ ಸರ್ಕಾರಕ್ಕೆ ಸಂಬಂಧವಿಲ್ಲವೆಂಬಂತೆ ವರ್ತಿಸುತ್ತಿದ್ದಾರೆ. ನೀವು ಅಂತಹ ಮೀಟಿಂಗ್ ಗಳನ್ನು ಮಾಡಿ ನಿಮ್ಮ ಡೆವಲಪ್‌ಮೆಂಟ್ ಕಮೀಷನರ್‌ಗಳ ಮುಖಾಂತರ, ಫೈನಾನ್ಸ್ ಸೆಕ್ರೆಟರಿಯವರು ಇದನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕೆಂಬ ನಿರ್ದೇಶನವನ್ನು ಕೊಡಿಸಬೇಕಾಗುತ್ತದೆ. ಇಲ್ಲದಿದ್ದರೆ ನೀವು ಇಲ್ಲಿ ಏನೋ ಹೇಳಿರುತ್ತೀರಿ, ಅಲ್ಲಿ ಸ್ಥಳೀಯರಲ್ಲಿ ಏನೋ ಸಮಸ್ಯೆಗಳು ಇರುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ವೈಸ್-ಚೇರ್ಮನ್‌ರವರೆ, ಈ ಕ್ರಾಪ್ ಇನ್‌ಷ್ಯೂರೆನ್ಸ್ ಅನ್ನು ಯಾವ ರೀತಿಯಾಗಿ ಮಾಡುತ್ತಾರೆಂಬುದು ಮಾನ್ಯ ಸಚಿವರು ಅಭ್ಯಾಸ ಮಾಡಿರಬಹುದು, ತಾವು ಮಂತ್ರಿ ಪದವಿಗೆ ಬಂದು ಇಷ್ಟು ದಿವಸಗಳಾಗಿವೆ, ಈ ಇನ್‌ಶ್ಯೂರೆನ್ಸ್ ಬಗ್ಗೆ ತಮ್ಮ

ಅಧಿಕಾರಿಗಳನ್ನು ಕರೆಸಿ ಚರ್ಚೆ ಮಾಡಿರಬಹುದು. ಇವರು ಏನು ಮಾಡುತ್ತಾರೆಂದರೆ, ಥ್ರೆಷ್ ಹೋಲ್ಡ್ ಯೀಲ್ಡ್ ಎಂದು ಐದು ವರ್ಷದ್ದು ತೆಗೆದುಕೊಂಡು ಮಾಡುತ್ತಾರೆ. ನಾನು ಒಂದೊಂದು ತಾಲ್ಲೂಕುಗಳನ್ನು ತೆಗೆದುಕೊಂಡು ಹೇಳುವುದಕ್ಕಾಗುವುದಿಲ್ಲ, ನಾನು ಇದರ ಬಗ್ಗೆ ಹಿಂದಿನ ಅಧಿವೇಶನದಲ್ಲೂ ಒಂದು ಪ್ರಶ್ನೆಯನ್ನು ಹಾಕಿದ್ದೆ, ಅದಕ್ಕೆ ಉತ್ತರ ಬರಲಿಲ್ಲ, ಈ ಅಧಿವೇಶನದಲ್ಲಿ ಮಾನ್ಯ ಸಚಿವರು ಥ್ರೆಷ್ ಹೋಲ್ಡ್ ಯೀಲ್ಡ್ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ಇಲ್ಲಿ ಯಾವ ತಾಲ್ಲೂಕಿನಲ್ಲಿ ಎಷ್ಟು ಥ್ರೆಷ್ ಹೋಲ್ಡ್ ಯೀಲ್ಡ್ ಇದೆಯೆಂಬುದನ್ನು ತಾವು ನೋಡಿಕೊಳ್ಳಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಥ್ರೆಷ್ ಹೋಲ್ಡ್ ಯೀಲ್ಡ್ ಎಂದು ಇಂಗ್ಲಿಷ್ ಭಾಷೆ ಬಳಸುತ್ತೀರಿ, ಕನ್ನಡದಲ್ಲಿ ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಇಲ್ಲಿ ಅವರು ಥ್ರೆಷ್ ಹೋಲ್ಡ್ ಯೀಲ್ಡ್ ಎಂದು ಬರೆದಿದ್ದಾರೆ, ನಾನು ಏನು ಮಾಡಲಿ? ಹಿಂದಿನ ಐದು ವರ್ಷಗಳ ಉತ್ಪನ್ನ ಏನಿದೆ, ನಾನು ಕನ್ನಡದಲ್ಲಿ ಹೇಳತ್ತೇನೆ, ನನಗೆ ಇಂಗ್ಲಿಷ್‌ನಲ್ಲಿ ಉತ್ತರ ಕೊಟ್ಟಿದ್ದಾರೆ, ನಾವು ಎರಡು ಭಾಷೆಯಲ್ಲೂ ಮಾತನಾಡೋಣ, ನಾನು ಇಂಗ್ಲೀಷ್ ಭಾಷೆ ಬೇಡವೇ ಬೇಡವೆಂದು ಹೇಳಿಲ್ಲ. ಆದರೆ ಕನ್ನಡವನ್ನು ಉಪಯೋಗಿಸಬೇಕು, ನಾನು ಏನು ಮಾಡಲಿ ಇವರು ಇಂಗ್ಲೀಷ್ ನಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ ಹಿಂದಿನ ಐದು ವರ್ಷಗಳ ಉತ್ಪನ್ನ ಒಂದು ಬೆಳೆಯದ್ದು ಏನು ಬರುತ್ತದೊ, ಆ ಉತ್ಪನ್ನವನ್ನು ಗಣನೆಗೆ ತೆಗೆದುಕೊಂಡು, ಈ ವರ್ಷ ಎಷ್ಟು ಬೆಳೆ ಬಂದಿದೆಯೆಂಬ ಲೆಕ್ಕವನ್ನು ತೆಗೆದುಕೊಂಡು, ಇದರಲ್ಲಿ ಎಷ್ಟು ಪರ್ಸೆಂಟೇಜ್ ಕಡಿಮೆಯಾಗಿದೆಯೆಂಬುದನ್ನು ತೆಗೆದುಕೊಂಡು ಅದರ ಮೇಲೆ ಬೆಳೆ ವಿಮೆಯನ್ನು ಕೊಡುತ್ತಿದ್ದೀರಿ. ಈ ಬೆಳೆ ಯಾವ್ಯಾವ ಕ್ಷೇತ್ರದ್ದು, ಎಷ್ಟೆಷ್ಟು, ಯಾವ ಹೋಬಳಿಯದ್ದು ಎಂಬುದು ಯಾರಿಗೂ ಗೊತ್ತಿಲ್ಲ, ಇದನ್ನು ನಾನು ಕೇಳಿದ ಮೇಲೆ ಲೆಕ್ಕ ಗೊತ್ತಾಯಿತು. ಇದನ್ನು ಎಲ್ಲೆಲ್ಲಿ ಇಲ್ಲವೋ ಅಲ್ಲ ಇದನ್ನು ತಿಳಿಸಬೇಕು, ಆಯಾ ಹೋಬಳಿಗಳಲ್ಲಿ, ಆಯಾ ಗ್ರಾಮ ಪಂಚಾಯತ್‌ಗಳಲ್ಲಿ, ಈ ಥ್ರೆಷ್ ಹೋಲ್ಡ್ ಯೀಲ್ಡ್ ಎಂದು ಏನು ಹೇಳಿದ್ದೀರಿ, ಇದು ಐದು ವರ್ಷದ್ದು ಬೆಳೆ ಆಗಿರುವಂಥಾದ್ದು ಎಂಬ ಬಗ್ಗೆ ರೈತರಿಗೂ ತಿಳಿಯಬೇಕು. ಇದು ರೈತರಿಗೆ ಗೊತ್ತಿಲ್ಲ, ಇದು ಮೋಸವಾಗುತ್ತದೆ, ಆದುದರಿಂದ ಇದು ಅವರಿಗೆ ತಿಳಿಯುವಂತೆ ಮಾಡಬೇಕು. ಈ ಐದು ವರ್ಷಗಳ ಬೆಳೆಯ ಇಳುವರಿಯ ಬಗ್ಗೆ ಏನು ಇದೆ, ಅದು ನಿಮ್ಮ ಇನ್‌ಶ್ಯೂರೆನ್ಸ್ ಕಂಪೆನಿಯವರಿಂದ ನಾನು ಎಲ್ಲಾ ಬೆಳೆಗಳ ಬಗ್ಗೆ ಹೇಳುತ್ತಿರುವಂಥಾದ್ದು, ನನಗೆ ಏನು ಮಾಹಿತಿಯನ್ನು ಕೊಟ್ಟಿದ್ದೀರಿ, ಅದನ್ನು ಪ್ರತಿಯೊಂದು ಗ್ರಾಮ ಪಂಚಾಯತ್‌ಗಳಲ್ಲೂ ಮಾಹಿತಿ ಸಿಗುವಂತೆ ಮಾಡಬೇಕು. ರೈತರಿಗೆ ಒಳ್ಳೆಯದಾಗಬೇಕೆಂದರೆ ತಾವು ಈ ಕೆಲಸವನ್ನು ಮೊದಲು ಮಾಡಬೇಕು, ಈ ವರ್ಷ ಅವರು ಏನು ಮಾಡಿದರೂ ಸುಧಾರಿಸಿಕೊಳ್ಳುವುದಕ್ಕಾಗುವುದಿಲ್ಲ, ಈಗ ಪರಿಸ್ಥಿತಿ ಹಾಗೆ ಇದೆ, ಇದರ ಬಗ್ಗೆ ನಾನು ಮುಂದೆ ಮಾತನಾಡುತ್ತಾ ಹೇಳುತ್ತೇನೆ. ಇದನ್ನು ಹಚ್ಚಿಸಬೇಕು, ಆಗ ಮಾತ್ರ ರೈತರಿಗೆ ಗೊತ್ತಾಗುತ್ತದೆ. ಇದಾದ ಮೇಲೆ ನೀವೇನು ಮಾಡುತ್ತೀರೆಂದರೆ, ನಿಮ್ಮ ಇಲಾಖೆ ಹಾಗೂ ಅಂಕಿಸಂಖ್ಯೆ ಇಲಾಖೆ, ಕಂದಾಯ ಇಲಾಖೆ ಈ ಮೂರ್ನಾಲ್ಕು ಇಲಾಖೆಗಳೆಲ್ಲಾ ಸೇರಿ ಬೆಳೆ ಅಂದಾಜು ಅಂದರೆ ರ್‍ಯಾಂಡಂ ಆಗಿ ತೆಗೆಯುವುದನ್ನು ನಮ್ಮ ಮುಂಡರಗಿಗೆ ಸಂಬಂಧಿಸಿದಂತೆ ಹೇಳುತ್ತೇನೆ. ನಮ್ಮ ಮುಂಡರಗಿಗೆ ಇನ್‌ಶ್ಯೂರೆನ್ಸ್‌ಗೆ ಸಂಬಂಧಿಸಿದಂತೆ ಎಷ್ಟು ಅನ್ಯಾಯವಾಗಿದೆ ಎಂದರೆ, ಮುಂಡರಗಿಗೆ ಜೋಳಕ್ಕೆ ಸಿಕ್ಕಿಲ್ಲ, ಶೇಂಗಾಕ್ಕೆ ಅಷ್ಟೇ ಸಿಕ್ಕಿದೆ. ಅಲ್ಲಿ ಏನಾಗಿದೆ ಎಂದರೆ, ತಹಶೀಲ್ದಾರ್‌ರವರು ಆಣೆವಾರಿ ಮಾಡಿ ಕಳುಹಿಸಿದ್ದಾರೆ, ಆಣೆವಾರಿ

ಪ್ರಕಾರ ಒಂದು ಹೆಕ್ಟೇರ್‌ಗೆ ಒಂದು ಕ್ವಿಂಟಲ್ 90 ಕೆ.ಜಿ. ಜೋಳ ಬಂದಿದೆ, ನನ್ನ ಹತ್ತಿರ ಅಂಕಿಸಂಖ್ಯೆ ಇದೆ, ಮಾನ್ಯ ಕೃಷಿ ಸಚಿವರು ಇದನ್ನು ಬರೆದುಕೊಂಡು, ನಾಳೆ 2 ವರದಿ ತರಿಸಿ ಏನಾಗಿದೆ ಎಂಬುದನ್ನು ಸಾಬೀತುಪಡಿಸಿ. ನಮ್ಮದು ಕಳೆದ 5 ವರ್ಷಗಳ ಇಳುವರಿ 712 ಕೆ.ಜಿ. ಇದೆ, ಅಂದರೆ ಒಂದು ತೊಂಭತ್ತು ಕೆ.ಜಿ. ಬಂದರೆ ವಿಮೆ ಸಿಗಬೇಕಾಗಿತ್ತು, ಆದರೆ ಇವರದ್ದು ಎಷ್ಟು ಬಂದಿದೆ ಎಂದರೆ ಹದಿನ್ನೆದುನೂರ ಮೂವತ್ತಾರು ಕೆ.ಜಿ. ಬಂದಿದೆ. ಅಂದರೆ ತಹಶೀಲ್ದಾರ್ ಮಾಡುವುದು ಬೇರೆ. ಅಲ್ಲಿ ಮಳೆನೇ ಆಗಿಲ್ಲ.

ಶ್ರೀ **ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)** : ಪಾಟೀಲ್‌ರವರೆ, ಇಲ್ಲಿ ಸಪ್ಲಿಮೆಂಟರಿ ಬಜೆಟ್‌ಗೆ ಸಂಬಂಧಿಸಿದಂತೆ ಚರ್ಚೆಯಾಗಬೇಕು. ಪೂರ್ತಿಯಾಗಿ ನೀವು ಕೃಷಿ ಬೇಡಿಕೆಯ ಮೇಲೆ ಮಾತನಾಡಿದಂತೆ ಮಾಡಿದರೆ, ಪುನಃ ಎಲ್ಲಾ ಮಂತ್ರಿಗಳು ಉತ್ತರವನ್ನು ಕೊಡಬೇಕಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ನಮಗೆ ಯಾವ ಉತ್ತರವನ್ನು ಕೊಡಬೇಡಿ.

ಶ್ರೀ **ಕಾಗೋಡು ತಿಮ್ಮಪ್ಪ : (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು)** ನೀವು ಕೃಷಿ ಬೇಡಿಕೆಯ ಮೇಲೆ ವಿಸ್ತಾರವಾಗಿ ಚರ್ಚೆ ಮಾಡುತ್ತಾ ಹೋದರೆ, ಇತರೆ ಇಲಾಖೆಯ ಮಂತ್ರಿಗಳೆಲ್ಲಾ ತಮ್ಮ ತಮ್ಮ ಬೇಡಿಕೆಗೆ ಸಂಬಂಧಿಸಿದಂತೆ ಉತ್ತರ ಕೊಡಬೇಕಾಗುತ್ತದೆ, ಒಟ್ಟಾರೆ ಸೂಕ್ಷ್ಮವಾಗಿ ಸಪ್ಲಿಮೆಂಟರಿ ಬಜೆಟ್‌ಗೆ ಸಂಬಂಧಿಸಿದಂತೆ, ಹೆಚ್ಚಾಗಿದೆಯೇ ಅಥವಾ ಕಡಿಮೆಯಾಗಿದೆಯೇ ಎಂಬುದನ್ನು ತಿಳಿಸಬೇಕು, ಇಲ್ಲವಾದರೆ ಎಲ್ಲಾ ಬೇಡಿಕೆಗಳಿಗೆ ಸಂಬಂಧಿಸಿದಂತೆ ಎಲ್ಲಾ ಮಂತ್ರಿಗಳು ಉತ್ತರ ಹೇಳಬೇಕಾಗುತ್ತದೆ. ಕೃಷಿ ಬೇಡಿಕೆಗೆ ಸಂಬಂಧಿಸಿದಂತೆ ಈ ಸದನದಲ್ಲಿ ಈಗಾಗಲೇ ಚರ್ಚೆಯಾಗಿದೆ. ಆ ಸಂದರ್ಭದಲ್ಲಿ ಕೃಷಿಗೆ ಸಂಬಂಧಿಸಿದತೆ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಬೇಕು, ಆಗ ಪ್ರಸ್ತಾಪ ಮಾಡಬೇಕಾಗಿದ್ದ ವಿಚಾರಗಳನ್ನು ಈಗ ಪ್ರಸ್ತಾಪ ಮಾಡಿದರೆ, ಪ್ರತಿಯೊಬ್ಬ ಮಂತ್ರಿಯೂ ಉತ್ತರವನ್ನು ಹೇಳಬೇಕಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಇನ್‌ಶ್ಯೂರೆನ್ಸ್‌ಗೆ ಸಂಬಂಧಿಸಿದಂತೆ 24 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು, ರೈತರಿಗೆ ಏನು ಅನ್ಯಾಯವಾಗುತ್ತಿದೆ ಎಂಬುದನ್ನು ಹೇಳುತ್ತಿದ್ದೇವೆ, ತಾವು ಕೇಳುವುದಕ್ಕೆ ಮನಸ್ಸಿಲ್ಲದಿದ್ದರೆ ಸುಮ್ಮನೆ ಕುಳಿತುಕೊಳ್ಳುತ್ತೇವೆ. ನಾನು ಕೃಷಿಗೆ ಸಂಬಂಧಿಸಿದಂತೆ ಮಾತನಾಡುವಾಗ ಮಾನ್ಯ ಅಧ್ಯಕ್ಷರು ಅರ್ಧಗಂಟೆಗಿಂತ ಮೇಲ್ಪಟ್ಟು ಕಾಲಾವಕಾಶ ಮಾಡಿಕೊಟ್ಟಿದ್ದರು, ಇವತ್ತು ಬೆಳಿಗ್ಗೆಯಿಂದ ಸದನ ಹೇಗೆ ನಡೆಯಿತು ಎಂಬುದು ಗೊತ್ತಿದೆ. ಹಾಗಾಗಿ ರೈತರಿಗೆ ಸಂಬಂಧಿಸಿದಂತೆ ವಿಷಯ ಬಂದಾಗ ನಿಲ್ಲಿಸಿಬಿಡುವುದು, ಇದು ನಮ್ಮ ಸ್ಥಿತಿ. ಅದಕ್ಕೋಸ್ಕರ ಮುಖ್ಯಮಂತ್ರಿಗಳಿಗೆ, ದಯವಿಟ್ಟು ಉತ್ತರವನ್ನು ಕೊಟ್ಟುಬಿಡಿ, ಮುಗಿಸುತ್ತೇವೆ, ಇಲ್ಲದಿದ್ದರೆ ಎದ್ದು ಹೋಗುತ್ತೇವೆಂದು ಹೇಳಿದ್ದು.

ಛೇರ್ಮನ್ : ಮಾನ್ಯ ಪಾಟೀಲ್‌ರವರೆ, ತಾವು ಹಿರಿಯ ಸದಸ್ಯರಿದ್ದೀರಿ, ಸಪ್ಲಿಮೆಂಟರಿ ಬಜೆಟ್‌ಗೆ ಸೀಮಿತವಾಗಿ ಮಾತನಾಡಿ, ಆದಷ್ಟು ಶಾರ್ಟ್ ಅಂಡ ಸ್ವೀಟ್ ಆಗಿ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್ : ನಾನು ಇನ್‌ಶ್ಯೂರೆನ್ಸ್ ಬಿಟ್ಟು ಬೇರೆ ಕೃಷಿ ವಿಷಯವನ್ನು ಮಾತನಾಡಲು ಹೋಗುವುದಿಲ್ಲ. ಶಾರ್ಟ್ ಅಂಡ್ ಸ್ವೀಟ್ ಮಾಡಲು ಹತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕನ್ನಡದಲ್ಲಿ ಏಕೆ ಉಪಯೋಗ ಮಾಡಲಿಲ್ಲ? ಸ್ವೀಟ್ ಸ್ವೀಟ್ ಅಂದರೆ. ...

ಶ್ರೀ ಎಸ್.ಎಸ್. ಪಾಟೀಲ್ : ಅವರೂ ಇಂಗ್ಲೀಷ್‌ನಲ್ಲಿ ಮಾತನಾಡಲು ಹತ್ತಿದ್ದಾರೆ. ನಾನು ಇಂಗ್ಲೀಷನಲ್ಲಿ ಮಾತನಾಡಲು ಹತ್ತಿದ್ದೇನೆ. ಸಂಪೂರ್ಣ ಇಂಗ್ಲೀಷ್ ಬೇಡ ಎಂದು ನಾನು ಹೇಳಲಿಲ್ಲ. ಆದರೆ ಕನ್ನಡ ಮರೆತು ಇಂಗ್ಲೀಷ್ ಮಾಡಬೇಡಿ ಎಂದು ಹೇಳಿದ್ದೇನೆ. ಸಂಪೂರ್ಣವಾಗಿ ಕನ್ನಡವನ್ನೇ ಬಿಟ್ಟು ಬಿಡುವುದೇ?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಆಯವ್ಯಯವನ್ನು ತಯಾರು ಮಾಡುವಾಗ ಇದನ್ನು ಏತಕ್ಕೆ ನಿರೀಕ್ಷೆ ಮಾಡಲಿಲ್ಲ ಈಗ ಸೇರಿಸಿದಿರಿ, ಈ ರೀತಿಯಲ್ಲಿ ಹೇಳಿ, ಬರಿ ಇನ್‌ಶ್ಯೂರೆನ್ಸ್‌ಗೆ ಸಂಬಂಧಿಸಿದಂತೆ ಮಾತನಾಡುವುದೆಲ್ಲಾ ಬೇಡಿಕೆ ಮೇಲೆ ಚರ್ಚೆ ಮಾಡುವಾಗ ಬರುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ನಾನು ಇನ್‌ಶ್ಯೂರೆನ್ಸ್‌ಗೆ ಹಣ ಒದಗಿಸಿಲ್ಲವೆಂದು ಹೇಳುತ್ತಿಲ್ಲ. ರೈತರಿಗೆ ಅದು ಮುಟ್ಟುತ್ತಾ ಇಲ್ಲ. ಅದು ಮುಟ್ಟಬೇಕಾದರೆ ಇನ್‌ಶ್ಯೂರೆನ್ಸ್ ಕಂಪನಿಯವರು ಇಷ್ಟೆಲ್ಲಾ ಅನ್ಯಾಯ ಮಾಡಿದ್ದಾರೆಂದು ಹೇಳುತ್ತಿದ್ದೇನೆ. ಎಲ್ಲವನ್ನೂ ಹೇಳುವುದಕ್ಕೆ ನನಗೆ ಸಮಯವಿಲ್ಲ, ನಾನು ಒಂದು ತಾಲ್ಲೂಕಿಗೆ ಸಂಬಂಧಿಸಿದಂತೆ ಮಾತ್ರ ಹೇಳುತ್ತೇನೆ. ತಾವು ಬೇಕಾದರೆ ಎಲ್ಲಾ ತಾಲ್ಲೂಕಿನ ಯೀಲ್ಡ್ ಅನ್ನು ತರಿಸಿಕೊಂಡು ಮಾನ್ಯ ಕೃಷಿ ಮಂತ್ರಿಗಳು ಅಧ್ಯಯನ ಮಾಡಬೇಕಾಗುತ್ತದೆ. ಜನರು ಈ ಸಾರಿ ಹಳ್ಳಿಗೆ ಬರಲು ಬಿಡುವುದಿಲ್ಲ, ರೊಕ್ಕ ತಿಂದಿದ್ದು ಒಂದು, ಬರ ಬಂದಿದ್ದು ಒಂದು, ಇನ್‌ಶ್ಯೂರೆನ್ಸ್ ಬರದ್ದೊಂದು, ಜನರು ಶಾಸಕರನ್ನೆಲ್ಲಾ ಹೊಡೆಯುತ್ತಾರೆ. ನಮ್ಮ ಜಿಲ್ಲಾಧಿಕಾರಿಗಳು ಬರ ಬಂದಿದೆ ಎಂದು ಆಣೆವಾರಿ ಮಾಡಿಸಿ ಏನು ಕಳುಹಿಸಿದ್ದಾರೆ. ಅವರದ್ದು ಒಂದು ಹೆಕ್ಟೇರ್‌ಗೆ ಒಂದು ಕ್ವಿಂಟಾಲ್ ತೊಂಬತ್ತು ಕೆ.ಜಿ. ಬಂದಿದೆ, ಇನ್‌ಶ್ಯೂರೆನ್ಸ್‌ರವರದು ಹದಿನೈದು ಕ್ವಿಂಟಾಲ್ ಮೂವತ್ತಾರು ಕೆ.ಜಿ. ಅದೇ ಹೆಕ್ಟೇರ್‌ಗೆ ಬಂದಿದೆ, ಹಾಗಾದರೆ ಯಾವುದು ಸರಿ? ಅಲ್ಲಿ ಮಳೆ ಇಲ್ಲದೆ ಬೀಜವೆಲ್ಲಾ ಒಣಗಿ ಹೋಗಿದೆ, ಒಳ್ಳೆಯ ಪೀಕ್ ಬಂದಾಗಲೂ ಏಳು ನೂರ ಹನ್ನೆರಡು ಕೆ.ಜಿ. ಅಲ್ಲಿದೆ. ಆದರೆ ಇವರು ಹದಿನೈದು ಕ್ವಿಂಟಲ್ ಎಂದು ಮಾಡಿದ್ದಾರೆ, ಇಲ್ಲಿ ರೈತರಿಗೆ ಅನ್ಯಾಯವಾಗಿದೆ. ಆ ದೃಷ್ಟಿಯಿಂದ ಇನ್‌ಶ್ಯೂರೆನ್ಸ್ ಸರ್ವೆ ಮಾಡಿದವರು ಮೋಸ ಮಾಡುತ್ತಿದ್ದಾರೆ. ಡಿ.ಸಿ.ಯವರು ಒಂದು ಕ್ವಿಂಟಲ್ ತ್ತೊಂಬತ್ತು ಕೆ.ಜಿ. ಎಂದು ಸರ್ಕಾರಕ್ಕೆ ವರದಿಯಲ್ಲಿ ಕೊಟ್ಟಿದ್ದಾರೆ. ಆದರೆ ಇನ್‌ಶ್ಯೂರೆನ್ಸ್ ಕಂಪನಿಯವರು ಹದಿನೈದು ಕ್ವಿಂಟಾಲ್ ಮೂವತ್ತಾರು ಕೆ.ಜಿ. ಎಂದು ಅದೇ ಹೇಕ್ಟೇರ್‌ಗೆ ಅದೇ ಭೂಮಿಗೆ ಅದೇ ತಾಲ್ಲೂಕಿಗೆ ಮಾಡುತ್ತಾರೆ. ಇದರಿಂದಾಗಿ ನಮ್ಮ ಮುಂಡರಗಿ ತಾಲ್ಲೂಕಿಗೆ ಇನ್‌ಶ್ಯೂರೆನ್ಸ್ ಸಿಗಲಿಲ್ಲ. ಅದೇ ರೀತಿ ಇದ್ದುದರಲ್ಲಿ ಗದಗ್ ಕ್ಷೇತ್ರದಲ್ಲಿ ಹೋಬಳಿವಾರು ಸ್ವಲ್ಪ ಚೆನ್ನಾಗಿತ್ತು. ಅದಕ್ಕೂ ಇನ್‌ಶ್ಯೂರೆನ್ಸ್ ಸಿಗುವುದು ಯೋಗ್ಯವಿದೆ. ಬೆಟಗೇರಿದ್ದು ವರ್ಸ್ಟ್ ಬೆಳೆಯೇ ಇಲ್ಲ, ಇದಕ್ಕೆ ಇನ್ ಶ್ಯೂರೆನ್ಸ್ ಸಿಕ್ಕಿಲ್ಲ. ಅದೇ ರೀತಿ ನಮ್ಮ ಶಿರಹಟ್ಟಿಯಲ್ಲಿ ಮಳೆಯೂ ಇಲ್ಲ, ಬೆಳೆಯೂ ಇಲ್ಲ. ಅದು ನಮ್ಮ ಮುಂಡರಗಿಗಿಂತ ಚೆನ್ನಾಗಿಲ್ಲ. ಅವರಿಗೆ ಇನ್‌ಶ್ಯೂರೆನ್ಸ್ ಸಿಕ್ಕಿಲ್ಲ. ಆ ಶಾಸಕರು ಅಡ್ಡಾಡಬೇಕಾದ ಪರಿಸ್ಥಿತಿ ಇದೆ. ಮುಂಡರಗಿಗೆ ಕೊಟ್ಟಿದ್ದಾರೆ, ನಮಗೇಕೆ ಕೊಟ್ಟಿಲ್ಲವೆಂದು ಕೇಳುತ್ತಾರೆ. ಇನ್‌ಶ್ಯೂರೆನ್ಸ್‌ನವರು ಏನು ಆಣೆವಾರಿ ಮಾಡುತ್ತಾರೆ ಅದರಿಂದ ಮೋಸವಾಗುತ್ತಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮೊನ್ನೆ ನಾನು ರಿವ್ಯೂ ಮಾಡುವಾಗ ಈ ಪ್ರಶ್ನೆ ಬಂದಿತ್ತು. ಅಲ್ಲಿಯೂ ಕೂಡ ಇದೇ ಪ್ರಶ್ನೆಯನ್ನು ಎತ್ತಿದರು. ಒಂದು ಹೋಬಳಿ, ಒಂದು ತಾಲ್ಲೂಕಿನಲ್ಲಿ ಅದೇ ಕ್ರಾಪ್‌ಗೆ ಕೊಟ್ಟಿದ್ದೀರಿ, ಸಿಮಿಲರ್ ಸರ್ಕಂಸ್ಟೆನ್ಸ್‌ಸ್ ಮತ್ತು ಸಿಮಿಲರ್

ಆಗಿ ಅಲ್ಲಿಯೂ ಕೂಡ ಅದೇ ಪ್ರಮಾಣದಲ್ಲಿ ಎಫೆಕ್ಟ್ ಆದಮೇಲೆ, ನಮಗೆ ಏತಕ್ಕೆ ಕೊಟ್ಟಿಲ್ಲವೆಂದು ಕೇಳಿದರು. ದಯವಿಟ್ಟು ನೀವು ಎಲ್ಲಿ ಡಿಫೆಕ್ಟ್ ಇದೆ ಅದನ್ನು ಹೇಗೆ ಸರಿಪಡಿಸಬೇಕೆನ್ನುವುದನ್ನು ಹೇಳಿದರೆ, ನಾವೂ ಕೂಡ ಆ ಇನ್‌ಶ್ಯೂರೆನ್ಸ್ ಕಂಪನಿಯವರ ಜೊತೆ ಮಾತನಾಡಿ ಇದಕ್ಕೆ ಆ ಒಂದು ಮಾನದಂಡವನ್ನು ಅಥವಾ ಬೇರೆ ಏನಾದರೂ ವಿಧಾನಗಳಿದ್ದರೆ ಅದನ್ನು ನಾನು ಅವರಿಗೆ ತಿಳಿಸಬಹುದು.

ಶ್ರೀ ಎಸ್.ಎಸ್. ಪಾಟೀಲ್ : ಕೃಷಿ ಇಲಾಖೆಯವರು, ಅಂಕಿ ಸಂಖ್ಯೆಗಳ ಇಲಾಖೆ, ಇನ್‌ಶ್ಯೂರೆನ್ಸ್ ಇಲಾಖೆ, ಕಂದಾಯ ಇಲಾಖೆಗೆ ಈಗ ಈ ನಾಲ್ಕು ಜನರು ಕೂಡ ಮಾಡಿದ್ದು ಹದಿನೈದುನೂರ ಮೂವತ್ತಾರು ಕೆ.ಜಿ. ಬರುತ್ತದೆ, ಕೇವಲ ಕಂದಾಯ ಇಲಾಖೆಯ ಡಿ.ಸಿ. ಯವರು ಅಣೆವಾರಿ ಮಾಡಿ ಕಳುಹಿಸಿದ್ದು ಒಂದು ಕ್ವಿಂಟಾಲ್ ತ್ತೊಂಬತ್ತು ಕೆ.ಜಿ. ಬರುತ್ತದೆ, ಇದರಲ್ಲಿ ಯಾವುದು ಸರಿ? ಮುಂದಿನ ಸಾರಿ ಮಾಡಿಸುವಾಗ ಸರಿಯಾಗಿ ಮಾಡಿಸಬೇಕಾಗುತ್ತದೆ. ಎಲ್ಲಿ ಅನ್ಯಾಯವಾಗಿದೆ ಅಲ್ಲಿ ಅದನ್ನು ಸರಿಪಡಿಸಿಕೊಡಬೇಕು, ಡಿ.ಸಿ.ಯವರನ್ನು ಕರೆಯಿಸಿರಿ, ಎಲ್ಲಾ ಜಿಲ್ಲಾ ಉಸ್ತುವಾರಿ ಸಚಿವರಿಗೆ ಗೊತ್ತಿದೆ ಇದು. ರೈತರೆಲ್ಲಾ ಬಂದು ನಿಮಗೆ ದಾಂಧಲೆ ಮಾಡಿದ್ದಾರೆ. ಮತ್ತೆ ಈ ಯಾರ್ಯ್ಯಾರಿಗೆ ಇನ್‌ಶ್ಯೂರೆನ್ಸ್ ಸಿಕ್ಕಿದೆ ಅವರಿಗೂ ಕೂಡ ಏನು ಮಾಡಲು ಹೊರಟಿದ್ದೀರೆಂದರೆ, ಈಗ ತಾವು ಹೇಳಿದಿರಲ್ಲಾ ಈಗ ಅವನು ಹನ್ನೊಂದು ಸಾವಿರ ರೂಪಾಯಿಗಳನ್ನು ತುಂಬಿದ್ದಾನೆ, ಅವನ ಪ್ರಕಾರ ಈ ಪರ್ಸೆಂಟೇಜ್ ಪ್ರಕಾರ ನೀವು ಆರು ಸಾವಿರ ರೂಪಾಯಿಗಳನ್ನು ತುಂಬಬೇಕಾಗಿತ್ತು, ಆದರೆ ಅದೇನೊ ತಪ್ಪಾಗಿದೆ ಎಂದು ನಾಲ್ಕು ಸಾವಿರ ತುಂಬಲು ಹೊರಟಿದ್ದೀರಿ, ಯಾರು ಹೆಚ್ಚು, ಯಾರು ಕಡಿಮೆ ತುಂಬಿದ್ದಾರೆ ಎಂಬುದಿಲ್ಲದೆ ಎಲ್ಲರದ್ದೂ ಅವರೇಜ್ ಕಟ್ ಮಾಡಲು ಹೊರಟಿದ್ದಾರೆ. ಆರು ಲಕ್ಷ ಹೆಕ್ಟೇರ್ ಗೆ ಬೀಳುತ್ತಿತ್ತದೆಂದು ನಿಮ್ಮ ಇಲಾಖೆ ತೋರಿಸುತ್ತಿದೆಯಂತೆ, ಅದು ಹನ್ನೊಂದು ಸಾವಿರ ಹೆಕ್ಟೇರ್ ಆಗಿದೆಯಂತೆ ರೈತರು ತುಂಬಿದ್ದು ಲೆಕ್ಕ ಹಾಕಿದರೆ, ಹೀಗೆ ಆಗಿದೆ ಎಂದು ಕೇಳಿದ್ದೇನೆ, ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ತಾವು ಸರ್ವೆ ಮಾಡಿ ಯಾರು ಸರಿಯಾಗಿ ಅರ್ಧ ತುಂಬಿದ್ದಾರೆ, ಅವರದ್ದು ಅರ್ಧ ಕಟ್ ಮಾಡಿದ್ದಾರಲ್ಲಾ. ಯಾರು ಡಬಲ್ ಮಾಡಿದ್ದಾರೆ ಅವರದ್ದನ್ನು ಕಟ್ ಮಾಡಿ, ಅದನ್ನು ಬಿಟ್ಟು ಯಾರು ಪೂರ್ಣ ತುಂಬಿದ್ದಾರೆ ಅವರದ್ದೂ ಕಟ್ ಮಾಡಲು ಹೊರಟಿದ್ದೀರಿ, ಹೀಗಾಗಿ ಇನ್‌ಶ್ಯೂರೆನ್ಸ್‌ನಲ್ಲಿ ಆಗುತ್ತಿರುವ ಅನ್ಯಾಯವನ್ನು ಹೇಳಿದ್ದೇನೆ, ಇದನ್ನು ಸರಿಪಡಿಸಬೇಕು.

5.40 ಪಿ.ಎಂ.

ಇನ್ನು ನಾನು ಹೆಚ್ಚು ಮಾತನಾಡುವುದಿಲ್ಲ. ಇವೆರಡನ್ನು ನೀವು ಸರಿ ಮಾಡಿದರೆ ಸಾಕು, ಎಲ್ಲಾ ಕಡೆಯೂ ಒಳ್ಳೆಯದಾಗುತ್ತದೆ. ಎಲ್ಲಿ ತಪ್ಪಾಗುತ್ತದೆ ಎಂದರೆ, ಇನ್‌ಶ್ಯೂರೆನ್ಸ್ ಕಂಪನಿಯವರು ಐದು ವರ್ಷದ ಇಳುವರಿಯನ್ನು ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಹಚ್ಚಬೇಕು. ಎಷ್ಟು ಕೆ.ಜಿ. ಎನ್ನುವುದು ಎಲ್ಲಾ ರೈತರಿಗೆ ಗೊತ್ತಾಗಬೇಕು. ಈ ವರ್ಷ ಕೆಲವು ಬೆಳೆಗಳನ್ನು ಹೊಸದಾಗಿ ಬೆಳೆ ವಿಮೆ ಯೋಜನೆಗೆ ಸೇರಿಸಿದ್ದೀರಿ. ಆದರೆ ಕೆಲವು ತಾಲ್ಲೂಕುಗಳಲ್ಲಿ ಕೆಲವು ಬೆಳೆಗಳನ್ನು ಬಿಟ್ಟುಬಿಟ್ಟಿದ್ದೀರಿ. ಇದಕ್ಕೆ ಕಾರಣವೇನು? ಅಲ್ಲಿಯೂ ಸಾಕಷ್ಟು ಬೆಳೆ ಬೆಳೆಯುತ್ತಾರೆ. ಆದರೆ ಅಲ್ಲಿ ಇನ್‌ಶ್ಯೂರೆನ್ಸ್ ಕೊಡುತ್ತಿಲ್ಲ. ಮಾನ್ಯ ಶಿವಾನಂದ ಪಾಟೀಲರು ಹೇಳಿದ ಹಾಗೆ, ಈರುಳ್ಳಿಗೆ ವಿಮೆ ಮಾಡಿಸಲು ಎಂದು ಹೆಕ್ಟೇರ್‌ಗೆ 1,200 ರೂಪಾಯಿಗಳನ್ನು ತುಂಬಲು ಹೇಳುತ್ತಾರೆ. 22,000 ರೂಪಾಯಿಗಳಿಗೆ ಇನ್‌ಶ್ಯೂರೆನ್ಸ್ ಮಾಡಿಸಬೇಕೆಂದರೆ 1,250 ರೂಪಾಯಿಗಳ ಕಂತನ್ನು

ತುಂಬಬೇಕು. ಇದು ರೈತರ ಪರಿಸ್ಥಿತಿಯಾಗಿದೆ. ಇದನ್ನೂ ಕೂಡ ತಾವು ವಿಚಾರ ಮಾಡಿ ನೋಡಬೇಕೆಂದು ಹೇಳುತ್ತೇನೆ.

ಇನ್ನು ಸಣ್ಣ ನೀರಾವರಿ ಬಗ್ಗೆ ಮಾತನಾಡಬೇಕೆಂದರೆ, ಆ ಸಚಿವರು ಇಲ್ಲಿ ಇಲ್ಲ. ತಮ್ಮ ಆಫೀಸಿನಲ್ಲೇ ಭೇಟಿಯಾಗಿ ಅದರ ಬಗ್ಗೆ ಚರ್ಚೆ ಮಾಡುತ್ತೇನೆ. ಏಕೆಂದರೆ, ಇಲ್ಲಿ ಮಾತನಾಡಲು ಮಾನ್ಯ ಅಧ್ಯಕ್ಷರು ಸಮಯ ಕೊಡುತ್ತಿಲ್ಲ. ಎಲ್ಲಾ ಶಾಸಕರೂ ಸೇರಿ ನಿಮ್ಮ ಆಫೀಸಿಗೆ ಬರುತ್ತೇವೆ. ಸಣ್ಣ ನೀರಾವರಿ ಯೋಜನೆಗಳನ್ನು ಒಬ್ಬ ದೊಡ್ಡ ಸಚಿವರಿಗೆ ಕೊಟ್ಟಿದ್ದೀರಿ. ದುರ್ದೈವವೆಂದರೆ, ಅಲ್ಲಿ ದುಡ್ಡೇ ಇಲ್ಲ. ಮೇಜರ್ ಇರಿಗೇಷನ್‌ಗಿಂತ ಮೈನರ್ ಇರಿಗೇಷನ್ ಯೋಜನೆಗಳಲ್ಲೇ ಹೆಚ್ಚು ತೀವ್ರವಾಗಿ ಕೆಲಸ ಮಾಡುವಂಥ ವ್ಯವಸ್ಥೆ ಇದೆ. ದೊಡ್ಡ ನೀರಾವರಿ ಯೋಜನೆಗಳಿಗೆ ನಾವು ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಆ ಸಾವಿರಾರು ಕೋಟಿ ರೂಪಾಯಿಗಳನ್ನು ಚಿಕ್ಕ ನೀರಾವರಿ ಯೋಜನೆಗಳಿಗೆ ಖರ್ಚು ಮಾಡಿದರೆ ಇಡೀ ರಾಜ್ಯಾದ್ಯಂತ ಹೆಚ್ಚು ನೀರಾವರಿ ಮಾಡಬಹುದು ಮತ್ತು ಇದರಿಂದ ಭೂಮಿಯ ಜಲವೂ ಹೆಚ್ಚಾಗುತ್ತದೆ. ಈ ಕಾರಣದಿಂದ ಸಣ್ಣ ನೀರಾವರಿಗೆ ಹೆಚ್ಚು ಒತ್ತು ಕೊಡಬೇಕು. ಈ ಬಜೆಟ್‌ನಲ್ಲಿ ಅದರ ಬಗ್ಗೆ ಹೆಚ್ಚು ಏನನ್ನೂ ಹೇಳಿಲ್ಲ. ಸುಮ್ಮನೆ ರೈತ ಕಾಯಕ ಕೆರೆ, ಆ ಕೆರೆ, ಈ ಕೆರೆ ಎಂದಷ್ಟೇ ಹೇಳಿದ್ದಾರೆ. ಅವುಗಳನ್ನೂ ಮಾಡಲಿಲ್ಲ. ಹಿಂದಿನ ಮಂತ್ರಿಗಳು ಈ ವಿಷಯದಲ್ಲಿ ಭಾರೀ ಕೆಲಸ ಮಾಡಿದ್ದರು. ಆದರೆ ಅವುಗಳು ಚಾಲೂ ಆಗಿಲ್ಲ. ವರ್ಲ್ಡ್ ಬ್ಯಾಂಕ್‌ನಿಂದ ಸಾಲ ತೆಗೆದುಕೊಳ್ಳುವುದು ಬೇರೆ ವಿಷಯ, ಅದು ಇರಲಿ. ನಮ್ಮ ಬಜೆಟ್‌ನಲ್ಲಿ ದಯವಿಟ್ಟು ಪ್ರತಿವರ್ಷ 500 ಕೋಟಿ ರೂಪಾಯಿಗಳನ್ನಾದರೂ ಇದಕ್ಕೆ ಕೊಡಿ. ಹೆಚ್ಚು ಬೇಡ. ಆಗ ಮಾತ್ರ ಈ ಇಲಾಖೆಯನ್ನು ಬೆಳೆಸಲು ಸಾಧ್ಯವಾಗುತ್ತದೆ. ಈಗ ಕೆಲವು ಕೆರೆಗಳಿಗೆ ನೀರು ಬಂದಿದೆ. ಆ ಹೊಳೆಗಳಿಗೆ ಪಂಪ್ ಅಳವಡಿಸಿ ಮೋಟಾರ್ ಅನ್ನು ಚಾಲೂ ಮಾಡಿದ್ದಾರೆ. ಆದರೆ ಕಾಲುವೆಗಳೇ ಸರಿಯಿಲ್ಲ. ಕಾಲುವೆಗಳನ್ನು ಸರಿಮಾಡಲು ಅವರ ಹತ್ತಿರ ರೊಕ್ಕವಿಲ್ಲವಂತೆ. ಏನು ಮಾಡುವುದು ಎಂದು ಕೇಳುತ್ತಾರೆ. ಹೀಗಾದರೆ, ಕೋಟಿಗಟ್ಟಳೆ ಹಣ ಹಾಕಿ ಮಾಡಿರುವ ಅವುಗಳ ಉಪಯೋಗವೇನು? ಆ ಕಾರಣದಿಂದ, ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ತಾವು ಏನಾದರೂ ಮಾಡಿ ಸಣ್ಣ ನೀರಾವರಿ ಯೋಜನೆಗಳಿಗೆ ಈ ವರ್ಷ ಎಷ್ಟು ಸಾಧ್ಯವೋ ಅಷ್ಟು ಹೆಚ್ಚು ಹಣವನ್ನು ಕೊಡಿ ಮತ್ತು ಮುಂದಿನ ವರ್ಷದಿಂದ 500 ಕೋಟಿ ರೂಪಾಯಿಗಳನ್ನು ಕೊಟ್ಟರೆ, ಖಂಡಿತವಾಗಿಯೂ ಮೇಜರ್ ಇರಿಗೇಷನ್‌ಗಿಂತಲೂ ಇದು ನಮಗೆ ಹೆಚ್ಚು ಉಪಯೋಗಕ್ಕೆ ಬರುತ್ತದೆ ಮತ್ತು ಹೆಚ್ಚು ಲಾಭದಾಯಕವಾಗುತ್ತದೆ, ಹಾಗೂ ಭೂಮಿಯ ಜಲವೂ ಮೇಲೆ ಬರುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಮಗೆ ಹೇಳುತ್ತೇನೆ.

ಒಂದು ವಿಷಯದಲ್ಲಿ ನಾನು ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಶ್ರೀ ನಾಗಪ್ಪ ಮರಡಿಗೆಗೆ ಮನೆ ಕೊಡಿಸಿದ್ದೀರಿ. ಅಷ್ಟೆಲ್ಲಾ ಹೋರಾಟ ಮಾಡಿದ ಅವನು, ದುಷ್ಟ ವೀರಪ್ಪನ್ ನನ್ನು ಮರುದಿವಸ ಕಡಿದು ಉರುಳಿಸುವವನಿದ್ದ. ಅವನು ಹೇಳುವುದನ್ನು ನೋಡಿದರೆ, ನಿಜವಾಗಿ ಅವನು ವೀರಪ್ಪನ್ ನನ್ನು ಕಡಿದು ಬರಲು ತಯಾರಾಗಿದ್ದ. ನಾನಾದರೂ ಸಾಯಬೇಕು, ಇಲ್ಲವೆಂದರೆ ಅವನನ್ನಾದರೂ ಕೊಲ್ಲಬೇಕು ಎಂದು ಮಾಡಿದ್ದ. ಬಿಡಿಸಲು ಇನ್ನೊಬ್ಬನನ್ನು ಇವರು ಕಳುಹಿಸಿದ್ದರಲ್ಲಾ ಅವನೇ ಕಷ್ಟಬಿದ್ದು ಇವನನ್ನು ಹಿಡಿದುಕೊಂಡು ಬಿಟ್ಟನಂತೆ. ಇಲ್ಲದಿದ್ದರೆ, ಅವನು ಬಿಡುತ್ತಿರಲಿಲ್ಲ, ವೀರಪ್ಪನ್ ನನ್ನು ಕಡಿದು ಬರಬೇಕು ಎಂದು ನಿರ್ಣಯ ಮಾಡಿದ್ದನಂತೆ. ಅವನು ನಂತರ

ಬಂದು ನನಗೆ ಎಲ್ಲಾ ಹೇಳಿದ. ನಾನೊಬ್ಬ ಹೋದರೂ ಪರವಾಗಿಲ್ಲ, ಆ ದುಷ್ಟನನ್ನಾದರೂ ಕಡಿದು ಬಿಡುತ್ತೇನೆ, ರಾಜ್ಯಕ್ಕೆ ಒಳ್ಳೆಯದಾಗುತ್ತದೆ, ದೇಶಕ್ಕೆ ಒಳ್ಳೆಯದಾಗುತ್ತದೆ ಎನ್ನುವ ದೃಷ್ಟಿಯಿಂದ ತಾನು ಸತ್ತರೂ ಅವನನ್ನು ಕಡಿದುಬಿಡಬೇಕೆಂದು ಮಾಡಿದ್ದ. ಅವನಿಗೆ ಮಾನ್ಯ ಮುಖ್ಯಮಂತ್ರಿಗಳು ಮನೆ ಕೊಡಿಸಿದ್ದೀರಿ. ಅದು ಕಡಿಮೆಯಾಯಿತು. ಇನ್ನೂ ಹೆಚ್ಚು ಅವನಿಗೆ ಕೊಡಬೇಕು. ಏಕೆಂದರೆ, ಈಗ ಅವನಿಗೆ ತಿನ್ನಲು ಕೂಳಿಗೂ ಅಭಾವವಿದೆ. ಯಾರೋ ಪಂಡಿತ ಹೇಳಿದ ಎಂದು ಅವನು ಎಲೆಕ್ಷನ್‌ಗೂ ನಿಂತಿದ್ದನು. ನಿನಗ್ಯಾಕೆ ಬೇಕಾಗಿತ್ತು ಎಲೆಕ್ಷನ್ ಎಂದು ನಾನು ಅವನನ್ನು ಕರೆದು ಬೈದೆ. ಆ ಆಧಾರದ ಮೇಲೆ ಜನ ಓಟು ಹಾಕುತ್ತಾರೆ ಎಂದು ಅವನು ತಿಳಿದುಕೊಂಡಿದ್ದ. ಆದರೆ ಅವನಿಗೆ ಜನ ಹೇಗೆ ಓಟು ಹಾಕುತ್ತಾರೆ? ಅವನಿಗೆ ಸಹಾಯ ಮಾಡಿದ್ದಕ್ಕಾಗಿ ನಾನು ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಇನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಬಗ್ಗೆ ಮಾತನಾಡಬೇಕೆಂದರೆ ಸಂಬಂಧಪಟ್ಟ ಆ ಸಚಿವರು ಇಲ್ಲಿ ಇಲ್ಲ. ಅವರು ಇದ್ದಾಗ ಒಂದಷ್ಟು ವಿಷಯಗಳನ್ನು ಹೇಳಬೇಕಾಗಿತ್ತು. ಅವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅವರ ಬಗ್ಗೆ ನನಗೆ ಕೆಟ್ಟ ಅಭಿಪ್ರಾಯವೇನೂ ಇಲ್ಲ. ಏಕೆಂದರೆ, ಯಾವ ಹಗರಣಗಳೂ ಇಲ್ಲದೇ ಎರಡೂವರೆ ವರ್ಷಗಳ ಕಾಲ ಅಧಿಕಾರ ನಡೆಸಿದ್ದಾರೆ. ಅದೇ ನಮಗೆ ಬಹಳ ಸಂತೋಷ ಆದರೆ ಆ ಇಲಾಖೆಯನ್ನು ಹೇಗೆ ನಡೆಸಬೇಕು? ಏನು ಮಾಡಬೇಕು ಎನ್ನುವ ಬಗ್ಗೆ ಇನ್ನೂ ಕೆಲವು ವಿಷಯಗಳನ್ನು ಹೇಳತಕ್ಕಂಥವುಗಳಿದ್ದವು. ಅಂಗನವಾಡಿ ಟೀಚರ್‌ಗಳಿಗೆ ಇನ್ನೂ ಹೆಚ್ಚು ಮಾಸಾಶನವನ್ನು ಕೊಡಬೇಕಾಗುತ್ತದೆ. ಏಕೆಂದರೆ, ಕೆಲಸವನ್ನೆಲ್ಲಾ ಅವರ ಕಡೆಯಿಂದ ತೆಗೆದುಕೊಳ್ಳುತ್ತಾರೆ.

ಶುಗರ್ ಫ್ಯಾಕ್ಟರಿಗಳಿಗೆ 25 ಕೋಟಿ ರೂಪಾಯಿಗಳನ್ನು ಇಟ್ಟಿರುವ ಬಗ್ಗೆ ಹೇಳಿದಿರಿ. ಮಾನ್ಯ ಮುಖ್ಯಮಂತ್ರಿಗಳ ಜನರಿಗೆ ತಂದು, ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಅದರಲ್ಲೇ ಕೆಲವಕ್ಕೆ ಕೊಟ್ಟಿದ್ದೀರಿ....

ಶ್ರೀ ಕಾಗೋಡು ತಿಮ್ಮಪ್ಪ : ಬೇಡಿಕೆಗಳ ಮೇಲೆ ಚರ್ಚೆ ಮಾಡುವ ಸಂದರ್ಭದಲ್ಲಿ ನಾಯಕರಾದ ಸಿಂಧ್ಯಾರವರು ಪಾಟೀಲರಿಗೆ ಹೆಚ್ಚು ಸಮಯವನ್ನು ಕೊಟ್ಟು ಮಾತನಾಡಿಸದೇ ಇರುವುದೇ ಇಷ್ಟಕ್ಕೆಲ್ಲಾ ಕಾರಣವಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಮುಖ್ಯಮಂತ್ರಿಗಳು ಇಲ್ಲಿದ್ದಾರೆ. ಶುಗರ್ ಫ್ಯಾಕ್ಟರಿ ಬಗ್ಗೆ ಸಲಹೆ ಕೊಡುತ್ತೇನೆ. ಮಾನ್ಯ ಮಂತ್ರಿಗಳು ಈಗಾಗಲೇ 15 ಕೋಟಿ ರೂಪಾಯಿಗಳ ಶೇರ್ ಅನ್ನು ಕೊಟ್ಟಿದ್ದಾರೆ. ಬ್ಯಾಂಕುಗಳಿಂದ ಟರ್ಮ್ ಲೋನ್ ತೆಗೆದುಕೊಳ್ಳಬೇಕೆಂದರೆ, ಮೊದಲು ಬ್ಯಾಂಕುಗಳವರು ಒಪ್ಪುತ್ತಿದ್ದರು, ಈಗ ಒಪ್ಪುತ್ತಿಲ್ಲ.

(ಈ ಹಂತದಲ್ಲಿ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ಎಸ್.ಎಸ್. ಪಾಟೀಲ್ : ಅದಕ್ಕೆ ಎನ್.ಸಿ.ಡಿ.ಸಿ.ಯವರೂ ದುಡ್ಡು ಕೊಡುತ್ತೇವೆ ಎಂದು ಹೇಳಿದ್ದಾರೆ. ಮೊನ್ನೆ ಒಂದು ಫ್ಯಾಕ್ಟರಿಗೆ ಕೊಡಿಸಿದ್ದೀರಿ. ತೀವ್ರದಲ್ಲೇ ಅದನ್ನು ಮಾಡಲು ವ್ಯವಸ್ಥೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಅದು ಸುಮಾರು 4-5 ಕೋಟಿ ರೂಪಾಯಿಗಳಷ್ಟಾಗುತ್ತದೆ. ಅದನ್ನೂ ಕೂಡ ಮಾನ್ಯ ಮುಖ್ಯಮಂತ್ರಿಗಳ ಜೊತೆ ತಾವು ಮಾತನಾಡಿ ಸಹಕಾರಿ ಶುಗರ್ ಫ್ಯಾಕ್ಟರಿಗಳು ತೀವ್ರದಲ್ಲೇ ಮುಗಿಯುವಂತೆ ನೋಡಬೇಕು. ಫೈಲುಗಳು ಎಲ್ಲೆಲ್ಲೋ ನಿಲ್ಲುತ್ತವೆ. ನೀವು ಹೇಳದೇ ಫೈಲುಗಳು ಬೇಗ ಬರುವುದಿಲ್ಲ. ದಯವಿಟ್ಟು ಅದನ್ನೆಲ್ಲಾ ವ್ಯವಸ್ಥೆ ಮಾಡಬೇಕು ಎಂದು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಕುಂತೂರು ಫ್ಯಾಕ್ಟರಿಯದ್ದು ಕೋರ್ಟಿನಲ್ಲಿ ಇನ್ನೂ ತೀರ್ಮಾನವಾಗಿಲ್ಲ. ಅದನ್ನೂ ಪೂರಕ ಅಂದಾಜು ಪಟ್ಟಿಯಲ್ಲಿ ಸೇರಿಸಿ ಕೊಡಿಸುವ ವ್ಯವಸ್ಥೆ ಮಾಡಿಸಬೇಕು.

ಅಧ್ಯಕ್ಷರು : ಆಯಿತು, ಈಗ ಶಿವಾನಂದ ಪಾಟೀಲರು ಮಾತನಾಡಲಿ. ಇವರೇ ಕೊನೆಯವರು, ಈಗಾಗಲೇ ಸಮಯ ಮುಗಿದಿದೆ.

(ಈ ಹಂದಲ್ಲಿ ಸದಸ್ಯರಾದ ಎನ್. ಯೋಗೀಶ್ ಭಟ್ ರವರು ಮಾತನಾಡಲು ಅವಕಾಶವನ್ನು ಕೋರಿ ಎದ್ದುನಿಂತರು)

ಅಧ್ಯಕ್ಷರು : ಹೀಗಾದರೆ, ನಾವು ರಾತ್ರಿ 8.30ರವರೆಗೂ ಕುಳಿತುಕೊಳ್ಳಬೇಕಾಗುತ್ತದೆ. ಇನ್ನೂ ವಿಧೇಯಕಗಳ ಮೇಲೆ ಮಾತನಾಡಬೇಕು. 2-3 ವಿಧೇಯಕಗಳು ಪಾಸ್ ಆಗಬೇಕು. ದಯವಿಟ್ಟು ಕೇಳಿ, ನಾನು 8.30 ಅಥವಾ 9 ಗಂಟೆಯವರೆಗೂ ಕೂಡಲು ತಯಾರಿದ್ದೇನೆ. ಇದು ಕೇವಲ ಪೂರಕ ಅಂದಾಜುಗಳಷ್ಟೇ. ಬಜೆಟ್ ಮೇಲೆ ನೀವೆಲ್ಲರೂ ಆಗಲೇ ಮಾತನಾಡಿದ್ದೀರಲ್ಲವೇ? ಇನ್ನು ಮುಂದೆ ಮಾತನಾಡುವವರೆಲ್ಲಾ ಐದು ನಿಮಿಷದಲ್ಲಿ ಮುಗಿಸಬೇಕು. ಮಾನ್ಯ ಶಿವಾನಂದ ಪಾಟೀಲರು ಐದು ನಿಮಿಷ. ನಂತರ ಮಾನ್ಯ ಮಂಜುರವರು ಐದು ನಿಮಿಷ. ನಂತರ ಮಾನ್ಯ ಬಸವರಾಜುರವರೇ, ತಾವೂ ಐದು ನಿಮಿಷ ಮಾತನಾಡಿ.

ಶ್ರೀ ಶಿವಾನಂದ .ಎಸ್. ಪಾಟೀಲ್(ತಿಕೋಟಾ) : ನಾನು ಐದು ನಿಮಿಷವನ್ನೂ ತೆಗೆದುಕೊಳ್ಳುವುದಿಲ್ಲ, ಎರಡೇ ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ನಮ್ಮ ಸಮಯವನ್ನು ಯೋಗೀಶ್ ಭಟ್‌ರವರಿಗೆ ಕೊಡಿ.

ಅಧ್ಯಕ್ಷರು : ಹಾಗಿರಬೇಕು. ಸರಿ, ಇಬ್ಬರೂ ಸೇರಿ ಐದು ನಿಮಿಷ ಮಾತನಾಡಿ.

+ ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಬೇಡಿಕೆ ಸಂಖ್ಯೆ 50ರ ಮೇಲೆ ಮಾತನಾಡಬೇಕು ಎಂದು ಇಚ್ಛೆಪಡುತ್ತಿದ್ದೇನೆ. ದುರ್ದೈವವೆಂದರೆ, ಅದಕ್ಕೆ ಸಂಬಂಧಿಸಿದ ಮೆಡಿಕಲ್ ಎಜುಕೇಷನ್ ಮಿನಿಸ್ಟರ್ ಇಲ್ಲಿ ಇಲ್ಲ. ಯಾರು ಬರೆದುಕೊಳ್ಳುತ್ತಾರೆ ಎನ್ನುವುದನ್ನು ದಯಮಾಡಿ ನೀವೇ ನೋಡಬೇಕು ಅಥವಾ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿರುವುದರಿಂದ ಅವರು ಇದರ ಬಗ್ಗೆ ಆಸಕ್ತಿ ವಹಿಸುತ್ತಾರೇನೋ ಎಂದು ನಾನು ಪ್ರಸ್ತಾಪ ಮಾಡುತ್ತಿದ್ದೇವೆ. ಗವರ್ನಮೆಂಟ್ ಮೆಡಿಕಲ್ ಕಾಲೇಜುಗಳಲ್ಲಿರತಕ್ಕಂಥ ಐ.ಎಂ.ಸಿ. ರೆಕಗ್ನಿಷನ್ ಸೀಟುಗಳು ಕಡಿಮೆಯಾಗುತ್ತಾ ಹೋಗುತ್ತಿವೆ. ಕಿಮ್ಸ್, ಮಿಮ್ಸ್ ಮತ್ತು ಮೈಸೂರು ಗವರ್ನಮೆಂಟ್ ಮೆಡಿಕಲ್ ಕಾಲೇಜುಗಳಲ್ಲಿ ಮೊದಲು 200 ಸೀಟುಗಳಿದ್ದವು. ದುರ್ದೈವವೆಂದರೆ ಇವು ಕಡಿಮೆಯಾಗುತ್ತಾ ಹೋಗುತ್ತಿವೆ. ಇವತ್ತು ಐ.ಎಂ.ಸಿ.ಯವರು ಜನರಲ್ ಬಾಡಿ ಮೀಟಿಂಗ್ ಕರೆದಿದ್ದಾರಂತೆ. ಕರ್ನಾಟಕದಲ್ಲಿರತಕ್ಕಂಥ ಪ್ರತಿಯೊಂದು ಸರ್ಕಾರೀ ಮೆಡಿಕಲ್ ಕಾಲೇಜಿಗೆ 50 ಸೀಟುಗಳನ್ನು ಕರ್ಟೈಲ್ ಮಾಡಬೇಕು ಎನ್ನುವ ಒಂದು ನಿರ್ಣಯವನ್ನು ಅಲ್ಲಿ ತೆಗೆದುಕೊಳ್ಳುತ್ತಿದ್ದಾರೆ. ಅದಕ್ಕಾಗಿ, ದಯಮಾಡಿ ನಾನು ತಮ್ಮ ಮೂಲಕ ವಿನಂತಿ ಮಾಡುತ್ತಿದ್ದೇನೆ, ಈ ಡಿಮ್ಯಾಂಡ್ಸ್‌ನಲ್ಲಿ ಅದು ಬಂದಿಲ್ಲ. ಜಯದೇವ ಹೃದ್ರೋಗ ಆಸ್ಪತ್ರೆಗೆ ಹುಡ್ಕೋದಿಂದ ತೆಗೆದುಕೊಂಡಿರುವ ಲೋನಿನ ರೀಪೇಮೆಂಟ್ ವಿಚಾರ ಮಾತ್ರ ಅದರಲ್ಲಿ ಬಂದಿದೆ. ಸರ್ಕಾರೀ ಮೆಡಿಕಲ್ ಕಾಲೇಜುಗಳಲ್ಲಿ ಇನ್ ಫ್ರಾಸ್ಟ್ರಕ್ಚರ್ ಇಲ್ಲ, ಪ್ರೊಫೆಸರ್‌ಗಳಿಲ್ಲ, ಲೆಕ್ಚರರ್ ಗಳಿಲ್ಲ ಎಂದು ಸೀಟುಗಳನ್ನು ಕಡಿಮೆ ಮಾಡುತ್ತಿದ್ದಾರೆ. ತಾವು ಇದನ್ನು ಹೀಗೇ ಮುಂದುವರಿಯಲು ಬಿಟ್ಟರೆ, ಮುಂದೆ ಗೌವರ್ನಮೆಂಟ್

ಮೆಡಿಕಲ್ ಕಾಲೇಜುಗಳು ಕ್ಲೋಸ್ ಆಗಿ ಪ್ರೈವೇಟ್ ಮೆಡಿಕಲ್ ಕಾಲೇಜುಗಳು ಮಾತ್ರ ಉಳಿಯತಕ್ಕಂಥ ಪರಿಸ್ಥಿತಿ ಬರುತ್ತದೆ. ಅದರ ಬಗ್ಗೆ ತಾವು ದಯಮಾಡಿ ವಿಶೇಷವಾದಂಥ ಆಸಕ್ತಿ ವಹಿಸಿ, ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ಅದಕ್ಕಾಗಿ ಒಂದು ಕಾಯಕಲ್ಪವನ್ನು ಕೊಟ್ಟು ಇನ್‌ಫ್ರಾಸ್ಟ್ರಕ್ಚರ್ ಒದಗಿಸುವ ಪ್ರಯತ್ನಗಳನ್ನು ಮಾಡುವಿರಾ ಎನ್ನುವುದನ್ನು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಲು ಇಚ್ಛೆಪಡುತ್ತಿದ್ದೇನೆ.

ಇನ್ನು ಬೇಡಿಕೆ ಸಂಖ್ಯೆ 39ರ ಮೇಲೆ ಮಾತನಾಡಬೇಕೆಂದರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇಲ್ಲಿಯವರೆಗೆ ಇಲ್ಲಿದ್ದರು. ಆದರೆ ಆಗಲೇ ಹೊರಗೆ ಹೋದರು. ಮಾನ್ಯ ಎಸ್.ಎಸ್. ಪಾಟೀಲರು ಆಗಲೇ ಹೇಳಿದಂಥಾದ್ದು ನಿಜವಾಗಲೂ ಬಹಳ ಸೂಕ್ತವಾಗಿರತಕ್ಕಂಥಾದ್ದು. ಮೇಜರ್ ಇರಿಗೇಷನ್ ಹೋಗುತ್ತಾ ಹೋಗುತ್ತಾ ನಾವು ಮೈನರ್ ಇರಿಗೇಷನ್ ಅನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡುತ್ತಿದ್ದೇವೆ ಎನ್ನುವ ವಾತಾವರಣ ನಿರ್ಮಾಣವಾಗಿದೆ. ನಮ್ಮಲ್ಲಿರತಕ್ಕಂಥ ಮೈನರ್ ಇರಿಗೇಷನ್ನಿನ ಸಬ್-ಡಿವಿಷನ್ನಿನ ಒಂದೇ ಒಂದು ಉದಾಹರಣೆ ಹೇಳುತ್ತೇನೆ. ಅಲ್ಲಿರತಕ್ಕಂಥ ಇಂಜಿನಿಯರುಗಳ ಪಗಾರ ಒಂದು ವರ್ಷಕ್ಕೆ 90 ಲಕ್ಷ ರೂಪಾಯಿಗಳಾಗುತ್ತದೆ. ಆದರೆ ಅಲ್ಲಿ ಅವರು ಕಳೆದ ವರ್ಷ ಮಾಡಿರತಕ್ಕಂಥ ಕಾಮಗಾರಿಗಳಿಗೆ ಬಂದಂಥ ಗ್ರಾಂಟ್ 30 ಲಕ್ಷ ರೂಪಾಯಿಗಳು. ಒಂದು ಕಡೆ ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ವರದಿ ಒಪ್ಪಿಸಿದ್ದೇವೆ ಎಂದು ಹೇಳುತ್ತಾರೆ. ಮಾನ್ಯ ಅಪ್ಪಾಜಿ ನಾಡಗೌಡರು ಮತ್ತು ನಾವು ಒಂದೇ ಸಬ್-ಡಿವಿಷನ್ನಿನಲ್ಲಿ ಬರುತ್ತೇವೆ. ಸಬ್-ಡಿವಿಷನ್ನಿನ ಹಣೆಬರಹಗಳು ಹೀಗಾದರೆ, ಮೈನರ್ ಇರಿಗೇಷನ್ ಇಲಾಖೆಯನ್ನು ಇಡುವುದಕ್ಕಿಂತಲೂ ಮುಚ್ಚತಕ್ಕಂಥಾದ್ದೇ ವಾಸಿ ಎಂದು ನಾನು ಭಾವಿಸುತ್ತೇನೆ.

ಆದರೂ ಕೂಡ ಡಿಮ್ಯಾಂಡ್ ನಂಬರ್ 39ರಲ್ಲಿ ಬಾಬತ್ತು ಸಂಖ್ಯೆ:3ರಲ್ಲಿ ಹೆಚ್ಚಿನ ಅನುದಾನವಾಗಿ ಕೇವಲ 385 ಲಕ್ಷ ರೂಪಾಯಿಗಳನ್ನು ಮಾತ್ರ ಅವರು ಕೇಳಿದ್ದಾರೆ. ನನಗನಿಸುವುದೇನೆಂದರೆ, ಇದನ್ನು ಪ್ರಾಯಶಃ ಅವರು ನಾಳೆ ಪಕ್ಷ ಅಥವಾ ತಾವು ವೈಯಕ್ತಿಕವಾಗಿ ಶಾಸಕರಿಗೆ ಹುಡುಕಿಕೊಂಡು ಹೋಗಿ ಕೊಡತಕ್ಕಂಥ ಪರಿಸ್ಥಿತಿ ಬರಬಹುದು. ಸಾರ್ವತ್ರಿಕವಾಗಿ ನಾವು ಯಾರ್‍ಯಾರು ಮೂರುಮೂರು ನಾಲ್ಕುನಾಲ್ಕು ವರ್ಷಗಳಿಂದ ಈ ಕೆರೆಗಳನ್ನು ಕೊಟ್ಟು ಕಾಯುತ್ತಿದ್ದೇವೆ ಅವರು ಯಾರಿಗೂ ಇದರಲ್ಲಿ ಈ ಸಲ ಹಣ ಸಿಗುವುದಿಲ್ಲ. ದಯವಿಟ್ಟು ಈ ಬಾಬತ್ತಿಗೆ ಹೆಚ್ಚಿನ ಹಣ ಏನಾದರೂ ಮಾನ್ಯ ಮುಖ್ಯಮಂತ್ರಿಗಳು ಸಾಲವನ್ನಾದರೂ ಕೊಡಿಸಲಿ ಅಥವಾ ಎಲ್ಲಿಂದಲಾದರೂ ಕೊಡಿಸಲಿ ಅಥವಾ ತಮ್ಮ ಆದಾಯದಲ್ಲಿ ಹೆಚ್ಚು ಏನಾದರೂ ಇದ್ದರೆ ಸ್ವಲ್ಪ ಹೆಚ್ಚಿಗೆ ಇದಕ್ಕೆ ಒದಗಿಸಿಕೊಟ್ಟರೆ ಖಂಡಿತ ಸಣ್ಣ ನೀರಾವರಿಗೆ ಸ್ವಲ್ಪ ಜೀವ ತುಂಬಿದ ಹಾಗೆ ಆಗುತ್ತದೆಂದು ನಾನು ತಮ್ಮ ಮೂಲಕ ಆ ಒಂದು ಬೇಡಿಕೆಯನ್ನಿಟ್ಟು ಹೇಳುತ್ತಿದ್ದೇನೆ ಮತ್ತು ಅದರಲ್ಲಿ ವಿಶೇಷವಾಗಿ ಇನ್ನೊಂದು ಬಾಬತ್ತು ಸಂಖ್ಯೆ:4 ರಲ್ಲಿ ಹಳೆಯ ಕೆರೆಗಳನ್ನು ಜೀರ್ಣೋದ್ಧಾರ ಮಾಡತಕ್ಕಂಥದ್ದರಲ್ಲಿ ಕೂಡ ಕೇವಲ 21 ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ. ಕಳೆದ ಸಲ ಮೈನ್ ಡಿಮ್ಯಾಂಡ್‌ನಲ್ಲಿ ಸ್ವಲ್ಪ ಹಣ ಇತ್ತು. ಈಗ ನೋಡಿದರೆ ಅದರಲ್ಲಿ 21 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಆ ಹಣ ಸಹ ಯಾವ ಒಂದು ಜಿಲ್ಲೆಗೆ ಕೂಡ ಸಾಲದೆ ಇರತಕ್ಕಂಥದ್ದು ಆಗುತ್ತದೆಂದು ನನಗನ್ನಿಸುತ್ತದೆ. ದಯವಿಟ್ಟು ಅದರ ಬಗ್ಗೆ ಕೂಡ ಮಾನ್ಯ ಹಿರಿಯ ಸಚಿವರು ಹೊರಗೆ ಹೋಗಿದ್ದಾರೆ, ತಾವು ಅವರಿಗೆ ಇನ್ಸಿಸ್ಟ್ ಮಾಡಿ ಏನಾದರೂ ಸ್ವಲ್ಪ ಹೆಚ್ಚಿಗೆ ಆದಾಯ ಒದಗಿಸಿಕೊಡತಕ್ಕಂಥದ್ದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ.ಮಂಜು (ಅರಕಲಗೂಡು): ಮಾನ್ಯ ಅಧ್ಯಕ್ಷರೇ, ನಮ್ಮ ಅರಕಲಗೂಡು ತಾಲ್ಲೂಕು ಕರ್ನಾಟಕ ರಾಜ್ಯದಲ್ಲಿ ಇದೆ ಎಂದು ಮಾನ್ಯ ಕೃಷಿ ಸಚಿವರಿಗೆ ಗೊತ್ತಿದೆಯೋ ಇಲ್ಲವೋ ಎನ್ನುವಂಥ ಆತಂಕ ನನಗೆ ಉಂಟಾಗಿದೆ. ಏಕೆಂದರೆ, ನಮ್ಮ ತಾಲ್ಲೂಕಿನಲ್ಲಿ ಆಲೂಗಡ್ಡೆ ಬೆಳೆಯೇ ಅತೀ ಹೆಚ್ಚಿನ ರೀತಿಯಲ್ಲಿ ಬೆಳೆಯುವ ಬೆಳೆ ಎಂದು ಇಡೀ ರಾಜ್ಯದಲ್ಲಿ ಗೊತ್ತಿರತಕ್ಕಂಥ ವಿಚಾರ. ಹಾಸನ ಜಿಲ್ಲೆಯಲ್ಲಿ ಬೇಲೂರು ಮತ್ತು ಹಾಸನ ತಾಲ್ಲೂಕು ಇವೆರಡನ್ನೂ ಬೆಳೆ ವಿಮೆ ಯೋಜನೆಯಡಿ ಮಾನ್ಯ ಕೃಷಿ ಸಚಿವರು, ಸರ್ಕಾರ ಸೇರಿಸಿರತಕ್ಕಂಥದ್ದಕ್ಕೆ, ಅದು ನಿಜವಾಗಿಯೂ ಬಹಳ ಸ್ವಾಗತಾರ್ಹವಾಂದಂಥ ವಿಚಾರ. ಆದರೆ ನಮ್ಮ ಅರಕಲಗೂಡು ತಾಲ್ಲೂಕಿನಲ್ಲಿ ಬೆಳೆಗಳನ್ನು ಬೆಳೆಯುವ ಪ್ರದೇಶದ ವಿವರ ಅಂದರೆ ಅ ಎಷ್ಟು ಎಕರೆ ಪ್ರದೇಶಗಳಲ್ಲಿ ಬೆಳೆದಿದ್ದಾರೆ ಎನ್ನುವ ಸರಿಯಾದ ಮಾಹಿತಿ ಗೊತ್ತಿಲ್ಲದೆ ತಪ್ಪು ಮಾಹಿತಿಯನ್ನು ಸರ್ಕಾರಕ್ಕೆ ಕೊಟ್ಟು, ಇದರಿಂದ ನಮ್ಮ ತಾಲ್ಲೂಕಿಗೆ ಇನ್‌ಶ್ಯೂರೆನ್ಸ್‌ನಿಂದ ಸಿಗಬೇಕಾದಂಥ ಸವಲತ್ತು ಸಿಗದೆ ಅನ್ಯಾಯವನ್ನು ಮಾಡಿದ್ದಾರೆಂದು ನಾನು ಇಲ್ಲಿ ನೇರವಾಗಿ ಆಪಾದನೆಯನ್ನು ಮಾಡುತ್ತಿದ್ದೇನೆ. ಸನ್ಮಾನ್ಯ ಕೃಷಿ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಕೇಳಿಕೊಳ್ಳುವುದು ಇಷ್ಟೆ, ಏನೆಂದರೆ ನಮ್ಮ ಬೆಳೆ ವಿಮೆ ಮಾಡಿಸಬೇಕಾದರೆ 10 ವರ್ಷಗಳ ಹಿಂದಿನ ಕ್ರಮ ಪ್ಯಾಟ್ರನ್ ಎಷ್ಟೆಷ್ಟು ಎಕರೆಯಲ್ಲಿ ತಾಲ್ಲೂಕಿನ ರೈತರು ಬೆಳೆ ಬೆಳೆದಿದ್ದಾರೆ ಎನ್ನುವ ವಿವರವನ್ನು ಎಕನಾಮಿಕ್ ಮತ್ತು ಸ್ಟಾಟಿಸ್ಟಿಕ್ಸ್ ಇಲಾಖೆ ಕೇಳಿದೆ. ಅಲ್ಲಿಗೆ ಕಳೆದ 10 ವರ್ಷಗಳ ಮಾಹಿತಿಯನ್ನು ಕೃಷಿ, ತೋಟಗಾರಿಕೆ ಮತ್ತು ಕಂದಾಯ ಇಲಾಖೆ ಹೀಗೆ ಮೂರು ಇಲಾಖೆಗಳು ಸೇರಿ ಸಹಿ ಮಾಡಿ ಕಳುಹಿಸಿರತಕ್ಕಂಥ ವಿವರ ಇದಾಗಿದ್ದು, ಕಂದಾಯ ಇಲಾಖೆಯ, ರೆಕಾರ್ಡ್ ಪ್ರಕಾರ ನಿಜವಾಗಿ ಬೆಳೆ ಬೆಳೆದಿರತಕ್ಕಂಥ 7,491 ಎಕರೆ ಪ್ರದೇಶದಲ್ಲಿ ಆಗಿದ್ದರೆ ಅವರು ಕಳುಹಿಸಿರತಕ್ಕಂಥ ಮಾಹಿತಿ ಕೇವಲ 500 ಹೆಕ್ಟೇರ್ ಮಾತ್ರ ಎಂದು 1996-97ರಲ್ಲಿ ಕಳುಹಿಸಿದ್ದಾರೆ. 1997-98ರಲ್ಲಿ ನಿಜವಾಗಿ ಬೆಳೆ ಬೆಳೆದಿರತಕ್ಕಂಥಾದ್ದು 11,567 ಎಕರೆ ಪ್ರದೇಶದಲ್ಲಿ, ಆದರೆ ಅವರು ಕಳುಹಿಸಿರುವುದು 950 ಹೆಕ್ಟೇರ್ ಪ್ರದೇಶವೆಂದು. 1998ರಲ್ಲಿ ನಾವು ಬೆಳೆದಿರತಕ್ಕಂಥಾದ್ದು 8,527 ಎಕರೆ ಪ್ರದೇಶದಲ್ಲಿ ಆಗಿದ್ದರೆ ಅವರು ಕಳುಹಿಸಿರತಕ್ಕಂಥಾದ್ದು ಕೇವಲ 150 ಹೆಕ್ಟೇರ್ ಪ್ರದೇಶದಲ್ಲಿ ಎಂದು. 1999-2000ರಲ್ಲಿ ಕಂದಾಯ ಇಲಾಖೆಯಿಂದ 10,039 ಎಕರೆ ಪ್ರದೇಶದಲ್ಲಿ ಬೆಳೆದಿದ್ದಾರೆಂದು ಬರೆದಿದ್ದರೆ ಅವರು ಕಳುಹಿಸಿರತಕ್ಕಂಥ ಮಾಹಿತಿ 450 ಹೆಕ್ಟೇರ್ ಎಂದು. 2001ರಲ್ಲಿ 8,717 ಎಕರೆ ಪ್ರದೇಶದಲ್ಲಿ ಬೆಳೆ ಬೆಳೆದರೂ ಕೂಡ ಅವರು ಕಳುಹಿಸಿರತಕ್ಕಂಥಾದ್ದು 910 ಹೆಕ್ಟೇರ್ ಪ್ರದೇಶ ಎಂದು ಅಂದರೆ ಈ ಇಲಾಖಾವತಿಯಿಂದ ವಿವರವನ್ನು ಕಳುಹಿಸಬೇಕಾದರೆ ಡಿ.ಸಿ.ಆಗಲೀ, ತೋಟಗಾರಿಕೆ ಇಲಾಖೆ ಆಗಲೀ ಅಥವಾ ಕೃಷಿ ಇಲಾಖೆಯಾಗಲೀ ಯಾರೂ ಈ ಫಿಗರ್ಸ್‌ನ್ನು ನೋಡದೆಯೇ ಕಳುಹಿಸಿದ್ದಾರೆಯೇ? ನಮ್ಮ ತಾಲ್ಲೂಕಿಗೆ ಸಂಬಂಧಿಸಿದಂತೆ ನಿಜವಾಗಿ ಕಂದಾಯ ಇಲಾಖೆಯಿಂದ ಬಂದಂಥ ಫಿಗರ್ಸ್‌ನ್ನು ಕರೆಕ್ಟಾಗಿ ಕಳುಹಿಸಿದ್ದಾರೆ, ನನ್ನ ಕ್ಷೇತ್ರದ ರೈತರ ಬೆಳೆ ವಿಮೆಗೆ ಸಂಬಂಧಿಸಿದಂತೆ ಯಾರ ರೆಕಮಂಡೇಷನ್ ಇಲ್ಲದೆಯೇ ಸಿಗತಕ್ಕಂಥ ಅವಕಾಶವನ್ನು ಇವತ್ತು ಈ ಸರ್ಕಾರ ಮೊಟಕು ಮಾಡಿರುವುದರಿಂದ ನಮ್ಮ ಕ್ಷೇತ್ರದ ರೈತರಿಗೆ ಅನ್ಯಾಯವಾಗಿದೆಯೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಕಂದಾಯ ಸಚಿವರು ಸದನದಲ್ಲಿಯೇ ಇರುವುದರಿಂದ, ನಾಳೆ ಮಾನ್ಯ ಕೃಷಿ ಸಚಿವರು ಒಂದು ಮೀಟಿಂಗ್ ಕರೆದಿದ್ದಾರೆ, ಅದರಲ್ಲಿ ಇದನ್ನು ಸರಿಪಡಿಸಿ, ಕಂದಾಯ ಇಲಾಖೆಯಲ್ಲಿ ನಿಜವಾಗಿ ಸರಿಯಾದ ಡಾಕ್ಯುಮೆಂಟ್ಸ್, ರೆಕಾರ್ಡ್ಸ್ ಏನಿದೆ ಅದನ್ನು ಏನಾದರೂ

ಕಂದಾಯ ಇಲಾಖೆಯವರು ಮಾನ್ಯ ಕೃಷಿ ಸಚಿವರಿಗೆ ಕಳುಹಿಸಿಕೊಟ್ಟರೆ ಅದನ್ನು ಅವರು ಸ್ಟಾಟಿಸ್ಟಿಕ್ಸ್ ಡಿಪಾರ್ಟ್‌ಮೆಂಟಿಗೆ ಕಳುಹಿಸಿಕೊಟ್ಟರೆ ಅವರು ಇನ್‌ಷ್ಯೂರೆನ್ಸ್‌ನ್ನು ನಿಜವಾಗಲೂ ಕೂಡ ಮಾಡುತ್ತಾರೆ ಎನ್ನುವ ನಂಬಿಕೆ ನನಗಿದೆ. 15ನೇ ತಾರೀಖಿನವರೆಗೆ ಮುಂದೂಡಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿರುವುದನ್ನು ನೋಡಿದ್ದೇನೆ ಮತ್ತು ಮಾನ್ಯ ಸಚಿವರು ಕೂಡ ಸದನದಲ್ಲಿ ಹೇಳಿರುವುದರಿಂದ ನಾಳೆ ಕೂಡ ಸ್ಟಾಟಿಸ್ಟಿಕ್ಸ್ ಡಿಪಾರ್ಟ್‌ಮೆಂಟಿಗೆ ಕಂದಾಯ ಇಲಾಖೆಯವರು ನಿಜವಾಗಿ 10 ವರ್ಷಗಳಿಂದ ಬರೆದಿರತಕ್ಕಂಥ ಪಹಣಿಯಲ್ಲಿರತಕ್ಕಂಥ ರೆಕಾರ್ಡ್ಸ್‌ನ್ನು ತಾವು ಕೊಟ್ಟರೆ, ನಮ್ಮ ಮುಂದಿಟ್ಟರೆ ನಮ್ಮ ತಾಲ್ಲೂಕಿನ ರೈತರಿಗೂ ಇನ್‌ಶ್ಯೂರೆನ್ಸ್ ಸಿಗುವುದಕ್ಕೆ ಅವಕಾಶ ಇದೆ. ಇಲ್ಲದಿದ್ದರೆ ಇದರಲ್ಲಿ ಸಂಬಂಧಪಟ್ಟ ಇಲಾಖೆಯವರು ಯಾರು ಸರಿಯಾದ ಇನ್ ಫಾರ್ಮೇಷನ್ ಕೊಟ್ಟಿಲ್ಲ ಅವರನ್ನು ದಯವಿಟ್ಟು ಕೂಡಲೇ ವಜಾ ಮಾಡಬೇಕು ಸರಿಯಾದ ಮಾಹಿತಿಯನ್ನು ಕೊಡದಿರುವುದರಿಂದ ನಮ್ಮ ತಾಲ್ಲೂಕಿಗೆ ಅನ್ಯಾಯವಾಗಿದೆಯೆಂದು ಹೇಳಿ ಮಾನ್ಯ ಮುಖ್ಯಮಂತ್ರಿಯವರನ್ನು ಮತ್ತು ಮಾನ್ಯ ಕಂದಾಯ ಇಲಾಖೆಯ ಸಚಿವರನ್ನು ಹಾಗೂ ಮಾನ್ಯ ಕೃಷಿ ಸಚಿವರಲ್ಲಿ ಬೇಡಿಕೊಳ್ಳುತ್ತಿದ್ದೇನೆ.

+ಶ್ರೀ ಎ.ಎಸ್.ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಅಧ್ಯಕ್ಷರೇ, 2002-2003ರ ಸಪ್ಲಿಮೆಂಟ್ ಎಸ್ಟಿಮೇಟ್ಸ್‌ನ್ನು ಸದನದಲ್ಲಿ ಏನು ಮಂಡಿಸಿದ್ದಾರೆ ಅದರಲ್ಲಿ ಕೆಲವು ಸರ್ವೀಸಸ್‌ಗೆ ಮತ್ತು ಅಡಿಷನಲ್ ಎಕ್ಸ್‌ಪೆಂಡಿಚರ್‌ಗೆ ಎಲ್ಲಿ ಅಡಿಷನಲ್ ಆಗಿ ಹಣ ಬೇಕಾಗುತ್ತದೆ ಎನ್ನುತಕ್ಕಂಥಾದ್ದನ್ನು ಕೆಲವು ಅಧಿಕಾರಿಗಳು ವಾಸ್ತವಿಕವಾಗಿ ಅದನ್ನು ಪರಿಶೀಲನೆ ಮಾಡಿ ಸೇರಿಸಿರತಕ್ಕಂಥಾದ್ದು ಸರಿ, ಆದರೆ ಕೆಲವು ಕಡೆ ಅವರು ಗಮನವನ್ನು ಹರಿಸಿಲ್ಲ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಕಳೆದ ಸಲ ಯಾವ ಯಾವ ಹೆಡ್‌ನಲ್ಲಿ ಎಷ್ಟೆಷ್ಟು ಇತ್ತು ಎನ್ನುವುದನ್ನೂ ಕೂಡ ನಾನು ಓದಿದ್ದೇನೆ. ನಮ್ಮ ಅಧಿಕಾರಿಗಲು ಮಕ್ಕಿ -ಕಾ-ಮಕ್ಕಿ ಅಂದರೆ ಕಳೆದ ಸಲ ಏನಿತ್ತು ಅದೇ ಹೆಡ್‌ನಲ್ಲಿ ನಂಬರ್ಸ್‌ನ್ನು ಅಲ್ಪಸ್ವಲ್ಪ ಎಕ್ಸ್ ಪ್ಯಾಂಡ್ ಮಾಡಿಕೊಂಡು ಬಂದಿದ್ದಾರಷ್ಟೆ. ಕಳೆದ ಸಲ 100 ಲಕ್ಷರೂ ಕೊಟ್ಟಿದ್ದರೆ ಈ ವರ್ಷದಲ್ಲಿ ಅವರು 150 ರೂಗೆ ಅವರು ಪ್ರಯತ್ನ ಮಾಡಿದ್ದಾರೆ. ಆದರೆ ಅದು ಆ ತರಹ ಮಾಡುವುದಲ್ಲ. Any budget should be dynamic, should be flexible, should be growth-oriented. ಅಂದರೆ ಬರೀ ದುಡ್ಡು ಖರ್ಚು ಮಾಡುವುದಕ್ಕಾಗಿಯೇ ಬಜೆಟ್ ಇರುವುದು ಅಲ್ಲ; ಸರ್. Nowhere on the earth of the world, ಎಲ್ಲೂ ಕೂಡ ಬಜೆಟ್‌ನಲ್ಲಿ ಬರೀ ದುಡ್ಡು ಖರ್ಚು ಮಾಡುವುದೇ ಕೆಲಸ ಆದರೆ it cannot be budget at all. Budget is one which relates to economic growth. ಎಕನಾಮಿಕ್ ಗ್ರೋತ್ ಬಗ್ಗೆ ಅವರು ಕಾನ್‌ಸೆಂಟ್ರೇಟ್ ಮಾಡಿರತಕ್ಕಂಥ ಹೆಡ್ಸ್‌ನ್ನು ನಾನು ಇಲ್ಲಿ ನೋಡಿದ್ದೇನೆ. ಎಸ್ಟಿಮೇಟ್ಸ್‌ನಲ್ಲಿ ನಮ್ಮ ಅಧಿಕಾರಿ ಬಂಧುಗಳು ಏನು ಪ್ರಪೋಸ್ ಮಾಡಿದ್ದಾರೆ ಎಕನಾಮಿಕ್ ದೃಷ್ಟಿಯಿಂದ ಅವರು ಅಷ್ಟಾಗಿ ಗಮನಹರಿಸಿಲ್ಲ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇದನ್ನು ನಾನೇನೂ ಯಾರೋ ಒಬ್ಬರಿಗೆ ಟೀಕೆ ಮಾಡತಕ್ಕಂಥಾದ್ದು ಅಲ್ಲ. ಇದು ನಡೆದಿರತಕ್ಕಂಥ ವಾಸ್ತವಾಂಶ. ನಮ್ಮ ಜರ್ನಲಿಸಂನಲ್ಲಿ ಒಂದು ಮಾತು ಹೇಳುತ್ತೇವೆ. Facts always speak the truth. Whatever truth is there, facts alone will speak truth. ಹಾಗೆ ನಮ್ಮ ಮುಂದೆ ಇಟ್ಟಿರತಕ್ಕಂಥ ಈ ಫಿಗರ್ಸ್, ಫಾಕ್ಟ್ಸ್ ಇವೆಲ್ಲವನ್ನೂ ನೋಡಿದಾಗ ಇನ್ನೂ ಸ್ವಲ್ಪ

ಗ್ರೋತ್ ಓರಿಯೆಂಟೆಡ್ ಶೇಪ್ ಅದಕ್ಕೆ ಕೊಡಬೇಕಾಗಿತ್ತೋ ಏನೋ ಎಂದು ನನಗೆ ಭಾವನೆ ಬರುತ್ತಿದೆ. ಒಂದು ವಿಚಾರ ಉದಾಹರಣೆಗೆ ಹೇಳುತ್ತೇನೆ, ಅದನ್ನು ದಯವಿಟ್ಟು ಗಮನಿಸಬೇಕು ಎನ್ನತಕ್ಕಂಥಾದ್ದು ತಮ್ಮಲ್ಲಿ ನನ್ನ ಒಂದು ಕಳಕಳಿಯ ಮನವಿ. ಏರಿಯಾ ಡೆವಲಪ್‌ಮೆಂಟ್ ಬೋರ್ಡ್ಸ್ ಎನ್ನತಕ್ಕಂಥಾದ್ದು ಏನಿವೆ, ಈ ಬಗ್ಗೆ ನನ್ನ ಮಿತ್ರರು ಯಾರೂ ಅನ್ಯಥಾ ಭಾವಿಸಬಾರದು, ಮಲೆನಾಡು ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ ಎಂದು ಬೇಕಾದಷ್ಟು ಮಂಡಳಿಗಳು ನಮ್ಮಲ್ಲಿ ಇವೆ. ನಿಜವಾಗಿ ಆ ಮಂಡಳಿಗಳು ಮಿನಿ ಅಸೆಂಬ್ಲಿ ತರಹ ಇವೆ. ಕೆಲವು ದಿನಗಳ ಹಿಂದೆ ನಮ್ಮ ಕಮಿಟಿಯಿಂದ ಅಧಿಕಾರಿಗಳು ನಾರ್ತ್ ಈಸ್ಟರ್ನ್ ಸ್ಟೇಟ್‌ಗಳಿಗೆ ನಮ್ಮನ್ನೆಲ್ಲಾ ಟೂರ್ ಕರೆದುಕೊಂಡು ಹೋಗಿದ್ದರು. ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮಣಿಪುರ-ಇಂಥ ಸಣ್ಣ ಸಣ್ಣ ರಾಜ್ಯಗಳಿಗೆ ಕರೆದುಕೊಂಡು ಹೋಗಿದ್ದರು. ಒಂದೊಂದು ಅಸೆಂಬ್ಲಿಯಲ್ಲಿ 45 ಜನ, 50 ಜನ, 60 ಜನ, 70 ಜನ ಇರತಕ್ಕಂಥ ಅಸೆಂಬ್ಲಿ ಅಲ್ಲಿ ಇದೆ. ಆದರೆ ನಮ್ಮ ರಾಜ್ಯದಲ್ಲಿ ಬೋರ್ಡ್ಸ್ ಏನಿದೆ ಇಲ್ಲಿ 120 ಜನ, 130 ಜನ, 140 ಜನ ಇದ್ದಾರೆ. what can they do? ಅವರಿಗೆ ಬಜೆಟ್ ಎಲ್ಲಿ ಅಪ್ರೂವ್ ಆಗಿದೆ? ಕಾಮಗಾರಿಗಳ ಸಲುವಾಗಿ ಖರ್ಚು ಮಾಡುವುದಕ್ಕೆ ಅವರಿಗೆ ದುಡ್ಡು ಎಲ್ಲಿದೆ? ಸ್ಟಾಫ್‌ಗೆ ಅಲ್ಲಿ ಕೊಡತಕ್ಕಂಥ ಸಂಬಳವೇ ಜಾಸ್ತಿ ಹೊರತು ಖರ್ಚು ಕಡಿಮೆ. ಖರ್ಚು ಮಾಡುವುದಕ್ಕೆ ಅವರಿಗೆ ಅವಕಾಶವಿಲ್ಲ. ಆದರೂ ಬಿಳಿ ಆನೆ ತರಹ ನಾವು ಅದನ್ನು ಸಾಕಿಕೊಂಡು ಬರತಕ್ಕಂಥಾದ್ದು is it an economic decision? I want to put a small question. I want to put one more question. ಈ ಏರಿಯಾದಲ್ಲಿ ಅವರಿಗೆ ಕೊಡಬೇಕಾದಂಥ ಬಿಲ್ಸ್ ಏನಿವೆ, ಆ ಬಿಲ್ಸ್ ಎಲ್ಲವನ್ನು ನೋಡಿಬಿಟ್ಟರೆ ಏನಪ್ಪಾ ಇವರ ಕತೆ? ಈ ಬೋರ್ಡ್‌ಗಳು ಏತಕ್ಕಾಗಿ ಇವೆ? ಯಾವ ಸಂಕಟಕ್ಕಾಗಿ ಇದ್ದಾವೆ ಎಂದು ನನಗೆ ದಿಗ್ಭ್ರಮೆಯಾಗುತ್ತದೆ. ನಮ್ಮ ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಕಮೀಷನ್‌ನಲ್ಲಿ ಶ್ರೀಮಾನ್ಯ ಹಾರ್ನಳ್ಳಿ ರಾಮಸ್ವಾಮಿ ಅವರು ಬಹಳ ಉತ್ತರವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಯಾವತ್ತೂ ಯಾವುದು ಎಕನಾಮಿಕಲ್ ಅಲ್ಲ, ಪಬ್ಲಿಕ್ ಅಂಡರ್ ಟೇಕಿಂಗ್ ಸಂಸ್ಥೆ ಇರಲಿ ಅಥವಾ ಮಂಡಳಿಗಳು ಇರಲಿ, ಅವುಗಳನ್ನು ನಿಲ್ಲಿಸುವುದು, ಮುಚ್ಚುವಂಥಾದ್ದು ಬಹಳ ಮುಖ್ಯ ಎನ್ನತಕ್ಕಂಥ ಮಾತನ್ನು ಅವರು ಅಲ್ಲಿ ಒತ್ತಿ ಹೇಳಿದ್ದಾರೆ. ಆದರೆ ನಮ್ಮ ಅಧಿಕಾರಿಗಳು ಪುನಃ ಇಲ್ಲಿ ಒಂದು ಹೆಡ್‌ನಲ್ಲಿ ಏನು ಹೇಳುತ್ತಾರೆಂದರೆ-'ಈ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ಗೆ ಪುನಃ ದುಡ್ಡು ಕೊಡಬೇಕೆಂದು. ಇಲ್ಲಿ ಬರೆದುಕೊಂಡಿದ್ದಾರೆ. ಯಾವುದು ಪ್ರಾಫಿಟೆಬಲ್ ಆಗಿ ನಡೆಯುತ್ತಿಲ್ಲ ಅದನ್ನು ಮುಚ್ಚಬೇಕು ಎನ್ನತಕ್ಕಂಥಾದ್ದನ್ನು ನಮ್ಮ ನೆಚ್ಚಿನ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ನಮಗೆ ಅದರ ಅವಶ್ಯಕತೆಯಿಲ್ಲ, ಹಾಕಿದ ದುಡ್ಡು ನಮಗೆ ವಾಪಸ್ಸು ಬರುತ್ತಿಲ್ಲ, ಲಾಭ ಆಗುತ್ತಿಲ್ಲ, ನಷ್ಟ ಆಗುತ್ತಿದೆ, ಇಂಥಾದ್ದನ್ನು ಮುಚ್ಚಿಸಬೇಕು ಎನ್ನತಕ್ಕಂಥ ಇಚ್ಛೆ ಇರುವಾಗ ಪುನಃ ನಮ್ಮ ಅಧಿಕಾರಿಗಳು ಏನು ಮಾಡಿದ್ದಾರೆಂದರೆ - ಕೆಲವು ಹೆಡ್ಸ್‌ನಲ್ಲಿ ಆ ಪಬ್ಲಿಕ್ ಅಂಡರ್ ಟೇಕಿಂಗ್‌ಗೆ ದುಡ್ಡನ್ನು ಕೊಡಬೇಕು ಎನ್ನತಕ್ಕಂಥ ವಾದವನ್ನು ಹೂಡಿದ್ದಾರೆ. ಸಪ್ಲಿಮೆಂಟರಿ ಬಜೆಟ್‌ನಲ್ಲಿ ಕಾಣಿಸಿರತಕ್ಕಂಥಾದ್ದನ್ನು ತಾವು ನೋಡಬಹುದು. ಇದೇನೂ ಅಷ್ಟಾಗಿ ಒಂದು ಒಳ್ಳೆಯ ವೆಲ್‌ಕಂ ಫೀಚರ್ ಅಲ್ಲ ಎನ್ನುವ ಮಾತನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಮುಜರಾಯಿಗೆ ಸಂಬಂಧಪಟ್ಟಂತೆ ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ತ್ರೂಔಟ್ ಕರ್ನಾಟಕ ವರ್ಕ್ಫ್ ಬೋರ್ಡ್‌ನಲ್ಲಿ ಬರತಕ್ಕಂಥ ಎಲ್ಲಾ ಸಂಪಾದನೆ, ಇನ್‌ಕಂನ್ನು

ಒಂದು ಬೇರ್ಡ್‌ನಲ್ಲಿ ಒಂದು ಅಕೌಂಟ್‌ನಲ್ಲಿ ಅದು ಜಮಾ ಆಗುತ್ತದೆ. ನಮ್ಮ ಎಲ್ಲಾ ಹಿಂದೂ ಟೆಂಪಲ್ಸ್‌ನ್ನೂ ಕೂಡ ವಕ್ಫ್ ಬೋರ್ಡ್ ತರಹ ಒಂದೇ ಕಡೆ ಅದನ್ನು ಜಮಾ ಮಾಡಿ ಈ ಪೂರ್ ಟೆಂಪಲ್ಸ್, ರಿಚ್ ಟೆಂಪಲ್ಸ್ ಏನಿವೆ ಅವಕ್ಕೆಲ್ಲಾ ಸಮನಾಗಿ ನಡೆಸಿಕೊಂಡು ಹೋಗಲಿಕ್ಕೆ ತಾವು ವ್ಯವಸ್ಥೆ ಏಕೆ ಮಾಡಿಲ್ಲ? ಈವನ್ ಟುಡೆ ಆ ಲೆಜಿಸ್ಲೇಷನ್ ತರತಕ್ಕಂಥ ಇಚ್ಛೆಪಟ್ಟಿದ್ದರೂ ಕೂಡ ಅದು ಆಗಲೇ ಇಲ್ಲ. ವಕ್ಫ ಬೋರ್ಡ್ ಆಧಾರದ ಮೇಲೆಯೇ ಈ ನಮ್ಮ ಹಿಂದೂ ಟೆಂಪಲ್ಸ್‌ನ್ನು ಸಹ ಒಂದು ಬೋರ್ಡ್ ರೂಪದಲ್ಲಿ ಮಾಡಿ ಎಲ್ಲಾ ಇನ್‌ಕಂನ್ನು ತಂದು, ಈ ಮಸೀದಿಗಳನ್ನು ನಮ್ಮ ಮುಸಲ್ಮಾನ ಬಂಧುಗಳ ಹೇಗೆ ನಡೆಸುತ್ತಾರೆ ಅದೇ ರೀತಿಯಲ್ಲಿ ನಮ್ಮ ಟೆಂಪಲ್ಸ್‌ನ್ನು ನಡೆಸಿದರೆ ಅಷ್ಟೇಷ್ಟು ಆದಾಯಗಳು ಬರುತ್ತವೆ, ಹಾಗೂ ಟೆಂಪಲ್‌ಗಳೂ ಸಹ ಚೆನ್ನಾಗಿ ನಡೆಯುತ್ತವೆ ಎನ್ನತಕ್ಕಂಥ ಮಾತನ್ನು ಹೇಳುತಾತ, ಹಾಗೆಯೇ ಕ್ರಾಪ್ ಇನ್‌ಷ್ಯೂರೆನ್ಸ್ ಬಗ್ಗೆ ನಮ್ಮ ಮಿತ್ರರು ಈಗಾಗಲೇ ಅದು ಬಹಳ ಚೆನ್ನಾಗಿದೆ ಎಂದು ಅವರು ಹೇಳಿದ್ದಾರೆ. It should be made compulsory. ಅಪ್‌ಷನಲ್ ಆಗಿ ಇರಬಾರದು. ಟೋಟಲ್ ಇನ್‌ಶ್ಯೂರೆನ್ಸ್ ಮಾಡಲೇಬೇಕು. ಈವನ್ ಇನ್ ಅಮೇರಿಕಾದಲ್ಲಿ ಒಬ್ಬ ವ್ಯಕ್ತಿ ಸಣ್ಣ ಬೆರಳಿನ ಉಗುರು ಹೋದರೂ ಸಹ he claims insurance amount. ಆ ಪದ್ಧತಿಯನ್ನು ಇಲ್ಲಿ ತರಬೇಕು. For any loss, Insurance should be held responsible. ಅವರಿಂದ ನಮಗೆ ಹಣ ಬರುವಂಥ ಪದ್ಧತಿಯನ್ನು ತರುವಂಥಾದ್ದು ಬಹಳ ಒಳ್ಳೆಯದು. ಎಕನಾಮಿಕಲಿ ವೀಕ್ ಆಗಿರತಕ್ಕಂಥ ಈ ನಮ್ಮ ದೇಶದಲ್ಲಿ ಇದನ್ನು ತರುವುದು ಬಹಳ ಒಳ್ಳೆಯದು ಎನ್ನುವ ಮಾತನ್ನು ಹೇಳುತ್ತಾ, ಹಾಗೆಯೇ ಕೋ-ಆಪರೇಟಿವ್ ಸೊಸೈಟಿಗಳಿಗೆ ತಾವೇನು ಹಣವನ್ನು ಕೊಡತಕ್ಕಂಥ ವಿಚಾರ ಮಾಡಿದ್ದೀರಿ, ಕೆಲವು ಕೋ-ಆಪರೇಟಿವ್ ಸೋಸೈಟಿಗಳು ಉತ್ತರ ಕರ್ನಾಟಕದ ಗದಗ್, ಬೀದರ್, ಬೆಳಗಾಂನಲ್ಲಿ ಚೆನ್ನಾಗಿ ನಡೆಯುತ್ತಿವೆ ಎಂದು ಹೇಳುತ್ತಾರೆ. ಆದರೆ ನಮ್ಮಲ್ಲಿ ಮಾತ್ರ ಕೋ- ಆಪರೇಟಿವ್ ಸೊಸೈಟಿ ಎಂದರೆ ವಾಕರಿಕೆ ಸರ್. ಆ ಕೋ ಆಪರೇಟಿವ್ ಸೊಸೈಟಿಯನ್ನು ತಿರುಗಿ ಕೂಡ ನೋಡುವುದಕ್ಕೆ ಹೋಗುವುದಿಲ್ಲ. ಅಂಥ ಪರಿಸ್ಥಿತಿಯಲ್ಲಿ ನಾವೆಲ್ಲಾ ಸಿಕ್ಕಿಹಾಕಿಕೊಂಡಿದ್ದೇವೆ. ಏಕೆಂದರೆ ಅದನ್ನು ನಡೆಸುತ್ತಿರತಕ್ಕಂಥ ಖಾಸಗಿ ಸ್ನೇಹಿತರು ಸ್ವಲ್ಪ ಅಲ್ಲಿ ಎಡವಿದ್ದಾರೆ ಎನ್ನತಕ್ಕಂಥ ವಿಚಾರ ಬಂದಾಗ ಇದರ ಬಗ್ಗೆ ಚಿಂತನೆ ಹರಿಸಬೇಕೆನ್ನತಕ್ಕಂಥಾದ್ದು ಅವಶ್ಯಕ ಸರ್.

ಇನ್ನು ರೀಜಿನಲ್ ಇಂಬ್ಯಾಲೆನ್ಸ್‌ಸ್ ಆಫ ಏರಿಯಾ ಡೆವಲಪ್ ಮೆಂಟ್ ಎಂದು ಏನಿದೆ, ಅದರ ಬಗ್ಗೆ ಒಂದು ದೊಡ್ಡ ರಿಪೋರ್ಟ್ ಬಂದಿದೆ. ಆ ರಿಪೋರ್ಟ್‌ನ್ನು ನಮ್ಮ ಅಧಿಕಾರಿಗಳು ಏನಾದರೂ ಗಮನಿಸಿದ್ದಾರೆಯೇ ಎನ್ನತಕ್ಕಂಥ ಮಾತನ್ನು ಹೇಳಬೇಕಾಗುತ್ತದೆ. ರೀಜಿನಲ್ ಇಂಬ್ಯಾಲೆನ್ಸ್ ನ್ ಏನಾಗಿವೆ, ಅದರ ಬಗ್ಗೆ ಗಮನ ಹರಿಸಿದ್ದರೆ ಇನ್ನಷ್ಟು ಹಣವನ್ನು ಕೆಲವು ಏರಿಯಾಗಳಲ್ಲಿ ಎಲ್ಲಿ ಡೆವಲಪ್‌ಮೆಂಟ್ ಆಗಬೇಕಾಗಿತ್ತೋ ಆ ಕಡೆ ಇವರು ಗಮನ ಹರಿಸಿಲ್ಲದಿರತಕ್ಕಂಥಾದನ್ನು ನಾವು ಈ ಬಜೆಟ್‌ನಲ್ಲಿ ನೋಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ನಮ್ಮ ಪಟೇಲರಿಗೆ, ಶ್ಯಾನುಬೋಗರಿಗೆ ಹಣ ಕೊಡಬೇಕೆಂದು ತಾವು ಇಚ್ಛೆಪಟ್ಟಿದ್ದೀರಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅವರು ನಮ್ಮ ವಿಲೇಜ್ ಅಕೌಂಟೆಂಟ್ ಗಿಂತಲೂ ಬಹಳ ಚೆನ್ನಾಗಿ ಒಂದು ಕಾಲದಲ್ಲಿ ಸೇವೆ ಮಾಡಿದಂಥ ಜನ, ಬಹಳ ಚೆನ್ನಾಗಿ ಕೆಲಸ ಮಾಡಿದಂಥವರು. ನಮ್ಮ ಮಾನ್ಯ ಮಂತ್ರಿಗಳು ಒಬ್ಬರು ನಮ್ಮ ಎಂ.ಎಲ್.ಎ. ಗ್ರಾಂಟ್ಸ್ ಬಗ್ಗೆ

ಹೊಸ ಗೈಡ್ ಲೈನ್ಸ್‌ನ್ನು ನನಗೆ ಕೊಟ್ಟಿದ್ದಾರೆ. ಪರವಾಗಿಲ್ಲ, ಇದನ್ನು ಫ್ಲೆಕ್ಸಿಬಲ್ ಆಗಿ ಮಾಡಿದ್ದಾರೆ. ಇದರ ಜೊತೆಗೆ ನನ್ನ ಒಂದು ಸಬ್ ಮಿಷನ್ ಏನೆಂದರೆ, ಈ ಎಂ.ಪಿ.ಗಳು ಯಾವ ರೀತಿಯಾಗಿ ಹಣ ಕೊಡುತ್ತಾರೆ ಆ ಮಾದರಿಯಲ್ಲಿಯೇ ಎಂ.ಎಲ್.ಎ. ಗಳು ಕೂಡ ಹಣ ಕೊಡುವಂಥ ಪದ್ಧತಿ ಜಾರಿಗೆ ಬಂದಾಗ ಈ ಎಂ.ಪಿ.ಗಳು ಅನೇಕ ಸಂದರ್ಭಗಳಲ್ಲಿ ನಮ್ಮ ಮೇಲೆ ಸವಾರಿ ಮಾಡುವಂಥಾದ್ದು ಸ್ವಲ್ಪ ನಿಲ್ಲುತ್ತದೆ. ಅವರು ಯಾವುದನ್ನು ಕೊಡುತ್ತಾರೆ ಅದನ್ನು ಇಲ್ಲಿ ನಾವು ಕೊಡುವುದಕ್ಕೆ ಬರುವುದಿಲ್ಲ. 'ಆ ಎಂ.ಪಿ. ಕೊಡುತ್ತಾರೆ ನೀವು ಏಕ್ರೇ ಕೊಡುವುದಿಲ್ಲ' ಎಂದು ಹೇಳುತ್ತಾರೆ. ಎಂ.ಪಿ.ಗಳು ಕೊಡುತ್ತಾರೆಂದು ಹೇಳುವಾಗ, ಅದೇ ರೀತಿ ಇಲ್ಲೂ ಕೊಡಬೇಕೆನ್ನತಕ್ಕಂಥಾದ್ದಕ್ಕೆ ತಾವು ಹೆಚ್ಚು ಅವಕಾಶವನ್ನು ಕಲ್ಪಿಸಬೇಕೆನ್ನುವುದು ನನ್ನ ಒಂದು ಮನವಿ ಸರ್.

ಇನ್ನು ಹೈಸ್ಕೂಲ್‌ಗಳ ಬಗ್ಗೆ ಹೇಳುವುದಾದರೆ, ಕಳೆದ 20 ವರ್ಷಗಳಿಂದ ನಮ್ಮಲ್ಲಿ ಒಳ್ಳೊಳ್ಳೆಯ ಹೈಸ್ಕೂಲ್‌ಗಳನ್ನು ಪ್ರೈವೇಟ್ ಇನ್ಸ್‌ಸ್ಟಿಟ್ಯೂಷನ್ಸ್ ನವರು ಚೆನ್ನಾಗಿ ನಡೆಸುತ್ತಿದ್ದಾರೆ. ಅವರಿಗೆ ಗ್ರಾಂಟ್-ಇನ್-ಏಡ್ ಕೊಡುತ್ತಿಲ್ಲ. ಎಸ್ ಸಿ, ಎಸ್ ಟಿ, ಬೇರೆಯವರಿಗೆಲ್ಲಾ ಕೊಟ್ಟಿದ್ದೀರಿ. ಇವರಿಗೂ ಕೂಡ ಫರ್ ಫಾರ್ಮ್ಸ್ ಮೇಲೆ ಒಳ್ಳೆಯ ಬಿಲ್ಡಿಂಗ್ ಇದ್ದರೆ, ಅಸೆಟ್ಸ್ ಇದ್ದರೆ, ಮ್ಯಾನೇಜ್‌ಮೆಂಟ್ ಚೆನ್ನಾಗಿ ಇದ್ದರೆ, ಎಲ್ಲರೂ ಚೆನ್ನಾಗಿ ಇದ್ದ ಪಕ್ಷದಲ್ಲಿ ಏಕೆ ಇವರಿಗೆ ಗ್ರಾಂಟ್-ಇನ್-ಏಡ್ ನ್ನು ಕೊಡಬಾರದು? ಇದನ್ನು ಕೂಡ ದಯಮಾಡಿ ತಾವು ಪರಿಶೀಲನೆ ಮಾಡಬೇಕು.

ಇನ್ನು ಎನ್‌ಫೋರ್ಸ್‌ಮೆಂಟ್ ಆಫ್ ಲೇಬರ್ ಲಾಸ್; ನಾನೂ ಕೂಡ ಆ ಕಮಿಟಿಯಲ್ಲಿ ಇದ್ದೆ ಸರ್. ಅಲ್ಲಿ ಸುಮಾರು 300 ಪೋಸ್ಟ್ಸ್ ಖಾಲಿ ಇವೆ. ಆ ಆಕ್ಟ್‌ನ್ನು ಎನ್ ಫೋರ್ಸ್ ಮಾಡಲಿಕ್ಕೆ ಅವರಿಗೆ ಜನ ಇಲ್ಲ. ಅಲ್ಲಿ ದುಡ್ಡು ಬೇಕಾದಷ್ಟು ಬರುತ್ತದೆ. ಆ ಲೇಬಲ್ ಲಾಸ್ ಅನ್ನು ಎನ್ ಫೋರ್ಸ್ ಮಾಡಲಿಕ್ಕೆ ಹೆಚ್ಚು ಜನ ಅಧಿಕಾರಿಗಳು ಅಲ್ಲಿ ಬರುವಂಥ ಒಂದು ವ್ಯವಸ್ಥೆ ಆಗಬೇಕು.

ಇನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಮಿಟಿಯಲ್ಲಿ ನಾನು ಮೆಂಬರ್ ಆಗಿ ಇದ್ದೆ. ಆ ಇಲಾಖೆಯಲ್ಲಿ ಕಾರ್ಯಕ್ರಮಗಳು ಜಾಸ್ತಿ ಇವೆ. ಆ ಕಾರ್ಯಕ್ರಮಗಳಿಗೆ ಈ ಬಜೆಟ್‌ನಲ್ಲಿ ಸಾಕಷ್ಟು ಹಣವನ್ನು ಕೊಟ್ಟಿಲ್ಲ. ಸಾಕಷ್ಟು ಹಣವನ್ನು ಕೊಡಬೇಕೆನ್ನುವಂಥ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡಲಿಕ್ಕೆ ಇಚ್ಛಿಪಡುತ್ತೇನೆ.

ಇನ್ನು ಸೆಕ್ರೆಟರಿಯೇಟ್ ಎಕನಾಮಿಕ್ ಸರ್ವೀಸಸ್ ಎಂದು ಒಂದು ಹೆಡ್ ಇದೆ. ಅದನ್ನು ಬಹಳ ಸ್ಟ್ರಾಂಗ್ ಮಾಡಬೇಕು. ಇಲ್ಲಿ ಒಂದು ಹೆಡೆ ಅದಕ್ಕೆ ಇದೆ. ಸೆಕ್ರೆಟರಿಯೇಟ್ ಎಕನಾಮಿಕ್ ಸರ್ವೀಸ್ ಇದನ್ನು ಸ್ವಲ್ಪ ಚೆನ್ನಾಗಿ ಮಾಡಬೇಕೆನ್ನತಕ್ಕಂಥ ವಿಚಾರ, ಮತ್ತು ಇನ್ನೊಂದು ಹೆಡೆನಲ್ಲಿ ಸೈಂಟಿಫಿಕ್ ಬಾಡೀಸ್‌ಗೆ ಹಣ ಕೊಡಬೇಕೆನ್ನತಕ್ಕಂಥ ಮಾತನ್ನು ಇಲ್ಲಿ ಹೇಳಿದ್ದಾರೆ. ನಾನು ಇದನ್ನು ವೆಲ್‌ಕಂ ಮಾಡುತ್ತೇನೆ. ಹಳ್ಳಿಗಾಡಿನ ಮಕ್ಕಳಿಗೆ, ರೂರಲ್‌ನಲ್ಲಿ ಇರತಕ್ಕಂಥ ಮಕ್ಕಳಿಗೆ ಹೆಚ್ಚಿನ ಈ ಸೈಂಟಿಫಿಕ್ ನಾಲೆಡ್ಜ್ ಬರುವುದಕ್ಕೋಸ್ಕರ ನಮ್ಮ ಕರ್ನಾಟಕದಲ್ಲಿ 'ವಿಜ್ಞಾನ ಪರಿಷತ್' ಎನ್ನುವ ಒಂದು ಬಾಡಿ ಇದೆ. ಇದು ತಮಗೂ ಗೊತ್ತಿರಬಹುದು, ಇಲ್ಲಿರುವ ಬಹಳಷ್ಟು ನನ್ನ ಸ್ನೇಹಿತರಿಗೆಲ್ಲಾ ಗೊತ್ತಿದೆ. ಆ ವಿಜ್ಞಾನ ಪರಿಷತ್ ಅಷ್ಟಾಗಿ ಕೆಲಸ ಮಾಡಲಿಕ್ಕೆ ಅವರ ಹತ್ತಿರ ಹಣವಿಲ್ಲ. ಎಲ್ಲಾ ಜಿಲ್ಲೆಗಳಿಗೆ ಹೋಗಿ ಕೆಲಸ ಮಾಡಲಿಕ್ಕೆ ಆ ಒಂದು ಶಕ್ತಿಯನ್ನು

ಅದಕ್ಕೆ ತುಂಬಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತಾ, ಏನು ಈ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನ್ನು ತಾವು ಸಭೆಯ ಮುಂದೆ ಇಟ್ಟಿದ್ದೀರಿ ಅದನ್ನು ನಾನು ಸ್ವಾಗತ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಅರಕಲಗೂಡು ಕ್ಷೇತ್ರದ ಶಾಸಕರು ಈಗ ತಾನೇ ಸದನದಲ್ಲಿ ಅರಕಲಗೂಡು ತಾಲ್ಲೂಕಿನಲ್ಲಿ ಬೆಳೆದಂಥ ಆಲೂಗಡ್ಡೆ ಇನ್ ಷ್ಯೂರೆನ್ಸ್ ಸಂಬಂಧವಾಗಿ ಹೇಳಿದ್ದಾರೆ. ಈಗ ಕಂದಾಯ ಇಲಾಖೆಯಿಂದ ಬಂದಿರತಕ್ಕಂಥ ಅಂಕಿಅಂಶಗಳನ್ನು ನಮ್ಮ ಮಾನ್ಯ ವ್ಯವಸಾಯ ಸಚಿವರಿಗೆ ಕೊಟ್ಟು ಅದಕ್ಕೆ ಇನ್‌ಷ್ಯೂರೆನ್ಸ್ ಆಗುವುದಕ್ಕೆ ಏರ್ಪಾಡು ಮಾಡಿಸುತ್ತೆವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಅಧ್ಯಕ್ಷರೆ, ಈ ಪೂರಕ ಬಜೆಟ್ ಮೇಲೆ ಮಾತನಾಡಲಿಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಸರ್ಕಾರ ಈಗಾಗಲೇ ನನ್ನ ವಿಧಾನಸಭಾ ಕ್ಷೇತ್ರವನ್ನು ಬರಗಾಲ ಪ್ರದೇಶ ಎಂದು ಘೋಷಣೆ ಮಾಡಿದೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರನ್ನು ಮತ್ತು ಮಾನ್ಯ ಕಂದಾಯ ಮಂತ್ರಿಗಳನ್ನು ಅಭಿನಂದಿಸಿ, ಬೆಳೆ ವಿಮೆ ಮಾಡಿಸುವುದಕ್ಕೆ ಕೇಂದ್ರ ಸರ್ಕಾರ ಅವಕಾಶ ಕಲ್ಪಿಸಿಕೊಟ್ಟಿದೆ. ಆದರೆ ಕೃಷಿ ಇಲಾಖೆಯ ಅಧಿಕಾರಿಗಳು, ಕಂದಾಯ ಇಲಾಖೆಯ ಅಧಿಕಾರಿಗಳು ಯಾವ ಒಂದು ಮಾನದಂಡದ ಮೇಲೆ ಅದನ್ನು ನಿಗದಿ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಮೊನ್ನೆ ನಮ್ಮ ಮಾನ್ಯ ಪಶುಸಂಗೋಪನಾ ಸಚಿವರು ಕಡೂರು ತಾಲ್ಲೂಕಿಗೆ ಬಂದಂಥ ಸಂದರ್ಭದಲ್ಲಿ ಅವರು ಕ್ಷೇತ್ರದ ಪರಿಸ್ಥಿತಿಯನ್ನು ಅಧ್ಯಯನ ಮಾಡಿದ್ದಾರೆ ಮತ್ತು ಪರಿಸ್ಥಿತಿಯನ್ನು ಕಣ್ಣಾರೆ ನೋಡಿದ್ದಾರೆ. ಮೂರು ತಾಲ್ಲೂಕುಗಳಲ್ಲಿ ಮಾತ್ರ ಸೂರ್ಯಕಾಂತಿ ಬೆಳೆಯನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದು, ಇನ್ನು ಮೂರು ತಾಲ್ಲೂಕುಗಳಿಗೆ ಅವಕಾಶ ಮಾಡಿಕೊಟ್ಟಿಲ್ಲ. ನಾನು ಉದಾಹರಣೆಗೆ ಹೇಳುವುದಾದರೆ, ಕಳೆದ ಐದು ವರ್ಷಗಳಿಂದ ಕಡೂರು ತಾಲ್ಲೂಕಿನ ಕೃಷಿ ಮಾರುಕಟ್ಟೆಗೆ ಎಷ್ಟು ಸೂರ್ಯಕಾಂತಿ ಬಂದಿದೆ, ರೈತರು ಅದನ್ನು ತಂದು ಕೃಷಿ ಮಾರಕುಕಟ್ಟೆಯಲ್ಲಿ ಎಷ್ಟು ಮಾರಿದ್ದಾರೆ ಎನ್ನುವ ಅಂಕಿಅಂಶ ತೆಗೆದುಕೊಂಡರೆ, ಕಡೂರು ತಾಲ್ಲೂಕಿನಲ್ಲಿ ಎಷ್ಟು ಸೂರ್ಯಕಾಂತಿಯನ್ನು ಬೆಳೆಯುತ್ತಾರೆ ಎನ್ನುವುದು ಗೊತ್ತಾಗುತ್ತದೆ. ಮಾನ್ಯ ಕಂದಾಯ ಸಚಿವರು ಮತ್ತು ಮಾನ್ಯ ಕೃಷಿ ಸಚಿವರು ಇಬ್ಬರೂ ಇಲ್ಲಿ ಗಮನಿಸಬೇಕು. ಕಡೂರು ತಾಲ್ಲೂಕಿನಲ್ಲಿ ಕಳೆದ ವರ್ಷ, ಅದರ ಹಿಂದಿನ ವರ್ಷ ಎಷ್ಟು ಸೂರ್ಯಕಾಂತಿ ಬೆಳೆ ಬಂದಿದೆ, ಎಷ್ಟು ಕೃಷಿ ಮಾರುಕಟ್ಟೆಯಲ್ಲಿ ಅದು ಮಾರಾಟವಾಗಿದೆ,-

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಶ್ರೀ ಕೃಷ್ಣಮೂರ್ತಿಯವರು ಯೀಲ್ಡ್ ಆಗುವುದಾದರೆ, 'ಗಮನಿಸುವುದು' ಎಂದು ಹೇಳಿದರೆ ಅದು ನನಗೆ ಅರ್ಥವಾಗಲಿಲ್ಲ. ಈಗ 'ಮಾನ್ಯ ಅಧ್ಯಕ್ಷರೇ' ಎಂದು ನಿಮ್ಮನ್ನು ನಾವು ಸಂಭೋಧಿಸುತ್ತೇವೆ. ನಾನು ಕೃಷ್ಣಮೂರ್ತಿಯವರಿಗೆ ಕೇಳುತ್ತೇನೆ, ಗಮನಿಸಬೇಕು ಎಂದು ಹೇಳಿದರೆ ಏನರ್ಥ? ಅಂದರೆ ತಮ್ಮ ಕಡೆಯೇ ನೋಡಬೇಕೆಂತಲೋ ನಾವು ಅಥವಾ ಕಿವಿ ಕೊಟ್ಟರೆ ಸಾಕು ಅವರಿಗೆ. ನಾವು ಕಿವಿ ಕೊಟ್ಟಿದ್ದೇವೆ ಅವರು ಹೇಳುವಂಥ ವಿಷಯಕ್ಕೆ.

ಶ್ರೀ ಎಂ. ಕೃಷ್ಣಮೂರ್ತಿ : ಬಹಳ ಧನ್ಯವಾದಗಳು. ನಮ್ಮ ಸಮಸ್ಯೆಗಳ ಬಗ್ಗೆ ಮಾನ್ಯ ಸಭಾನಾಯಕರು ಗಮನಿಸಿದಕ್ಕಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಕಡೂರು ತಾಲ್ಲೂಕನ್ನು ಬರಗಾಲ ಎಂದು ಘೋಷಿಸಿದ್ದಕ್ಕೆ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಬರಗಾಲದಲ್ಲಿ ಇನ್ನೊಂದು

ಅವಕಾಶವನ್ನು ತಾವು ರೈತರಿಗೆ ಕಲ್ಪಿಸಿಕೊಟ್ಟಿದ್ದೀರಿ. ಅದಕ್ಕೂ ಕೂಡ ನಾನು ಮಾನ್ಯ ಕಂದಾಯ ಸಚಿವರನ್ನು ಹಾಗೂ ಮಾನ್ಯ ಕೃಷಿ ಸಚಿವರನ್ನು ನಾನು ಅಭಿನಂದಿಸಬೇಕಾಗುತ್ತದೆ. ನನ್ನ ತಾಲ್ಲೂಕಿನ 3 ಹೋಬಳಿಗಳಲ್ಲಿ ಮಾತ್ರ ಸೂರ್ಯಕಾಂತಿ ಬೆಳೆಯುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಇನ್ನು ಮೂರು ಹೋಬಳಿಗಳಿಗೆ ಅವಕಾಶ ಮಾಡಿಕೊಟ್ಟಿಲ್ಲ. ನಾನು ಈಗಾಗಲೇ ಮಾನ್ಯ ಕೃಷಿ ಸಚಿವರಿಗೆ ಒಂದು ಲೆಟರ್‌ನ್ನು ಸಹ ಕೊಟ್ಟಿದ್ದು, ಅದನ್ನು ಅವರು ಒಪ್ಪಿಕೊಂಡಿದ್ದಾರೆ. ದಯವಿಟ್ಟು ಉಳಿದ ಮೂರು ಹೋಬಳಿಗಳಿಗೂ ಸಹ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಇನ್ನೊಂದು ಹಿರೆನಲ್ಲೂರು ಹೋಬಳಿಯಲ್ಲಿ ಹೆಚ್ಚುಕಡಿಮೆ 5 ಸಾವಿರ ಹೆಕ್ಟೇರ್‌ನಲ್ಲಿ ಈರುಳ್ಳಿಯನ್ನು ಬೆಳೆಯುತ್ತಾರೆ.

ಅಧ್ಯಕ್ಷರು : ಶ್ರೀ ಕೃಷ್ಣಮೂರ್ತಿಯವರೇ, ಡಿಮ್ಯಾಂಡ್ ನಂಬರ್ ಹೇಳಿ. ಬೇರೆ ಯಾವುದೋ ವಿಚಾರ ಮಾತನಾಡುತ್ತಿದ್ದೀರಿ. ಪರ್ಟಿಕ್ಯುಲರ್ ಸಬ್ಜೆಕ್ಟ್‌ಗೆ ಸಂಬಂಧಿಸಿದಂತೆ ಡಿಮ್ಯಾಂಡ್ ನಂಬರ್ ಹೇಳಿ ಮಾತನಾಡಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿರುವುದರಿಂದ ಡಿಮ್ಯಾಂಡ್ ಯಾವುದಾದರೂ ಒಂದರ ಮೇಲೆ ಮಾತನಾಡಬಹುದಲ್ಲವೇ?

ಅಧ್ಯಕ್ಷರು : ಇಂಥ ಡಿಮ್ಯಾಂಡ್ ಮೇಲೆ ಮಾತನಾಡುತ್ತೇನೆಂದು ಹೇಳಿ ಮಾತನಾಡಬೇಕಷ್ಟೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಆದ್ದರಿಂದ ಮಾನ್ಯ ಕೃಷಿ ಸಚಿವರು, ಮಾನ್ಯ ಕಂದಾಯ ಸಚಿವರು ಸೂರ್ಯಕಾಂತಿ ಬೆಳೆಯುವುದಕ್ಕೆ ಉಳಿದ ಮೂರು ಹೋಬಳಿಗಳ ರೈತರಿಗೆ ಅವಕಾಶ ಮಾಡಿಕೊಡಬೇಕು ಮತ್ತು ಸಣ್ಣ ನೀರಾವರಿಯಲ್ಲಿ ಕಳೆದ ವರ್ಷ ನನ್ನ ಕ್ಷೇತ್ರದಲ್ಲಿ ಯಾವುದೇ ಒಂದು ಕಾಮಗಾರಿಯನ್ನು ಸೇರಿಸಿಲ್ಲ. ಈ ವರ್ಷ ನಾವು ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳನ್ನು ಕೇಳಿದರೆ, ಕಳೆದ ವರ್ಷಕ್ಕಿಂತ 50 ಪರ್ಸೆಂಟ್, 40 ಪರ್ಸೆಂಟ್ ಹಣವನ್ನು ಕಡಿಮೆ ಇಟ್ಟಿದ್ದೇವೆಂದು ಹೇಳುತ್ತಾರೆ. ಆದ್ದರಿಂದ ಮಾನ್ಯ ನೀರಾವರಿ ಸಚಿವರು ಅದನ್ನು ಗಮನಿಸಿ, ಕಳೆದ ವರ್ಷ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ, ಸಾವಿರಾರು ಕೆರೆಗಳ ಹೂಳನ್ನು ತೆಗೆಯುವುದರ ಮುಖಾಂತರ ರೈತರ ಬೆಳೆಗೆ ನೀರಾವರಿಯ ಅನುಕೂಲವನ್ನು ಮಾಡಿಕೊಡುತ್ತೇವೆಂದು ಹೇಳಿದರು. ಅದನ್ನು ಇಲ್ಲಿಯವರೆಗೆ ಮಾಡಿಲಿಲ್ಲ. ಆದ್ದರಿಂದ ಈ ವರ್ಷವಾದರೂ ಪೂರಕ ಬಜೆಟ್‌ನಲ್ಲಿ ಅದನ್ನು ಸೇರಿಸಿಕೊಂಡು ಕೆರೆಗಳನ್ನು ಜೀರ್ಣೋದ್ಧಾರ ಮಾಡಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಿಗೆ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

6.10 ಪಿಎಂ

ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೆ, ರೈತರ ಬೆಳೆಯ ವಿಮೆಗೆ ಪೂರಕ ಅಂದಾಜಿನಲ್ಲಿ ಹೆಚ್ಚಿನ ಹಣವನ್ನು ಒದಗಿಸಿಕರುವುದಕ್ಕೆ ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಸರ್ಕಾರ ರೈತರ ಸಹಾಯಕ್ಕಾಗಿ ಬರಬೇಕು ಎನ್ನುವ ಉದ್ದೇಶವಿದ್ದರೂ ಕೂಡ ಅಧಿಕಾರಿ ವರ್ಗದಲ್ಲಿ ರೈತರ ಬಗ್ಗೆ ಗಮನಹರಿಸುತ್ತಿಲ್ಲ, ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದೇ ಇರುವುದರಿಂದ ರೈತರು ಸರ್ಕಾರದಿಂದ ಸಿಗುವ ಸೌಲಭ್ಯಗಳಿಂದ ಸಂಪೂರ್ಣವಾಗಿ ವಂಚಿತರಾಗುತ್ತಿದ್ದಾರೆ. ನಾನು ಈಗಾಗಲೇ ಮಾನ್ಯ ಕೃಷಿ ಸಚಿವರಾದ

ಕೌಜಲಗಿಯವರಿಗೆ ಹೇಳಿದ್ದೇನೆ. ಇಡೀ ಹಾವೇರಿ ಜಿಲ್ಲೆಯಲ್ಲಿ ಹಿರೇಕೆರೂರು ತಾಲ್ಲೂಕಿನಲ್ಲಿ ನೂರಕ್ಕೆ ಎಪ್ಪತ್ತರಷ್ಟು ಮೆಕ್ಕೇ ಜೋಳ, ಗೋವಿನ ಜೋಳವನ್ನು ಬೆಳೆಯುತ್ತಿದ್ದಾರೆ. ಬೇರೆ ತಾಲ್ಲೂಕುಗಳಲ್ಲಿ ಮೆಕ್ಕೆ ಜೋಳಕ್ಕೆ ಬೆಳೆ ವಿಮೆ ಇದೆ. ಹಿರೇಕೆರೂರು ತಾಲ್ಲೂಕಿನಲ್ಲಿ ಅತಿ ಹೆಚ್ಚು ಗೋವಿನ ಜೋಳ ಬೆಳೆಯುತ್ತಿದ್ದರೂ ಸಹ ಅಲ್ಲಿ ಈ ಬೆಳೆ ವಿಮೆಯನ್ನು ಅಳವಡಿಸಿಲ್ಲ. ಈ ವಿಷಯವನ್ನು ನಾನು ಮಾನ್ಯ ಕೃಷಿ ಸಚಿವರ ಗಮನಕ್ಕೆ ತಂದ್ದಿದೇನೆ ಹಾಗೂ ಇದನ್ನು ಸರಿಪಡಿಸಿ ಎಂದು ಹೇಳಿದ್ದೇನೆ. ಮಾನ್ಯ ಸಚಿವರು ಸಂಬಂಧಪಟ್ಟ ಇಲಾಖೆಯಿಂದ ಇದನ್ನು ಸರಿಪಡಿಸಲು ಮಾಹಿತಿ ತರಿಸಬೇಕೆಂದು ಹೇಳಬಯಸುತ್ತೇನೆ. ಈ ಬಗ್ಗೆ ವಿಚಾರ ಮಾಡಿ ನೋಡಿದರೆ, ಪ್ರತಿ ತಾಲ್ಲೂಕಿನಲ್ಲೂ, ಜಿಲ್ಲೆಯಲ್ಲೂ ಹಾಗೂ ರಾಜ್ಯ ಮಟ್ಟದಲ್ಲೂ ಅಂಕಿಸಂಖ್ಯೆಗಳ ಅಧಿಕಾರಿಗಳು ಇದ್ದಾರೆ, ಎಷ್ಟು ಸರಳವಾಗಿ ಅವರು ಬರೆದಿದ್ದಾರೆ ಎಂದರೆ, ಈ ಬೆಳೆಯ ಬಗ್ಗೆ ನಮ್ಮಲ್ಲಿ ಮಾಹಿತಿ ಇಲ್ಲ ಎಂದು ಹಾಗಾದರೆ ಸರ್ಕಾರ ಇವರಿಗೆ ಸಂಬಳ ಕೊಟ್ಟು, ತಾಲ್ಲೂಕು, ಜಿಲ್ಲೆ, ವಿಭಾಗೀಯ ಹಾಗೂ ರಾಜ್ಯ ಮಟ್ಟದಲ್ಲಿ ಒಂದು ಇಲಾಖೆಯನ್ನು ಇಟ್ಟು, ಸರ್ಕಾರ ಬೆಳೆಯ ವಿಮೆ ಸೌಲಭ್ಯವನ್ನು ಎಲ್ಲಾ ರೈತರಿಗೆ ಕೊಡಬೇಕು ಎನ್ನುವ ಉದ್ದೇಶ ಹೊಂದಿದ್ದರೂ, ಅಧಿಕಾರಿಗಳ ಕರ್ತವ್ಯ ಲೋಪದಿಂದಾಗಿ, ಇವತ್ತು ರೈತರು ಈ ಬೆಳೆ ವಿಮೆ ಯೋಜನೆಯಿಂದ ಸಂಪೂರ್ಣವಾಗಿ ವಂಚಿತರಾಗುತ್ತಿದ್ದಾರೆ. ಆದಕ್ಕೆ ಮಾನ್ಯ ಕೃಷಿ ಸಚಿವರು ಹಾಗೂ ಮಾನ್ಯ ಅಂಕಿಸಂಖ್ಯೆ ಯೋಜನಾ ಇಲಾಖೆಯ ಸಚಿವರು, ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಗಮನಹರಿಸಿ, ಈ ಇಲಾಖೆಯಲ್ಲಿರುವಂಥ ಲೋಪದೋಷಗಳನ್ನು ಸರಿಪಡಿಸಬೇಕು; ಅನೇಕ ಮಾನ್ಯ ಸದಸ್ಯರು ಇದರ ಬಗ್ಗೆ ಮಾತನಾಡಿದ್ದಾರೆ, ಆ ಇಲಾಖೆಯಲ್ಲಿ ಅಂಕಿಸಂಖ್ಯೆಗಳೇ ಇಲ್ಲವೆಂದರೆ ಹೇಗೆ? ಹಾಗಾದರೆ ಆ ಇಲಾಖೆಯಾದರೂ ಏಕೆ ಬೇಕು? ಅದಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳು ಯಾರು ಕರ್ತವ್ಯ ಲೋಪ ಮಾಡಿದ್ದಾರೆ, ಅವರ ಮೇಲೆ ಕೂಡಲೇ ಸರ್ಕಾರ ಕ್ರಮ ಕೈಗೊಂಡು, ರೈತರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು, ಹಿರೇಕೆರೂರು ತಾಲ್ಲೂಕಿನಲ್ಲಿ ನೂರಕ್ಕೆ ಎಂಬತ್ತರಷ್ಟು ಮೆಕ್ಕೇಜೋಳವನ್ನು ಬೆಳೆಯಲಾಗುತ್ತಿದ್ದು 15ನೇ ತಾರೀಖಿನೊಳಗೆ ನಾವು ವಿಮೆಯ ಹಣವನ್ನು ತುಂಬಬೇಕು, ಮಳೆ ಇಲ್ಲ, ಬೆಳೆ ಎಲ್ಲಾ ನಾಶವಾಗಿದೆ, ಇಂಥ ಸಂದರ್ಭದಲ್ಲಿ ಪಕ್ಕದ ತಾಲ್ಲೂಕುಗಳಲ್ಲಿ ಎಲ್ಲಿ ಕಡಿಮೆ ಗೋವಿನ ಜೋಳ ಬೆಳೆಯುತ್ತಾರೆ ಅಲ್ಲಿಗೆ ವಿಮೆ ಯೋಜನೆಯನ್ನು ಕೊಟ್ಟು, ಹಿರೇಕೆರೂರು ತಾಲ್ಲೂಕಿಗೆ ಈ ಯೋಜನೆ ಕೊಡದೇ ಹೋದರೆ ಅಲ್ಲಿನ ಪ್ರತಿನಿಧಿಯಾದ ನಾನು ರೈತರಿಗೆ ಏನು ಹೇಳಬೇಕು ಸ್ವಾಮಿ? ಅದಕ್ಕಾಗಿ ದಯಮಾಡಿ ಈ ಅನ್ಯಾಯವನ್ನು ಸರಿಪಡಿಸಬೇಕೆಂದು ಮಾನ್ಯ ಕೃಷಿ ಹಾಗೂ ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಆಯಿತು. ಮಾನ್ಯ ಹನುಮೇಗೌಡರೇ, ನೀವು ಮಾತನಾಡಿ, ನಂತರ ಮಾನ್ಯ ಯೋಗೀಶ್ ಭಟ್ ಲಾಸ್ಟ್ ..... ನೋಡ್ರಿ ಎಲ್ಲರೂ ಕೈ ಎತ್ತಿದರೆ ಹೇಗೆ? ನಾನು ಮೊದಲೇ ಹೇಳಿದೆ, ನೀವು ಚೀಟಿ ಬರೆದು ಕಳುಹಿಸಿದರೆ ನಾನು ಅವಕಾಶ ಕೊಡುತ್ತೇನೆ ಎಂದು. ನಿಮ್ಮ ನಿಮ್ಮ ಅನುಕೂಲ ನೋಡಿಕೊಂಡು ಆಚೆ ಹೋಗುವುದು ಬರುವುದು, ಹೀಗೆ ಮಾಡಿದರೆ ಹೇಗೆ? ಮಾತನಾಡಬೇಕೆಂದಿರುವವರು ಇಲ್ಲಿಯೇ ಇರಬೇಕಾಗುತ್ತದೆ. ಮಾನ್ಯ ಹನಮೇಗೌಡರೇ ತಾವು ಮಾತನಾಡಿ..

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಅಧ್ಯಕ್ಷರೆ, ರಾಜ್ಯದ ಬಜೆಟ್‌ನಲ್ಲಿ ಮತ್ತು ಪೂರಕ ಬಜೆಟ್ ನಲ್ಲಿ ಗ್ರಾಮೀಣ ಪ್ರದೇಶಗಳಲ್ಲಿರುವ ಜೀವನಾಡಿಗಳು, ಹಳ್ಳಿಯ ಜೀವನಾಡಿಗಳು ಎಂದರೆ ಚಿಕ್ಕಪುಟ್ಟ ಕೆರೆಗಳು. ಆ ಕೆರೆಗಳ ರೆಸ್ಟೋರೇಷನ್, ಕನ್‌ಸ್ಟ್ರಕ್ಷನ್ ರಿಪೇರಿಗಾಗಿ, ಹಣ ಬಹಳ ಕಡಿಮೆ ಇಟ್ಟಿದ್ದಾರೆ. ಇದನ್ನು ಮುತುವರ್ಜಿ ವಹಿಸಿ ಸರಿಪಡಿಸದೇ ಹೋದರೆ ಗ್ರಾಮಾಂತರ ಪ್ರದೇಶದ ಜನರಿಗೆ ಕುಡಿಯುವ ನೀರಿನ ತೊಂದರೆ ಬರುತ್ತದೆ. ವಾಟರ್ ಟೇಬಲ್ ತೀರಾ ಕೆಳಗೆ ಹೋಗಿ ಎಲ್ಲಾ ಬಾವಿಗಳು ಬತ್ತಿ ಹೋಗುತ್ತವೆ, ಬ್ಯಾಂಕಿನಲ್ಲಿ ಪಡೆದಿರುವ ಸಾಲಗಳನ್ನು ತೀರಿಸುವ ಶಕ್ತಿಯನ್ನು ರೈತರು ಕಳೆದುಕೊಳ್ಳುತ್ತಾರೆ. ಪ್ರತಿಯೊಂದು ಕೆರೆಗಳ ಸುತ್ತಮುತ್ತ ಮರಗಿಡಗಳು ಸಮೃದ್ಧಿಯಾಗಿ ಬೆಳೆಯುತ್ತವೆ, ಹಾಗೆ ಬೆಳೆಯುವುದರಿಂದ ಗ್ರಾಮಾಂತರ ಪ್ರದೇಶದ ಹಳ್ಳಿಯ ರೈತರು ತಮ್ಮ ಮನೆಗಳನ್ನು ಕಟ್ಟಿಕೊಳ್ಳಲು ಟಿಂಬರ್ ವ್ಯವಸ್ಥೆಯಾಗುತ್ತದೆ, ಹಕ್ಕಿಪಕ್ಷಿಗಳಿಗೆ ಹಣ್ಣು ಸಿಕ್ಕಿ, ರೈತರ ಹೊಲಗದ್ದೆಗಳಲ್ಲಿ ಬೀಳತಕ್ಕಂಥ ರೋಗರುಜಿನಗಳಿಗೆ ಅದು ತಡೆಯಾಗುತ್ತದೆ, ಗ್ರಾಮೀಣ ಭಾಗದಲ್ಲಿ ಈಗ ಕಾಂಪೋಸ್ಟ್ ಗೊಬ್ಬರ ಬಹಳ ಕಡಿಮೆಯಾಗಿದೆ. ಕಾರಣ ಏನೆಂದರೆ, ಒಲೆಗೆ ಉರುವಲು ಆಗಿ ಸಗಣಿಯನ್ನು ಉಪಯೋಗಿಸುತ್ತಾರೆ, ಮರಗಿಡಗಳು ಜಾಸ್ತಿ ಬೆಳೆಯುವುದರಿಂದ ಸೌಧೆಯನ್ನು ಉಪಯೋಗಿಸಿ, ಬಹಳ ಶ್ರೇಷ್ಠವಾದ ದನಗಳ ಸಗಣಿ ಗೊಬ್ಬರವನ್ನು ತೋಟಗಳಿಗೆ, ಹೊಲ, ಗದ್ದೆಗಳಿಗೆ ಉಪಯೋಗಿಸಲು ಅನುಕೂಲವಾಗುತ್ತದೆ, ಇಷ್ಟು ಉಪಯುಕ್ತವಾಗುವ ಈ ಕೆರೆಗಳ ಬಗ್ಗೆ ಸರ್ಕಾರ ನಿರ್ಲಕ್ಷ್ಯ ಮಾಡಿ ಗ್ರಾಮೀಣ ಭಾಗದಲ್ಲಿರುವ ರೈತರ ಬವಣೆಗೆ ಕಾರಣವಾಗಿದೆ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ತಾವು ಹಿಂದೆ ತಾಲ್ಲೂಕು ಬೋರ್ಡಿನ ಅಧ್ಯಕ್ಷರಾಗಿದ್ದಿರೆಂದು ಕಾಣುತ್ತದೆ. ನಾನೂ ಕೂಡ ಆಗಿದ್ದೆ, ಹಿಂದೆ ಯಾವ ಊರಿಗೆ ಹೋಗಿ ನೋಡಿದರೆ, 15-20 ಅಡಿ ಆಳಕ್ಕೆ ಬಾವಿ ತೆಗೆದರೆ ನೀರು ಬರುತ್ತಿತ್ತು, ಸೇದುವ ಬಾವಿಯಲ್ಲಿ ಸೊಗಸಾದ ನೀರು ಬರುವುದು, ಇದರಿಂದಾಗಿ ಜನರು ನೆಮ್ಮದಿಯಿಂದ ಇದ್ದರು. ಈಗ 100-150-200 ಅಡಿಗಳಷ್ಟು ಆಳಕ್ಕೆ ಹೋದರೂ ಕೂಡ ನೀರು ಸಿಗುತ್ತಿಲ್ಲ, ಕಾರಣ ಏನೆಂದರೆ, ಗ್ರಾಮೀಣ ಭಾಗದಲ್ಲಿದ್ದಂಥ ಕೆರೆಕಟ್ಟೆಗಳೆಲ್ಲವೂ ಸಿಲ್ಟ್ ತುಂಬಿ ನೀರು ನಿಲ್ಲದೇ ಈಗ ದೊಡ್ಡ ಅವಾಂತರಕ್ಕೆ ಕಾರಣವಾಗಿದೆ ಎನ್ನುವ ಮಾತನ್ನು ನಾನು ತಿಳಿಸಬಯಸುತ್ತೇನೆ. ಯಾವ ಕಾರಣಕ್ಕೆ ಈ ಕೆರೆಗಳ ರೆಸ್ಟೋರೇಷನ್‌ಗೆ ಹಣವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡದೇ ಇರುವುದು ಹಳ್ಳಿಗಳ ದೃಷ್ಟಿಯಿಂದ ಇದು ಬಹಳ ದುರಾದೃಷ್ಟಕರವಾದುದು ಎಂದು ನಾನು ಹೇಳಬಯಸುತ್ತೇನೆ. ಕೆರೆಯಲ್ಲಿ ನೀರು ಇದ್ದರೆ ಬೆಂಗಾಡು ಪ್ರದೇಶದಲ್ಲಿ ಒಂದೊಂದು ಕೆರೆ ಇದ್ದರೆ, ಯಾವೊತ್ತೋ ಒಂದು ದಿವಸ ಒಂದಿಂಚು ಎರಡು ಇಂಚು ಮಳೆಯಾಗುತ್ತದೆ, ಆ ಕೆರೆ ತುಂಬಿಕೊಳ್ಳುತ್ತದೆ, ಪುನಃ ಒಂದೆರಡು ತಿಂಗಳು ಮಳೆ ಹೋದರೆ ಆಗ ಆ ಕೆರೆಯ ಹಿಂಭಾಗದಲ್ಲಿರುವ ಒಣಗಿ ನಿಂತಿರುವ ಪೈರಿಗೆ ಆ ನೀರನ್ನು ಬಿಟ್ಟುಕೊಳ್ಳಲು ಅನುಕೂಲವಾಗುತ್ತದೆ. ಅದರ ಜೊತೆಗೆ ಬೇಸಿಗೆ ಕಾಲದಲ್ಲಿ ಹೆಂಗಸರು, ಮಕ್ಕಳು ಬಟ್ಟೆಯನ್ನು ಎಲ್ಲಿ ಒಗೆಯಬೇಕು? ದಯವಿಟ್ಟು ತಾವು ಈ ಬಗ್ಗೆ ಆಲೋಚನೆ ಮಾಡಿ, ಟೌನ್‌ನಲ್ಲಿ ಇದೆ, ಬಟ್ಟೆ ಒಗೆದುಕೊಳ್ಳುತ್ತಾರೆ, ಹೇಗೋ ಮಾಡುತ್ತಾರೆ, ಆದರೆ ಹಳ್ಳಿಯ ಜನ ಬಟ್ಟೆ ಒಗೆಯಲು ಅದೇ ನೀರು, ದನ ಕರುಗಳು ನೀರು ಕುಡಿಯಬೇಕೆಂದರೂ ಅದೇ ನೀರು, ಇವತ್ತು ಇವುಗಳಿಗೂ ನೀರು ಇಲ್ಲದೇ ದೊಡ್ಡ ಅಭಾವ ಉಂಟಾಗಿದೆ. ಇದಕ್ಕೇನು ಕಾರಣ ಎಂದರೆ, ಆ ಕೆರೆಗಳೆಲ್ಲವೂ ಮುಚ್ಚಿಹೋಗಿರುವುದರಿಂದ ಆ ಕೆರೆಗಳಲ್ಲಿ ನೀರು ಇಲ್ಲ. ಹೀಗೆ ನಾನಾ ರೂಪದಲ್ಲಿ ಗ್ರಾಮೀಣ

ಭಾಗದಲ್ಲಿರುವ ಸಣ್ಣಪುಟ್ಟ ಕೆರೆಗಳು ನಿಜವಾಗಿಯೂ ಕೂಡ ಗ್ರಾಮದ ರೈತರ ಜೀವನಾಡಿಗಳೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈಗ ಇದಕ್ಕಾಗಿ ಕೊಟ್ಟಿರುವ ಹಣ ಯಾವುದಕ್ಕೂ ಸಾಲದು, ಆದ್ದರಿಂದ ಹೆಚ್ಚು ಹಣ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಈ ಕೆರೆಗಳ ರಿಪೇರಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕೆನ್ನುವ ಮಾತನ್ನು ಹೇಳುತ್ತಾ ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತೊಮ್ಮೆ ನಾನು ಮನವಿ ಮಾಡಿಕೊಳ್ಳುತ್ತೇನೆ.

ಮತ್ತೊಂದು ವಿಚಾರ ಹೇಳುವುದಾದರೆ, ಹಾಸನ ಟೌನ್‌ನಲ್ಲಿ ಒಳಚರಂಡಿ ಇದೆ, ಕಕ್ಕಸ್‌ಗಳು ಇವೆ, ಆ ನೀರು ಎಲ್ಲಾ ಸೀದಾ ಹರಿದು ಹಾಸನದ ಪಕ್ಕದಲ್ಲಿರುವ ಮಾಕನಕಟ್ಟೆ ಎನ್ನುಖ ಕೆರೆಗೆ ಬರುತ್ತದೆ. ಆ ನೀರು ವರ್ಷವೆಲ್ಲಾ ಕೋಡಿ ಬಿದ್ದು ಪಕ್ಕದಲ್ಲಿರುವ ಯಗಚಿ ನದಿಗೆ ಹೋಗುತ್ತದೆ, ಅಲ್ಲಿಂದ ಒಂದು ಸಣ್ಣ ಡ್ಯಾಂ ಕಟ್ಟಿ ಆ ನೀರನ್ನು ಟೌನ್‌ನ ಅರ್ಧ ಭಾಗಕ್ಕೆ ಸರಬರಾಜು ಮಾಡುತ್ತಾರೆ. ಈ ರೀತಿಯ ಅಶುದ್ಧವಾದ ನೀರನ್ನು ಅಲ್ಲಿಗೆ ಸರಬರಾಜು ಮಾಡುತ್ತಿದ್ದಾರೆ. ಹೋದ ಸಾರಿ ಕಾಂಗ್ರೆಸ್ ಸರ್ಕಾರ ಇದ್ದಾಗ ಮಾನ್ಯ ಮುಖ್ಯಮಂತ್ರಿಗಳು ಇರಿಗೇಷನ್ ಮಂತ್ರಿಗಳೂ ಸಹ ಆಗಿದ್ದರು, ಆಗ ನಾನು ಅವರ ಗಮನಕ್ಕೆ ತಂದು, ಅಶುದ್ಧವಾದ ನೀರನ್ನು ಹೊಳೆಗೆ ಬಿಡಬಾರದು, ಅದನ್ನು ಏತ ನೀರಾವರಿಯ ಮೂಲಕ ಹೊರಗಡೆ ರೈತರ ಜಮೀನಿಗೆ ಕೊಟ್ಟರೆ, ಬೆಂಗಾಡು ಪ್ರದೇಶದ ಸುಮಾರು ಸಾವಿರದ ಇನ್ನೂರು ಎಕರೆ ಪ್ರದೇಶಕ್ಕೆ ನೀರು ಒದಗುತ್ತದೆ, ಅದರ ಜೊತೆಗೆ ಕುಡಿಯುವ ನೀರಿಗೆ ಈ ಅಶುದ್ಧವಾದ ನೀರು ತಪ್ಪುತ್ತದೆ, ಇದರಿಂದಾಗಿ ಜನಗಳ ಆರೋಗ್ಯ ಚೆನ್ನಾಗಿರುತ್ತದೆಂದು ಹೇಳಿದ ಮೇಲೆ, ಅದು ಅಂದಾಜು ಆಗಿ ಮಂಜೂರಾತಿ ಆಗಿ, ಬಜೆಟ್‌ಗೆ ಸೇರಿತು, ನಂತರ ನಾನು ಸೋತನಂತರ ನಮ್ಮ ಸರ್ಕಾರ ಹೋಯಿತು, ಅಲ್ಲಿಗೆ ಅದರ ಕಥೆಯೂ ಮುಗಿಯಿತು. ಪುನಃ ಈಗ ಅದನ್ನು ಬಜೆಟ್‌ಗೆ ಸೇರಿಸಿ ಆಗಿದೆ, ಆ ಕೆಲಸ ಪ್ರಾರಂಭವಾಗದೇ ಹೋದರೆ ಬಹಳ ಕಷ್ಟವಾಗುತ್ತದೆ. ಈಗ ಮಳೆ ಇಲ್ಲ, ಆ ಪ್ರದೇಶದಲ್ಲಿದ್ದಂಥ ಸುಮಾರು ಸಾವಿರದ ಇನ್ನೂರು ಎಕರೆಯಲ್ಲಿ ಬೆಳೆದ ಆಲೂಗೆಡ್ಡೆ ಸರ್ವನಾಶವಾಗಿ ಹೋಯಿತು. ಈ ನೀರನ್ನು ಅಲ್ಲಿಗೆ ಕೊಟ್ಟಿದ್ದರೆ ರೈತರು ಉಳಿದುಕೊಳ್ಳುತ್ತಿದ್ದರು; ನಂತರ ಬಡವರು ಇರುವ ಒಂದು ಭಾಗಕ್ಕೆ ವಾಟರ್ ಸಪ್ಲೈ ಕೊಡುತ್ತಿದ್ದಾರೆ. ಒಣಗಿ ಹೋಗುತ್ತಿರುವ ಪೈರ್‌ಗಳಿಗೆ ಈ ನೀರನ್ನು ಒದಗಿಸಿದರೆ ಸಾಕಷ್ಟು ಅನುಕೂಲವಾಗುತ್ತಿತ್ತು. ಈ ನೀರನ್ನು ಟೌನ್‌ಗೆ ಸಪ್ಲೈ ಮಾಡುತ್ತಿರುವುದನ್ನು ಯಾರಾದರೂ ನೋಡಿದರೆ ನಮ್ಮನ್ನು ಏನೆನ್ನುತ್ತಾರೆ ಎಂದು 8-10 ದಿವಸಗಳ ಹಿಂದೆ ಡೆಪ್ಯುಟಿ ಕಮೀಷನರ್‌ರವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಕೇಳಿದೆ. ಅವರು ಬಹಳ ನೊಂದುಕೊಂಡು, ಈ ಕೊಳಚೆ ನೀರನ್ನು ಹೊಳೆಗೆ ಬಿಡುವುದಕ್ಕೆ ಅವಕಾಶವನ್ನು ಕೊಡದೇ, ಈ ಕೆರೆಯಿಂದಲೇ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಸರ್ಕಾರಕ್ಕೆ ನಾನು ಶಿಫಾರಸ್ಸು ಮಾಡುತ್ತೇನೆ ಎಂದು ಹೇಳಿದರು. ಹಾಸನ ಪಟ್ಟಣದ ಬಡ ಜನತೆಯ ಹಿತದೃಷ್ಟಿಯಿಂದ ಕೆರೆಗೆ ಹೋಗತಕ್ಕಂಥ ಸ್ಯೂಯೇಜ್ ನೀರನ್ನು ಲಿಫ್ಟ್ ಇರಿಗೇಷನ್ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಸಂದನದಲ್ಲಿರತಕ್ಕಂಥ ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೈ ಜೋಡಿಸಿ ಕೇಳಿಕೊಳ್ಳುತ್ತೇನೆ. ಹಾಗೆಯೇ ಈ ನೀರು ಕೆರೆ ಮುಖಾಂತರ ಯಗಚಿ ನದಿಗೆ ಸೇರದಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಯವರು ಇದನ್ನು ಮಾಡಿಕೊಡುತ್ತಾರೆ ಎನ್ನತಕ್ಕಂಥ ನಂಬಿಕೆ ಇಟ್ಟುಕೊಂಡು ಅವರಿಗೆ ಇನ್-ಅಡ್ವಾನ್ಸ್ ಆಗಿ ಥ್ಯಾಂಕ್ಸ್ ಹೇಳುತ್ತಾ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೂ ಥ್ಯಾಂಕ್ಸ್ ಹೇಳಿ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಅಧ್ಯಕ್ಷರೆ, ನಾನು 58ನೇ ಬೇಡಿಕೆ ಮೇಲೆ ಮಾತನಾಡುವುದಕ್ಕೆ ಬಯಸುತ್ತೇನೆ. ಜೈವಿಕ ತಂತ್ರಜ್ಞಾನ, ಉತ್ತೇಜನ ಮತ್ತು ಅಭಿವೃದ್ಧಿಗಾಗಿ ವಿಶೇಷವಾಗಿ 100 ಲಕ್ಷ ರೂಪಾಯಿಗಳನ್ನು ಪೂರಕ ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿಕೊಂಡಿದ್ದೀರಿ. ಮಾನ್ಯ ಮುಖ್ಯಮಂತ್ರಿಯವರು ಇಲ್ಲಿರುವುದರಿಂದ ಅವರ ಗಮನಕ್ಕೆ ತರುವುದೇನೆಂದರೆ, ತಾವು ಜೈವಿಕ ತಂತ್ರಜ್ಞಾನದ ಅಭಿವೃದ್ಧಿಯ ಜೊತೆಗೆ ವೃತ್ತವಲಯದ ಬಗ್ಗೆಯೂ ಕೂಡ ಬಹಳ ಕಡೆ ಹೇಳಿದ್ದೀರಿ. ಅದನ್ನು ನಾವೂ ಸಹ ಸ್ವಾಗತ ಮಾಡುತ್ತೇವೆ. ಆದರೆ, ಇದಕ್ಕಾಗಿ ಕೇವಲ 100 ಲಕ್ಷ ರೂಪಾಯಿಗಳನ್ನು ಇಟ್ಟಿರತಕ್ಕಂಥಾದ್ದು ಸಾಕಾಗುವುದಿಲ್ಲವೆಂದು ನನ್ನ ಅನಿಸಿಕೆಯಾಗಿದೆ. ಈಗ ಹೊಸ ಹೊಸ ತಳಿಗಳನ್ನು ನಾವು ರೀಸರ್ಚ್ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚು ಬಜೆಟ್‌ನ್ನು ಒದಗಿಸಬೇಕೆಂದು ಈ ಸಂದರ್ಭದಲ್ಲಿ ನಾನು ಅವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ತಾವು ಕೊಪ್ಪಳ ಜಿಲ್ಲೆಗೆ ಬಂದಾಗ, ಹಿರೇಹಳ್ಳ ಎಂಬ ಪ್ರಾಜೆಕ್ಟ್‌ನ್ನು ಉದ್ಘಾಟನೆ ಮಾಡತಕ್ಕಂಥ ಸಂದರ್ಭದಲ್ಲಿ ಇದನ್ನು ಪೂರ್ಣ ಮಾಡಿದ ನಂತರ, ಹಿಂದುಳಿದ ಜಿಲ್ಲೆಯ ವಿಶೇಷವಾದ ಪ್ಯಾಕೇಜ್ ಯೋಜನೆಯನ್ನು ಅನೌನ್ಸ್ ಮಾಡುತ್ತೇವೆಂದು ತಾವು ಆ ಸಂದರ್ಭದಲ್ಲಿ ಭರವಸೆಯನ್ನು ಕೊಟ್ಟಿದ್ದಿರಿ. ಡಿಮ್ಯಾಂಡ್-3ರಲ್ಲಿ ಬಳ್ಳಾರಿ ಜಿಲ್ಲೆಯನ್ನು ವಿಶೇಷ ಪ್ಯಾಕೇಜ್ ಯೋಜನೆಯಲ್ಲಿ ತೆಗೆದುಕೊಂಡಿದ್ದೀರಿ. ಕೊಪ್ಪಳ ಹೊಸ ಜಿಲ್ಲೆಯಾಗಿರುವುದರಿಂದ ಇದನ್ನು ಅಭಿವೃದ್ಧಿಪಡಿಸುವುದಕ್ಕೆ ತಾವು ಮುಂದಾಗುತ್ತೀರಾ ಎನ್ನತಕ್ಕಂಥಾದ್ದನ್ನು ಮತ್ತು ಈ ಒಂದು ಪೂರಕ ಬಜೆಟ್‌ನಲ್ಲಿ ಇದಕ್ಕಾಗಿ ಏನಾದರೂ ವಿಶೇಷ ಪ್ಯಾಕೇಜ್‌ಗೆ ಒತ್ತನ್ನು ಕೊಡುತ್ತೀರಾ ಎನ್ನುವುದನ್ನೂ ಕೂಡ ತಿಳಿಸಬೇಕೆಂದು ಈ ಸಂದರ್ಭದಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಹಾಗೆಯೇ ಈ ಸಣ್ಣ ನೀರಾವರಿ ಬಗ್ಗೆ ಈಗಾಗಲೇ ಬಹಳಷ್ಟು ಜನರು ಮಾತನಾಡಿದ್ದಾರೆ. ಇವತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಸದರಿ ಖಾತೆಯನ್ನು ವಹಿಸಿಕೊಂಡಿದ್ದಾರೆ. ಕಳೆದ ಮೂರು ವರ್ಷಗಳಿಂದ ಸಣ್ಣ ನೀರಾವರಿ ಇಲಾಖೆಯಲ್ಲಿ ಏನೂ ಕೆಲಸವಾಗಿಲ್ಲ. ಈಗ ತಾವು ಪೂರಕ ಬಜೆಟ್ ನಲ್ಲಿ ಇಟ್ಟಿರತಕ್ಕಂಥಾದದ್ದು ಬಹಳ ಕಡಿಮೆ ಇದೆ. ಇವತ್ತಿನದಿವಸ ತ್ವರಿತವಾಗಿ ನೀರಾವರಿ ಆಗುವ ಉದ್ದೇಶದಿಂದ ಇದಕ್ಕೆ ಹೆಚ್ಚು ಅನುದಾನವನ್ನು ಕ್ರೋಢೀಕರಿಸಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈಗಾಗಲೇ ಮಾನ್ಯ ಶಿವಾನಂದ ಪಾಟೀಲ್‌ರವರು ರಫ್ತು ವಲಯದ ಬಗ್ಗೆ ಬಹಳ ಚಾರ್ಜ್ ಮಾಡಿ ಮಾತನಾಡಿದರು. ಎಲ್ಲೆಲ್ಲಿ ಹಾರ್ಟಿಕಲ್ಚರ್ ಕ್ರಾಪ್ ಬೆಳೆಯುತ್ತದೆ ಎಂಬುದರ ಬಗ್ಗೆ ವೈಜ್ಞಾನಿಕವಾಗಿ ತಾವು ವರದಿಯನ್ನು ತರಿಸಿಕೊಂಡಿರುತ್ತೀರಿ. ಇವತ್ತು ಮದ್ದೂರಿನಲ್ಲಿ ಮತ್ತು ಜೇವರ್ಗಿಯಲ್ಲಿ ಫುಡ್ ಪ್ರೋಸೆಸಿಂಗ್ ಯೂನಿಟ್‌ನ್ನು ಸೆಂಟ್ರಲ್ ಗೌವರ್ನಮೆಂಟ್ ತಿಳಿಸಿರುವಂತೆ ನಾವು ಮಾಡಿದ್ದೇವೆಂದು ತಾವು ಹೇಳುತ್ತೀರಿ. ಆದರೆ, ಎಲ್ಲೆಲ್ಲಿ ಹಾರ್ಟಿಕಲ್ಚರ್ ಕ್ರಾಪ್ ಇದೆ, ಅಂಥ ಕಡೆ ಫುಡ್ ಪ್ರೋಸೆಸಿಂಗ್ ಯೂನಿಟ್‌ನ್ನು ಮಾಡಬೇಕಾಗಿತ್ತು. ನಮ್ಮ ಕೊಪ್ಪಳ ಜಿಲ್ಲೆಯಲ್ಲಿ ವಿಶೇಷವಾಗಿ ಮೈಜ್ ಬೆಳೆಯುತ್ತೇವೆ. ಹಾಗೆಯೇ ಅಲ್ಲಿ ಹಾರ್ಟಿಕಲ್ಚರ್ ಕ್ರಾಪ್ ಕೂಡ ಬಹಳ ಚೆನ್ನಾಗಿದೆ. ಆದ್ದರಿಂದ, ಹೆಚ್ಚಾಗಿ ಹಾರ್ಟಿಕಲ್ಚರ್ ಕ್ರಾಪ್ ಬೆಳೆಯತಕ್ಕಂಥ ಬಿಜಾಪುರ, ಬಾಗಲಕೋಟೆ, ಕೊಪ್ಪಳ, ಚಿತ್ರದುರ್ಗ, ಕೋಲಾರ, ಈ ಎಲ್ಲಾ ಜಿಲ್ಲೆಗಳಲ್ಲಿ ಇಂಥ ಒಂದು ಪಾರ್ಕ್‌ಗಳನ್ನು ಮಾಡಿದರೆ ಅಲ್ಲಿನ ರೈತರಿಗೆ ಅನುಕೂಲವಾಗುತ್ತದೆ. ಆದ್ದರಿಂದ, ಕೊಪ್ಪಳ ಜಿಲ್ಲೆಯನ್ನು ತಾವು ಕನ್ಸಿಡರ್ ಮಾಡಬೇಕೆಂದು

ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ಅಭಿಯಾಚನೆ ಸಂ. 5ರಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ವಿಮಾನಯಾನ, ಇದರ ಬಗ್ಗೆ ನಾನು ಮಾತನಾಡುತ್ತೇನೆ. ವಿಶೇಷವಾಗಿ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರಕ್ಕೆ ವಿಶೇಷವಾಗಿ ಅನುದಾನವನ್ನು ನೀಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮಂಗಳೂರು ಜಿಲ್ಲೆಯಲ್ಲಿ ಒಂದು ಸಾವಿರ ಎಕರೆ, ಉಡುಪಿಯಲ್ಲಿ ಎರಡು ಸಾವಿರ ಎಕರೆ, ಮತ್ತು ಉತ್ತರ ಕನ್ನಡದಲ್ಲಿ ಒಂದು ಸಾವಿರ ಎಕರೆ ಪ್ರದೇಶಗಳಿಗೆ ಸ್ಪೆಷಲ್ ಎಕನಾಮಿಕ್ ಜೋನ್ ಎಂದು ಕೇಂದ್ರ ಸರ್ಕಾರ ಅಂತಿಮವಾಗಿ ಮಂಜೂರಾತಿ ಕೊಡುವ ಹಂತದಲ್ಲಿದೆ. ಆದ್ದರಿಂದ. ತಾವೂ ಕೂಡ ವಿಶೇಷವಾದ ಅನುದಾನವನ್ನು ಕೊಟ್ಟು ಶೀಘ್ರವಾಗಿ ಇದು ಕಾರ್ಯರೂಪಕ್ಕೆ ಬರುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಹಾಗೆಯೇ ಮಂಗಳೂರು ವಿಮಾನ ನಿಲ್ದಾಣವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಏರಿಸುವ ಬಗ್ಗೆ ಕಳೆದ ಎರಡು ವರ್ಷಗಳಿಂದ ಪ್ರಯತ್ನಗಳಾದರೂ ಕೂಡ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಆದ್ದರಿಂದ ಇದರ ಬಗ್ಗೆಯೂ ಕೂಡ ತಾವು ಆಧ್ಯತೆಯನ್ನು ಕೊಡಬೇಕು. ಬೇಡಿಕೆ ಸಂ.1ರಲ್ಲಿ ಕೃಷಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ತೆಂಗಿನ ಎಣ್ಣೆಗೆ ಸಂಬಂಧಪಟ್ಟಂತೆ ವಿಶೇಷವಾದ ಬೇಡಿಕೆ ಏನೆಂದರೆ, ಬ್ರಾಂಡೆಡ್ ಮತ್ತು ಅನ್ ಬ್ರಾಂಡೆಡ್‌ಗಳಿಗೆ ಒಂದು ಕೋಟಿ ಟರ್ನ್ ಓವರ್ ಮೇಲೆ 4 ಪರ್ಸೆಂಟ್ ಇದ್ದದ್ದು ಈಗ ನೇರವಾಗಿ 20 ಪರ್ಸೆಂಟ್ ಆಗುತ್ತದೆ. ಪಕ್ಕದ ರಾಜ್ಯಗಳಾದ ಕೇರಳದಲ್ಲಿ 4 ಪರ್ಸೆಂಟ್ ಮತ್ತು ಗೋವಾದಲ್ಲಿ ತೆಂಗಿನ ಎಣ್ಣೆಗೆ 2 ಪರ್ಸೆಂಟ್ ಇದೆ. ಆದ್ದರಿಂದ ಈ ಒಂದು ನಿಟ್ಟಿನಲ್ಲಿ ತಾವು ಅದರ ಬಗ್ಗೆ ಪುನರ್ ವಿಮರ್ಶೆಯನ್ನು ಮಾಡಬೇಕಾಗಿದೆ ಎಂದು ಕೇಳಿಕೊಳ್ಳುತ್ತೇನೆ. 200 ಎಂಎಲ್-ಗಿಂತ ಕಡಿಮೆ ಇರುವಂತಹ ಪ್ಯಾಕೇಜ್ ಮೇಲೆ ತಾವು ಬೇಕಾದರೆ 20 ಪರ್ಸೆಂಟ್‌ನ್ನು ಹಾಕಿ. ಇದಕ್ಕಿಂತ ಮೇಲ್ಪಟ್ಟಕ್ಕೆ ಎಲ್ಲದಕ್ಕೂ ತಾವು 4 ಪರ್ಸೆಂಟನ್ನು ವಿಧಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಬೇಡಿಕೆ ನಂ. 31 ರಲ್ಲಿ ಸಾರಿಗೆ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಎಸ್‌ಎಸ್‌ಐ ಘಟಕಗಳಿಗೆ ಆದ ಅನ್ಯಾಯದ ಬಗ್ಗೆ ನಾನು ಹೇಳುವುದಕ್ಕೆ ಬಯಸುತ್ತೇನೆ. ಆಟೋಮೊಬೈಲ್ ಸ್ಪ್ರಿಂಗ್ಸ್ ಮತ್ತು ರಿಟ್ರೇಡ್ ರಬ್ಬರ್‌ನ್ನು ಇವತ್ತಿನದಿವಸ ಪಕ್ಕದ ತಮಿಳುನಾಡು ಮತ್ತು ಪಾಂಡಿಚೇರಿಯಿಂದ ಖರೀದಿಯಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ ಎಸ್‌ಎಸ್ ಐ ಘಟಕಗಳಿಗೆ ಸಾಕಷ್ಟು ಅನ್ಯಾಯವಾಗುತ್ತಿದೆ. ಇದರಿಂದ ನಮ್ಮ ರಾಜ್ಯಕ್ಕೆ ಕೋಟ್ಯಾಂತರ ರೂಪಾಯಿಗಳಷ್ಟು ನಷ್ಟವಾಗಿದೆ. ಪರ್ಚೇಸ್ ಕಮಿಟಿ, ವೆರಿಫಿಕೇಷನ್ ಕಮಿಟಿ, ಆಡಿಟ್ ಕಮಿಟಿ ಈ ಮೂರರಲ್ಲಿಯೂ ಕೂಡ ಅದೇ ರೀತಿಯಲ್ಲಿದ್ದು, ಬಹುಶಃ ಇದರ ಬಗ್ಗೆ ತನಿಖೆಯನ್ನು ನಡೆಸಿದರೆ ಸಾಕಷ್ಟು ಅವ್ಯವಹಾರಗಳು ಇವತ್ತು ಬೆಳಕಿಗೆ ಬರುತ್ತದೆ. ಈ ಬಗ್ಗೆಯೂ ಕೂಡ ತಾವು ಸರಿಪಡಿಸಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಬೇಡಿಕೆ ನಂ. 9ರಲ್ಲಿ ಮಂಗಳೂರು ವಿಶ್ವವಿದ್ಯಾಲಯಕ್ಕೆ 185 ಕೋಟಿ 64 ಲಕ್ಷ ರೂಪಾಯಿಗಳನ್ನು ತಾವು ಕೊಟ್ಟಿದ್ದರೂ ಕೂಡ ಅನೇಕ ಪ್ರಾಧ್ಯಾಪಕರ ಹುದ್ದೆಗಳು ಖಾಲಿ ಇವೆ. ಅದನ್ನು ಭರ್ತಿ ಮಾಡುವಂತಹ ನಿಟ್ಟಿನಲ್ಲಿ ಕಾರ್ಯವಾಗಬೇಕು. ಬೇಡಿಕೆ ನಂ. 42ರಲ್ಲಿ ಇಎಸ್‌ಐ-ನಲ್ಲಿ ಆಸ್ಪತ್ರೆಗಳಿಗೆ ಕಾಯಕಲ್ಪವನ್ನು ಕೊಡಬೇಕಾಗಿದೆ ಹಾಗೂ ತುರ್ತಾಗಿ ಅಲ್ಲಿ ಪೂರ್ಣಾವಧಿಯ ವೈದ್ಯರ ನೇಮಕವನ್ನು ಮಾಡಬೇಕು.

ಅದೇ ರೀತಿ ಬೇಡಿಕೆ ನಂ. 37ರಲ್ಲಿ ಮೂಲಭೂತ ಸೌಕರ್ಯಗಳ ಬಗ್ಗೆ ತಾವು 25ಲಕ್ಷ ರೂಪಾಯಿಗಳನ್ನು ವಿಶೇಷವಾದ ಘಟಕವನ್ನು ಮಾಡಿಕೊಂಡು ಇಟ್ಟುಕೊಂಡಿದ್ದರೂ ಸಹ ಎರಡು ವರ್ಷಗಳಿಂದ ಏಷ್ಯನ್ ಡೆವಲಪ್‌ಮೆಂಟ್‌ನ ಯಾವುದೇ ಒಂದು ಯೋಜನೆ ಮಂಗಳೂರಿನಲ್ಲಿ ಕಾರ್ಯಾರಂಭವಾಗಿಲ್ಲ, ತಕ್ಷಣ ಅದು ಆರಂಭವಾಗುವ ನಿಟ್ಟಿನಲ್ಲಿ ಪ್ರಯತ್ನ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಬೇಡಿಕೆ ನಂ. 12ರಲ್ಲಿ ಯುವಜನ ಕ್ರೀಡಾ ಇಲಾಖೆಗೆ ತಾವು ಕೊಟ್ಟಿರುವಂತಹ ಆದ್ಯತೆ ಏನೇನೂ ಸಾಲದು, ಇದರ ಬಗ್ಗೆ ತುಂಬಾ ಅನ್ಯಾಯವಾಗಿದೆ ಎಂದು ಹೇಳುವಂತಹ ಅಂಶವನ್ನು ಹೇಳುತ್ತಾ ಮಹಾನಗರಪಾಲಿಕೆ ಹಾಗೂ ಪುರಸಭೆ, ಟೌನ್ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ಗಳ ಆಯವ್ಯಯದಲ್ಲಿ ಕಡ್ಡಾಯವಾಗಿ 1 ಪರ್ಸೆಂಟನ್ನು ಕ್ರೀಡೆಗಾಗಿ ವಿನಿಯೋಗಿಸುವಂತೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಂಡಲ್ಲಿ ಅರ್ಧದಲ್ಲಿ ನಿಂತುಕೊಂಡಿರುವಂತಹ ಅನೇಕ ಕ್ರೀಡಾಂಗಣಗಳನ್ನು ಪೂರ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದರಲ್ಲಿ ಕೇಂದ್ರದ 7 ಕೋಟಿ ರೂಪಾಯಿಗಳ ನೆರವು ಇದ್ದರೂ ಕೂಡ ಸಿಂಥೆಟಿಕ್ ಟ್ರಾಕ್‌ಗಳು ಅರ್ಧದಲ್ಲಿ ನಿಂತು ಹಾಳಾಗಿ ಹೋಗುತ್ತಿವೆ ಎನ್ನತಕ್ಕಂಥಾದ್ದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಎನ್‌ಎಸ್‌ಎಸ್ ಬಗ್ಗೆ ಹೇಳುವುದಾದರೆ, ವಿಶೇಷವಾಗಿ ರಾಷ್ಟ್ರೀಯ ಐಕ್ಯತಾ ಯುವಜನ ಶಿಬಿರಕ್ಕೆ, ಭಾರತ ಸೇವಾದಳಕ್ಕೆ 12.5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರ ಕೊಟ್ಟಿರತಕ್ಕಂಥ ಹಣದಲ್ಲಿ ಎನ್‌ಎಸ್‌ಎಸ್ ವಿದ್ಯಾರ್ಥಿಗಳಿಗೆ ಸಮಪಾಲು ಕೊಡಲು ಸಾಧ್ಯವಾಗದಿದ್ದಲ್ಲಿ, ಸುಮಾರು 85,31,600 ವಿದ್ಯಾರ್ಥಿಗಳಿಗೆ ವಿಶೇಷ ಶಿಬಿರಗಳ ಅವಕಾಶ ವಂಚಿತರಾಗತಕ್ಕಂಥ ಪರಿಸ್ಥಿತಿ ಬಂದಿದೆ. ಈ ನಿಟ್ಟಿನಲ್ಲಿ ಬಾಕಿಯಿರುವಂತಹ ಮ್ಯಾಚಿಂಗ್ ಗ್ರಾಂಟ್‌ನ್ನು ತಾವು ಬಿಡುಗಡೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಲೆಕ್ಕಪತ್ರಗಳ ಆಡಿಟ್ ಮಾಡುವ ಹಾಗೆ ಡೆವಲಪ್‌ಮೆಂಟ್ ಆಡಿಟ್ ಮತ್ತು ಸೋಷಿಯಲ್ ಆಡಿಟ್‌ನ್ನು ಕೂಡ ಆಡಳಿತದಲ್ಲಿ ಕಡ್ಡಾಯವಾಗಿ ತರುವ ನಿಟ್ಟಿನಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ವಿನಂತಿಯನ್ನು ಮಾಡಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಸದನದ ಮುಂದೆ ಮಂಡಿಸಿರತಕ್ಕಂತಹ ಪೂರಕ ಅಂದಾಜುಗಳನ್ನು ಸಮರ್ಥನೆ ಮಾಡುತ್ತಾ, ಈ ಚರ್ಚೆಯನ್ನು ಪ್ರಾರಂಭ ಮಾಡಿದಂತಹ ಮಾನ್ಯ ಸದಸ್ಯರಾದಂತಹ ಶ್ರೀ ಸಿಂಧ್ಯಾರವರು, ಹಲವಾರು ವಿಚಾರಗಳ ಬಗ್ಗೆ ತಮ್ಮ ಸಲಹೆಗಳನ್ನು ಮಂಡಿಸಿದ್ದಾರೆ. ಪ್ರಧಾನವಾಗಿ ಅವರು ಪ್ರಸ್ತಾವನೆ ಮಾಡಿದಂತಹದ್ದು ಅಂಗನವಾಡಿಗಳು, ಸ್ವಚ್ಛಗ್ರಾಮ, ಫೋಟೋ ಐಡೆಂಟಿಟಿ ಕಾರ್ಡ್ಸ್, ಪಠ್ಯಪುಸ್ತಕಗಳು, ಖಾಸಗಿ ಶಿಕ್ಷಣ ಸಂಸ್ಥೆಗಳ ಸಮಸ್ಯೆಗಳ ಬಗ್ಗೆ ಸಮಾಲೋಚನೆಯನ್ನು ಮುಂದುವರಿಸಬೇಕು ಹಾಗೆ ಎಂದು ಹೇಳಿದರು. ನಾವು ಮಾನ್ಯ ಪ್ರಧಾನಮಂತ್ರಿಗಳನ್ನು ನಿನ್ನೆ ಭೇಟಿ ಮಾಡಿದ ಫಲಶೃತಿ ಏನು ಎನ್ನತಕ್ಕಂಥಾದ್ದನ್ನು ಈ ಸದನಕ್ಕೆ ತಿಳಿಸಬೇಕೆಂದು ಹೇಳಿ ಆಗ್ರಹಿಸಿದ್ದಾರೆ. ನಾವು ಮಾನ್ಯ ಪ್ರಧಾನಮಂತ್ರಿಗಳನ್ನು ಎಲ್ಲಾ ಪಕ್ಷದ ಮುಖಂಡರುಗಳು ಭೇಟಿ ಮಾಡಿದಂತಹ ಸಂದರ್ಭದಲ್ಲಿ ಯಾವ ಆಶ್ವಾಸನೆಗಳನ್ನು ಕೊಟ್ಟಿದ್ದರೋ ಅದೇ ಆಶ್ವಾಸನೆಗಳನ್ನು ನಿನ್ನೆಯು ಸಹ ಪುನರ್ ಸಮರ್ಥನೆ ಮಾಡಿದರು. ಕೆಲಾಮಿಟಿ ರಿಲೀಫ್ ಫಂಡ್ ನಮ್ಮ ರಾಜ್ಯಕ್ಕೆ ಬರಬೇಕಾಗಿರತಕ್ಕಂತಹ ತನ್ನ ಪಾಲು ಏನಿದೆ ಅದನ್ನು ಎರಡು ತಿಂಗಳುಗಳ ಮೊದಲೇ ರಿಲೀಸ್ ಮಾಡಿದ್ದಾರೆ ಎನ್ನತಕ್ಕಂಥಾದ್ದು

ಸ್ವಾಗತಾರ್ಹವಾದಂತಹ ವಿಚಾರವಾದರೂ ಕೆಲಾಮಿಟೀಸ್ ಒಂದು ಕಡೆ ಪ್ರವಾಹಗಳು, ಇನ್ನೊಂದು ಕಡೆ ಬರ ಪರಿಸ್ಥಿತಿ, ಇವುಗಳು ನಮ್ಮ ದೇಶದಲ್ಲಿ ಇತ್ತೀಚೆಗೆ ನಡೆದುಕೊಂಡು ಬಂದಿರತಕ್ಕಂತಹ ಒಂದು ಬೆಳವಣಿಗೆ. ರಾಜಾಸ್ಥಾನದಲ್ಲಿ ಕಳೆದ 6-7 ವರ್ಷಗಳಲ್ಲಿ ತೀವ್ರತರವಾದಂತಹ ಬರ ಇದೆ. ಆದುದರಿಂದ ನಾವು ಕೆಲಾಮಿಟಿ ರಿಲೀಫ್ ಫಂಡ್ ಏನಿದೆ, ಈ 10ನೇ ಫೈನಾನ್ಸ್ ಕಮೀಷನ್‌ನವರು ಮಾಡಿರತಕ್ಕಂತಹ ರೆಕಮೆಂಡೇಷನ್ಸ್ ಏನಿದೆ ಅದಕ್ಕೆ ನಾವು ನಮ್ಮ ತಗಾದೆ ಏನೆಂದರೆ, ಆ ಕೆಲಾಮಿಟಿ ರಿಲೀಫ್ ಫಂಡ್‌ನ ಕಾರ್ಪಸ್‌ನ್ನು ಜಾಸ್ತಿ ಮಾಡಬೇಕೆಂದು ಹೇಳಿದರು. ಈ ದೇಶದಲ್ಲಿ 12 ರಾಜ್ಯಗಳಲ್ಲಿ ಬರ ಪರಿಸ್ಥಿತಿ ಉಂಟಾಗಿದೆ ಎನ್ನುವ ಬೆಳವಣಿಗೆಯ ಹಿನ್ನೆಲೆಯಲ್ಲಿ ಇದರ ಬಗ್ಗೆ ಕೇಂದ್ರ ಸರ್ಕಾರದವರು ವಿಶೇಷವಾದ ಗಮನವನ್ನು ಹರಿಸಬೇಕಾಗಿರತಕ್ಕಂಥಾದ್ದು ಬಹಳ ಅವಶ್ಯಕ ಎನ್ನತಕ್ಕಂತಹ ಸಂಗತಿಯನ್ನು ಮಾನ್ಯ ಪ್ರಧಾನಮಂತ್ರಿಗಳಿಗೆ, ಮಾನ್ಯ ಹಣಕಾಸಿನ ಸಚಿವರಿಗೆ, ಪ್ಲಾನಿಂಗ್ ಕಮೀಷನ್‌ನ ಮಾನ್ಯ ಉಪಾಧ್ಯಕ್ಷರಿಗೆ, ಮಾನ್ಯ ಉಪಪ್ರಧಾನಮಂತ್ರಿಯವರಿಗೆ ನಾವು ನಮ್ಮ ನಿವೇದನೆಯನ್ನು ಕೊಟ್ಟೆವು. ಫುಡ್‌ಗ್ರೈನ್ಸ್ ನ್ನು ರಿಲೀಸ್ ಮಾಡುವ ವಿಚಾರದಲ್ಲಿ ಕೇಂದ್ರ ಸರ್ಕಾರವು ಇನ್ನೂ ಯಾವ ತೀರ್ಮಾನವನ್ನು ತೆಗೆದುಕೊಂಡಿಲ್ಲ. ಅತಿ ಶೀಘ್ರದಲ್ಲಿ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂತಹ ಭರವಸೆಯನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದ ಮಾನ್ಯ ಪ್ರಧಾನಿಮಂತ್ರಿಯವರು ಮತ್ತು ಮಾನ್ಯ ಉಪ ಪ್ರಧಾನಮಂತ್ರಿಯವರ ಗಮನಕ್ಕೆ ಒಂದು ವಿಚಾರವನ್ನು ನಾವು ತಂದದ್ದು ಏನೆಂದರೆ ಲಕ್ಷಾಂತರ ಟನ್ಸ್ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಏನು ಸ್ಟೋರ್ ಮಾಡಿದ್ದಾರೆ, ಅದನ್ನು ರಾಜ್ಯಗಳಿಗೆ ಹಂಚತಕ್ಕಂತಹ ಕಾಲದಲ್ಲಿ ಮನುಷ್ಯರು ಅದನ್ನು ಉಪಯೋಗಿಸಬಹುದಾದಂತಹ ಕ್ವಾಲಿಟಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು ಎನ್ನತಕ್ಕಂತಹ ಸೂಚನೆಯನ್ನು ಮಾಡಿದಾಗ, ಅಲ್ಲಿಯೇ ಇದ್ದಂತಹ ಮಾನ್ಯ ಸಚಿವರಾದಂತಹ ಶಾಂತಕುಮಾರ್ ರವರು ಆ ನಿರ್ಣಯನ್ನು ಒಪ್ಪಿ ಇನ್ನು ಮೇಲೆ ಏನು ಲಿಫ್ಟ್ ಮಾಡಬೇಕಾದರೂ ಕೂಡ ಅದನ್ನು ಜಾಯಿಂಟ್ ಇನ್ಸ್ ಪೆಕ್ಷನ್ ಮಾಡಿ ಒಬ್ಬ ಸ್ಟೇಟ್ ಗೌವರ್ನಮೆಂಟ್ ರೆಪ್ರಸೆಂಟಿಟೀವ್, ಮತ್ತು ಸೆಂಟ್ರಲ್ ಗೌವರ್ನಮೆಂಟ್ ರೆಪ್ರಸೆಂಟಿಟೀವ್ Through the food Corporation of India ಅವರಿಬ್ಬರೂ ಒಪ್ಪಿಗೆಯಾದರೆ ಮಾತ್ರ ಅದನ್ನು ಒಪ್ಪಿಕೊಳ್ಳಬಹುದು, ಇಲ್ಲದಿದ್ದರೆ ತಿರಸ್ಕಾರ ಮಾಡಿದರೆ ಬೇರೆ ಗೋಡೌನ್ ನಿಂದ ನಿಮಗೆ ಬೇಕಾದಂತಹ ಪೂರೈಕೆಗಳನ್ನು ನಾವು ಪೂರೈಸುತ್ತೇವೆ ಎನ್ನತಕ್ಕಂತಹ ಮಾತುಗಳನ್ನು ಹೇಳಿದ್ದು ನಮಗೆ ಬಹಳ ಸಮಾಧಾನವನ್ನು ತಂದಂತಹ ಬೆಳವಣಿಗೆ. ಕೇಂದ್ರ ಸರ್ಕಾರ ಈ ಬರದ ವಿಚಾರದಲ್ಲಿ 15 ರವರೆವಿಗೂ ಕೂಡ ಇನ್ನೂ ಕಾದು ನೋಡಬೇಕು ಎಂದರು. ಮಾನ್ಯ ಸಿಂಧ್ಯಾರವರು ಈ ವಿಚಾರವನ್ನು ಪ್ರಸ್ತಾಪ ಮಾಡಿದರು. ಇನ್ನು 2 ರಿಂದ 4 ದಿವಸಗಳಲ್ಲಿ, ಇವತ್ತು ನನಗೆ ಬಂದಿರತಕ್ಕಂತಹ ಸುದ್ದಿಯ ಪ್ರಕಾರ ಕೊಡಗಿನಲ್ಲಿ ಮಳೆಯಾಗುತ್ತಿದೆ, ಹಾಗೆಯೇ ನಮ್ ಕೋಸ್ಟಲ್ ಲೈನ್‌ನಲ್ಲಿಯೂ ಕೂಡ ಮಳೆಯಾಗುತ್ತಿದೆ, ರಾಜಾಸ್ಥಾನದ ಕೆಲವು ಭಾಗಗಳಲ್ಲಿ ಮಳೆಯಾಗಿದೆ, ಉತ್ತರ ಪ್ರದೇಶವನ್ನು ಬಿಟ್ಟು ಬಾಕಿ ಕಡೆಗಳಲ್ಲಿ ಮಳೆಯಾಗುತ್ತಿದೆ ಹಾಗೆ ಎಂದು ಹೇಳಿ ನಿನ್ನೆಯೂ ಕೂಡ ನಮ್ಮ ಕೇಂದ್ರ ಹಣಕಾಸಿನ ಸಚಿವರು ವರ್ತಮಾನವನ್ನು ಕೊಟ್ಟರು. ಇವತ್ತು ಅದನ್ನು ಸಮರ್ಥಿಸತಕ್ಕಂತಹ ಹಲವು ಬೆಳವಣಿಗೆಗಳು ನಮಗೆ ನಾನಾ ಭಾಗಗಳಿಂದ ಬರುತ್ತಿದೆ. ಆದ್ದರಿಂದ ಅವರು ವೈಟ್ ಅಂಡ್ ವಾಚ್ ಅಂಡ್ ಸೀ ಎನ್ನತಕ್ಕಂತಹ ಮನೋಭೂಮಿಕೆಯನ್ನು ಪಡೆದವರಾಗಿದ್ದಾರೆ, ಆದರೆ ಸೈಮಲ್‌ಟೇನಿಯಸ್ ಗೌವರ್ನಮೆಂಟ್ ಆಫ್ ಇಂಡಿಯಾದವರು

ಏನು ಮಾಡಬಹುದು ಎನ್ನುವುದಕ್ಕೆ ಪೂರ್ವಭಾವಿ ಸಿದ್ಧತೆಗಳನ್ನು ಅವರು ಮಾಡಿಕೊಳ್ಳುತ್ತಿದ್ದಾರೆ ಎನ್ನತಕ್ಕಂಥಾದ್ದು ನಮಗೆ ಸ್ಪಷ್ಟವಾಯಿತು.

ಇನ್ನು ಅಂಗನವಾಡಿ ಕಾರ್ಯಕರ್ತರು ಮಾಡುತ್ತಿರತಕ್ಕಂತಹ ಕೆಲಸಕ್ಕೆ ತಕ್ಕ ಹಾಗೆ ಅವರಿಗೆ ರೈಮ್ಯುನರೇಷನ್ ಕೊಡುತ್ತಿಲ್ಲ ಎನ್ನತಕ್ಕಂಥಾದ್ದು ಸ್ವಯಂವೇದ್ಯವಾದಂತಹ ವಿಚಾರ. ಈ ಸದನದ ಒಟ್ಟಾರೆ ಥಿಂಕಿಂಗ್ ಏನೆಂದರೆ, ಅಂಗನವಾಡಿ ಕಾರ್ಯಕರ್ತರು ಏನು ಇವತ್ತು ಸಾವಿರಾರು ಮಂದಿ ಇದ್ದಾರೆ. ಅವರೆಲ್ಲರೂ ಬಹಳ ನಿಸ್ವಾರ್ಥವಾದಂತಹ ಸೇವೆಯನ್ನು ಮಾಡಿದ್ದಾರೆ ಎನ್ನತಕ್ಕಂಥಾದ್ದನ್ನು ನಾವು ಕೊಂಚ ಅಭಿಮಾನದಿಂದಲೇ ಸ್ಮರಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ ಈಗಿನ ಕಾಲದಲ್ಲಿ 1000-00-1300-00 ರೂಪಾಯಿಗಳಲ್ಲಿ ಏನು ಜೀವನವನ್ನು ಮಾಡುವುದಕ್ಕೆ ಸಾಧ್ಯ ಎನ್ನತಕ್ಕಂತಹ ಪ್ರಶ್ನೆ ಒಂದು ಕಡೆ ಇದ್ದಾರೆ, ಮತ್ತೊಂದು ಕಡೆಗೆ ನಮ್ಮ ಸಂಪನ್ಮೂಲಗಳನ್ನು ಹೊಂದಿಸತಕ್ಕಂತಹ ಜಟಿಲವಾದಂತಹ ಪ್ರಶ್ನೆಗೆ ಸುಲಭವಾದಂತಹ ಉತ್ತರಗಳು ನಮಗೆ ಸಿಗುವುದಿಲ್ಲ. ಆದುದರಿಂದ ಅಂಗನವಾಡಿ ಕಾರ್ಯಕರ್ತರು ಮಾಡುತ್ತಿರತಕ್ಕಂತಹ ಎಲ್ಲಾ ಕೆಲಸಗಳು, ಎಲ್ಲದರಲ್ಲಿಯೂ ಕೂಡ ಅವರನ್ನು ಇನ್‌ವಾಲ್ವ್ ಮಾಡಲಿಕ್ಕೆ ಪ್ರಾರಂಭ ಮಾಡಿದ್ದೇವೆ.

ನಮ್ಮ ಇತ್ತೀಚಿನ ಕಾಲದ ಅತ್ಯಂತ ಯಶಸ್ವಿ ಒಂದು ಎಕ್ಸ್ ಪೆರಿಮೆಂಟ್ 'ಸ್ತ್ರೀಶಕ್ತಿ' ಕಾರ್ಯಕ್ರಮ; ಆ ಕಾರ್ಯಕ್ರಮ ಇವತ್ತು ಏನಾದರೂ ರಾಷ್ಟ್ರಮಟ್ಟದಲ್ಲಿ ಅದು ಗಮನವನ್ನು ಸೆಳೆದಿದ್ದರೆ ಅದಕ್ಕೆ ಮೂಲಭೂತವಾಗಿ ಕಾರಣಭೂತರಾಗಿರತ್ತಕಂಥವರು ಅಂಗನವಾಡಿ ಕಾರ್ಯಕರ್ತರು ಎನ್ನತಕ್ಕಂಥಾದ್ದನ್ನು, ಈ ಸದನದಲ್ಲಿ ಆ ಮಾತುಗಳನ್ನು ಹೇಳಬೇಕಾಗಿರತಕ್ಕಂಥಾದ್ದು ಬಹಳ ಅವಶ್ಯಕವಾಗಿದೆ. ಅವರ ಮೂಲಭೂತವಾದಂತಹ ಸಮಸ್ಯೆಗಳಿಗೆ ನಾವು ಪರಿಹಾರವನ್ನು ಕಂಡುಹಿಡಿಯಬೇಕಾಗುತ್ತದೆ. ಅದಕ್ಕೆ ಮುಂದಿನ ದಿನಗಳಲ್ಲಿ ನಮಗೆ ಆ ಶಕ್ತಿ ಬರಬಹುದು ಹಾಗೆ ಎಂದು ಹೇಳಿ ನಾವು ಯೋಚನೆಯನ್ನು ಮಾಡುತ್ತಿದ್ದೇವೆ.

ಸ್ವಚ್ಛ ಗ್ರಾಮ ಯೋಜನೆಗೆ 2001-02ನೇ ಇಸವಿಯಲ್ಲಿ 60 ಕೋಟಿ ರೂಪಾಯಿಗಳನ್ನು ಡ್ರಾ ಮಾಡಿದ್ದು, 2002-03ನೇ ಇಸವಿಯಲ್ಲಿ ಈಗಾಗಲೇ 50 ಕೋಟಿ ರೂಪಾಯಿಗಳನ್ನು ಡ್ರಾ ಮಾಡಿದ್ದೇವೆ, ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಮತ್ತಿತರ ಏಜೆನ್ಸಿಗಳು ಈ ಸ್ವಚ್ಛ ಗ್ರಾಮ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆ. ಈ ಪೂರಕ ಅಂದಾಜುಗಳಲ್ಲಿ 13 ಕೋಟಿ ರೂಪಾಯಿಗಳನ್ನು ಏನು ನಮೂದು ಮಾಡಿದ್ದೇವೆ ಅದು ನಾವು ಹುಡ್ಕೋದಿಂದ ಪಡೆದಿರತಕ್ಕಂತಹ ಏನು ಸಾಲವಿದೆ, ಆ ಸಾಲದ ಬಡ್ಡಿಗೋಸ್ಕರ ನಾವು ಇದನ್ನು ಮಾಡಿಕೊಂಡಿದ್ದೇವೆ.

ಇನ್ನೂ ಫೋಟೋ ಐಡೆಂಟಿಟಿ ಕಾರ್ಡ್ಸ್ ಬಗ್ಗೆ ಹೇಳುವುದಾದರೆ ಇದರ ರಾಜ್ಯ ಸರ್ಕಾರದ ಹೊಣೆಗಾರಿಕೆಯಾಗಿದೆ, ನಿಜ ಇದರಲ್ಲಿ ಬಹಳ ಗೊಂದಲಗಳಿವೆ, ಯಾವ ಚುನಾವಣೆಗಳು ನಡೆದರೂ ಕೂಡ ಸ್ವಾಭಾವಿಕವಾಗಿ ಬರತಕ್ಕಂಥಾದ್ದು ಒಂದು ದೂರು, ಪುಕಾರು ಏನು ಎಂದು ಹೇಳಿದರೆ, ಕೊರತೆ ಏನು ಎಂದು ಹೇಳಿದರೆ ಜೆನ್ಯುಅನ್ ವೋಟರ್ಸ್‌ನ ಹೆಸರು ವೋಟರ್ಸ್ ಲಿಸ್ಟ್‌ನಲ್ಲಿಲ್ಲ, ಮಾನ್ಯ ಜಯಪ್ರಕಾಶ್ ಹೆಗಡೆಯವರು ಒಂದು ಉದಾಹವಣೆಯನ್ನು ಕೊಟ್ಟರು. ನನಗೆ ಬಹಳ ಉದಾಹರಣೆಗಳು ಗೊತ್ತು, 20 ವರ್ಷಗಳಿಂದ ಒಂದೇ ಕಡೆ ಇದ್ದಾರೆ, ಹೋದವರ್ಷ ಅವರ ಹೆಸರಿತ್ತು, ಈ ವರ್ಷ ಅವರ ಹೆಸರು ಇಲ್ಲ. ಈ ಮೂಲಭೂತ ಲೋಪದೋಷಗಳನ್ನು ಸರಿಪಡಿಸಬೇಕಾಗಿದ್ದರೆ ರಾಜಕೀಯ ಪಕ್ಷಗಳು ಕೂಡ ಸ್ವಲ್ಪ ಸಹಕಾರವನ್ನು ಮಾಡಬೇಕಾಗುತ್ತದೆ.

ಸರ್ವೆಸಾಮಾನ್ಯವಾಗಿ ನಮ್ಮ ರಾಜಕೀಯ ಪಕ್ಷದ ಕಾರ್ಯಕರ್ತರೆಲ್ಲರೂ ಕೂಡ ಯಾವುದಾದರೂ ಉಪಚುನಾವಣೆಗಳು ಬಂದರೆ ಅಥವಾ ಜನರಲ್ ಎಲೆಕ್ಷನ್ ಬಂದಂತಹ ಕಾಲದಲ್ಲಿ ವೋಟರ್ಸ್ ಲಿಸ್ಟ್‌ನ್ನು ಪಡೆದು ನಾವು ಅದರಲ್ಲಿ ಗುರುತಿನ ಚೀಟಿಯನ್ನು ಹಂಚುತ್ತೇವೆ. ಆದರೆ ರಾಜಕೀಯ ಪಕ್ಷಗಳು ಮಾಡಬೇಕಾಗಿರತಕ್ಕಂತಹ ಕೆಲಸಗಳೇನೆಂದರೆ, ಈ ವೋಟರ್ಸ್ ಲಿಸ್ಟ್ ನ್ನು ಅಪ್ ಟುಡೇಟ್ ಮಾಡತಕ್ಕಂತಹ ಕಾಲದಲ್ಲಿ ಸಂಬಂಧಪಟ್ಟಂತಹ ಮೊಹಲ್ಲಾ ಬ್ಲಾಕ್ ಗಳಲ್ಲಿ ಒಂದು ನಿರಂತರವಾದಂತಹ ಮಾನಿಟರಿಂಗ್ ವ್ಯವಸ್ಥೆಯನ್ನು ರಾಜಕೀಯ ಪಕ್ಷಗಳು ಮಾಡಲಿಕ್ಕೆ ಸಾಧ್ಯವಾಗುವುದಾದರೆ ಈ ನ್ಯೂನತೆಗಳನ್ನು, ತಪ್ಪುಗಳನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು ಬೇರೆ ಯಾವ ಪ್ರಯತ್ನದಿಂದಲೂ ಕೂಡ ನಾವು ಅದನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಇನ್ನು ಪಠ್ಯಪುಸ್ತಕಗಳ ಬಗ್ಗೆ ಮಾನ್ಯ ಸದಸ್ಯರು ಕೊರತೆಗಳನ್ನು ಹೇಳಿದ್ದಾರೆ. ಆದರ ಬಗ್ಗೆ ನಾನು ವಿಚಾರ ಮಾಡಿ ಏನು ನಡೆದಿದೆ ಎನ್ನುವುದರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ತಮಗೆ ತಿಳಿಸುತ್ತೇನೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಪಶುಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ, ಹಲವಾರು ತಿಳಿದಂತಹ ಜನರು ಶಿಕ್ಷಣ ಕ್ಷೇತ್ರದಲ್ಲಿ ವಿಶೇಷವಾದಂತಹ ಪರಿಣಿತಿಯನ್ನು ಪಡೆದಿರತಕ್ಕಂತಹವರು ಸರ್ಕಾರದ ಗಮನಕ್ಕೆ ಆಗಿಂದಾಗ್ಗೆ ತರುತ್ತಿದ್ದಾರೆ. ಈ ಲೋಪದೋಷಗಳು ಏನಿವೆ, ಈ ಹೆಚ್ಚುಕಡಿಮೆಗಳು ಏನಿವೆ, ಅವುಗಳೆಲ್ಲವನ್ನೂ ಕೂಡ ಸರಿಪಡಿಸಬೇಕೆಂದು ಹೇಳಿದ್ದಾರೆ, ಮಾನ್ಯ ಪ್ರಾಥಮಿಕ ಶಿಕ್ಷಣ ಶಾಲೆಯ ಸಚಿವರಿಗೆ ಸಂಬಂಧಪಟ್ಟವರ ಜೊತೆಯಲ್ಲಿ ಸಮಾಲೋಚನೆಗಳನ್ನು ಮುಂದುವರಿಸಿ ಸರ್ವಸಮ್ಮತವಾದಂತಹ ಒಂದು ಅಭಿಪ್ರಾಯಕ್ಕೆ ಬರಬೇಕೆಂದು ಹೇಳಿ ಅವರಿಗೆ ಸೂಚನೆಯನ್ನು ಕೊಡುತ್ತೇನೆ. ಅವರು ಅದನ್ನು ಮುಂದುವರಿಸುತ್ತಾರೆ.

6.40 ಪಿಎಂ.

ಹಿಂದೆ ಈ ಶಾಖೆಯನ್ನು ನಡೆಸಿದಂತಹವರು ಹಲವಾರು ಪ್ರೋಗ್ರೆಸ್ಸೀವ್ ಟರ್ನ್ಸ್ ಅನ್ನು ಈ ಇಲಾಖೆಗೆ ಕೊಟ್ಟಿದ್ದಾರೆ ಎನ್ನತಕ್ಕಂತದ್ದನ್ನು ನಾವು ನೆನೆಸಿಕೊಳ್ಳಬೇಕಾಗುತ್ತದೆ. ಏಕೆಂದರೆ ರಿಫಾರ್ಮ್ಸ್ ಸ್ಟಾರ್ಟ್ ಮಾಡುವಾಗ ನಾನಾ ವಿಧವಾದ ಟೀಕೆ ಟಿಪ್ಪಣಿಗಳಿಗೆ ಗುರಿಯಾಗಬೇಕಾಗುತ್ತದೆ. ಅವರು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಅದು ಸಾರ್ವಜನಿಕವಾಗಿ ಚರ್ಚೆ ಪ್ರಾರಂಭವಾಯಿತು. ಮತ್ತು ಅಲ್ಲಲ್ಲಿ ಅಪಸ್ವರಗಳೂ ಕೂಡ ಬಂದವು. ಆದರೂ ಕೂಡ ಅವರು ತಮ್ಮ ಶಕ್ತಿಮೀರಿ ಇದರ ಬಗ್ಗೆ ಗಮನಹರಿಸಿದ್ದಾರೆ ಎನ್ನತಕ್ಕದ್ದು ನನ್ನ ಸ್ಪಷ್ಟವಾದಂತಹ ಅಭಿಪ್ರಾಯ.

ಇನ್ನು ಸಂಪನ್ಮೂಲಗಳ ಕೊರತೆಯಿಂದ ಗಡಿನಾಡು ಅಬಿವೃದ್ಧಿಗೆ, ಮಲೆನಾಡು ಅಭಿವೃದ್ಧಿಗೆ ಮಾನ್ಯ ಎಸ್.ಎಸ್. ಪಾಟೀಲರು ಬಯಲು ಸೀಮೆ ಅಭಿವೃದ್ಧಿ ವಿಷಯವಾಗಿ ವಿಶೇಷವಾದ ಒತ್ತನ್ನು ಅವರು ಕೊಟ್ಟಿದ್ದಾರೆ, ಈ ಎಲ್ಲಾ ಸಂಸ್ಥೆಗಳಿಗೂ ಕೂಡ ಹೆಚ್ಚು ಸಂಪನ್ಮೂಲಗಳನ್ನು ಒದಗಿಸಿಕೊಡಬೇಕಾಗಿರತಕ್ಕದ್ದು ಸರ್ಕಾರದ ಮೇಲೆ ಬಿದ್ದಿರತಕ್ಕ ಜವಾಬ್ದಾರಿ. ಆದರೆ ಆ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಕ್ಕೆ ಈ ಸದನ ನಮಗೆ ಸಹಾಯಕವಾಗಬೇಕು.ಸ್ಲಿಯವರೆಗೆ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳಲಿಕ್ಕೆ ನಮಗೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೂ ಕೂಡ ಇರತಕ್ಕ ಬೆಣ್ಣೆಯನ್ನೇ ಕೂಡ ನಾವು ದಟ್ಟವಾಗಿ ಆ ಬ್ರೆಡ್ ಮೇಲೆ ಹಚ್ಚಲಿಕ್ಕೆ ಆಗುವುದಿಲ್ಲ. ಆದ್ದರಿಂದ ಕುಂದುಕೊರತೆಗಳು ಇರುತ್ತವೆ. ಆವೊಂದು ದೃಷ್ಟಿಯಿಂದ ನಾವು ಇಂತಹ ಪೂರಕ

ಅಂದಾಜುಗಳನ್ನು ಚರ್ಚೆ ಮಾಡತಕ್ಕಂತಹ ಕಾಲದಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸತಕ್ಕ ವಿಧಿ ವಿಧಾನಗಳನ್ನು ನಮಗೆ ಹೇಳಿಕೊಟ್ಟರೆ ಒಳ್ಳೆಯದು. ನಿಜ ಹೇಳುತ್ತೇನೆ, ಸರ್ಕಾರಿ ಖರ್ಚುಗಳನ್ನು ಕಡಿಮೆ ಮಾಡಬೇಕು, ಆ ಮಾತನ್ನು ನಾನು ಒಪ್ಪುತ್ತೇನೆ. ಸರ್ಕಾರ ದುಂದುವೆಚ್ಚಗಳನ್ನು ನಿಲ್ಲಿಸೋಣ, ನಾನ್ ಪ್ಲಾನ್ ಎಕ್ಸ್ ಪೆಂಡಿಚರ್ ಗಳನ್ನು ನಿಲ್ಲಿಸೋಣ, ಮತ್ತಿತರ ಖರ್ಚುಗಳನ್ನು ನಿಷೇಧಿಸಿದರೂ ಕೂಡ ಎಷ್ಟು ಸೇವೆ ಮಾಡಲಿಕ್ಕೆ ಆಗುತ್ತದೆ? ಅಲ್ಲಿ ಸೇವ್ ಮಾಡಿದಂತಹ ಹಣವನ್ನು ಬಯಲುಸೀಮೆ ಅಭಿವೃದ್ಧಿಗೆ ಕೊಟ್ಟುಬಿಟ್ಟರೆಸಾಕೇ? ಈ ಬಜೆಟ್‌ನಲ್ಲಿ ನಮ್ಮ ಆದಾಯ ಮತ್ತು ಖರ್ಚು ಮತ್ತು ವಿತರಣೆ ಇವುಗಳೆಲ್ಲದರ ಬಗ್ಗೆ ನಾವು ಪೂರ್ಣ ದೃಷ್ಟಿಯಿಂದ ನೋಡಬೇಕೆಂದು ಮಾನ್ಯ ಪಾಟೀಲರಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಸಿಂಧ್ಯಾರವರು ಬಹಳ ಪ್ರಚಲಿತವಾಗಿರತಕ್ಕ ಪ್ರಮುಖವಾದ ವಿಚಾರ ಎತ್ತಿದ್ದಾರೆ,ಅದು ಟ್ರಾನ್ಸ್ ಮಿಷನ್ ಲಾಸಸ್. ಪವರ್ ಡಿಸ್ಟ್ರಿಬ್ಯೂಷನ್, ಟ್ರಾನ್ಸ್ ಮಿಷನ್ ಲಾಸಸ್ ಬಗ್ಗೆ ಒಂದು ದೊಡ್ಡ ಪುರಾಣ ಇದೆ. ಇವತ್ತು ನಮ್ಮ ರಾಜ್ಯದಲ್ಲಿ 38 ಪರ್ಸೆಂಟ್ ಅಂತ ಹೇಳಿ ನಮಗೆ ಲೆಕ್ಕ ಕೊಡುತ್ತಾರೆ. ದೆಹಲಿ ಹತ್ತಿರ ಹೋಗುತ್ತಾ, ಉತ್ತರಕ್ಕೆ ಹೋಗುತ್ತಾ ಹೋಗುತ್ತಾ ಅದು 50 ಪರ್ಸೆಂಟ್ ಆಗುತ್ತದೆ. 52 ಪರ್ಸೆಂಟ್ ಆಗುತ್ತದೆ, 60 ಪರ್ಸೆಂಟ್ ಆಗುತ್ತದೆ. ಈ ಬಗ್ಗೆ ಸ್ಪಷ್ಟವಾಗಿ ಯಾರು ಕೂಡ ಅಧಿಕೃತವಾಗಿ, ಕರಾರುವಾಕ್ಕಾಗಿ ಎವಿಡೆನ್ಸ್‌ನ್ನು ಇಟ್ಟುಕೊಂಡು ಇಂತಿಷ್ಟೇ ಲಾಸಸ್ ಆಗುತ್ತಿದೆ ಎನ್ನತಕ್ಕದ್ದನ್ನು ಹೇಳಲಿಕ್ಕೆ ಬರುವುದಿಲ್ಲ. ಆದ್ದರಿಂದ ಈ ಸರ್ಕಾರ ಕೇಂದ್ರ ಸರ್ಕಾರ ಕೊಟ್ಟಿರತಕ್ಕ ಮಾರ್ಗದರ್ಶನದ ಪ್ರಕಾರ, ಬುದ್ಧಿವಾದದ ಪ್ರಕಾರ ಲಾಸಸ್ ಅನ್ನು ಪ್ರೋಗ್ರೆಸ್ಸಿವಾಗಿ ಕಡಿಮೆ ಮಾಡಬೇಕು ಎಂದು ನಾವು ಹಾಕಿ ಕೊಂಡಿರತಕ್ಕ ಗುರಿ. ಆ ಪ್ರೋಗ್ರೆಸ್ಸಿವ್ ರಿಡೆಕ್ಷನ್ ಆಫ್ ಟ್ರಾನ್ಸ್ ಮಿಷನ್ ಲಾಸಸ್ ಕಡಿಮೆ ಮಾಡಿಲಿಕ್ಕೆ ನಾವು ಅದರಲ್ಲಿ ಸ್ವಲ್ಪವಾದರೂ ಯಶಸ್ವಿಯಾದರೆ ನಮ್ಮ ವಿದ್ಯುತ್ ಮಂಡಳಿಯ ಅಧಿಕಾರಿಗಳು ನಮಗೆ ತಿಳಿಸುತ್ತಾರೆ. 38 ಇತ್ತು ಈಗ 36 ಆಗುತ್ತಿದೆ, ಅದನ್ನು ಮುಂದೆ 34ಕ್ಕೆ ಇಳಿಸುತ್ತೇವೆಂದು ಹೇಳುತ್ತಾರೆ. ಇವುಗಳಿಗೆ ಅವರು ಹೇಳತಕ್ಕದ್ದು ಒಂದೇ ಮಾತು ಗುಡ್ ಲಕ್, ಗುಡ್ ವಿಷಸ್. ಅದನ್ನು ಪ್ರೋಗ್ರೆಸ್ಸಿವಾಗಿ ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕು ಎಂದು. 2001-2002ರಲ್ಲಿ 34 ಎಂದು ಅಂದಾಜು ಮಾಡಿದ್ದಾರೆ. ಈ ವರ್ಷ ಅದನ್ನು 32 ಎಂದು ಅಂದಾಜು ಮಾಡುತ್ತಿದ್ದಾರೆ. ಇತರೆ ರಾಜ್ಯಗಳಲ್ಲಿ ನಾನು ಹೇಳಿದಹಾಗೆ 40ಕ್ಕೂ ಜಾಸ್ತಿಯಿದೆ. ಮಿಕ್ಕ ರಾಜ್ಯಗಳಲ್ಲಿ ಇದರ ಪ್ರಮಾಣ ಜಾಸ್ತಿಯಾಗಿದೆ ಅಂತ ಹೇಳಿ ಅದು ನಮಗೆ ಕಂಫರ್ಟಿಂಗ್ ಫ್ಯಾಕ್ಟರ್ ಆಗಲಿಕ್ಕೆ ಸಾಧ್ಯವೇ ಇಲ್ಲ. ನಮ್ಮ ರಾಜ್ಯದಲ್ಲಿ ನಾವೇನು ಸುಧಾರಣೆಗಳನ್ನು ಮಾಡಿದ್ದೇವೆ, ನಾವು ಎಷ್ಟು ಲಾಸಸ್ ಅನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ ಅನ್ನುವುದರ ಮೇಲೆ ನಾವು ಯಶಸ್ಸಿನ ಹಾದಿಯನ್ನು ಹಿಡಿಯಲಿಕ್ಕೆ ಸಾಧ್ಯವೆಂದು ನಾನು ಭಾವನೆ ಮಾಡುತ್ತೇನೆ.

ಈ ಏತ ನೀರಾವರಿ ಯೋಜನೆಗಳ ಬಗ್ಗೆ ಮಾನ್ಯ ಅರಗ ಜ್ಞಾನೇಂದ್ರರವರು ನನ್ನ ಗಮನವನ್ನು ಸೆಳೆದಿದ್ದಾರೆ. ಸಣ್ಣ ನೀರಾವರಿಗೆ ಹೆಚ್ಚು ಹಣವನ್ನು ಕೊಡಬೇಕಾಗಿರತಕ್ಕದ್ದು ಬಹಳ ಅವಶ್ಯಕವಾಗಿದೆ. ಏಕೆಂದರೆ ನಮ್ಮ ಫೋಕಸಿಂಗ್ ಎಲ್ಲಾ, ನಮ್ಮ ದೃಷ್ಟಿ ಎಲ್ಲವೂ ಕೂಡ ಮೇಜರ್ ಅಂಡಿ ಮೀಡಿಯಂ ಇರಿಗೇಷನ್‌ಗೆ ಜಾಸ್ತಿ ಬಿದ್ದಿದೆ. ಮಾನ್ಯ ಪಾಟೀಲರು ಇದನ್ನು ತಮ್ಮ ಭಾಷಣದಲ್ಲಿ ನಮೂದು ಮಾಡಿದರು. ಆದರೆ ನಾವು ಇವತ್ತು ಈ ದ್ವಂದ್ವದಲ್ಲಿ ಸಿಕ್ಕಿ ಹಾಕಿಕೆಂಡಿದ್ದೇವೆ. ಒಂದು ಕಡೆ ಕೃಷ್ಣಾ ಕಣಿವೆಯಲ್ಲಿ ನಮ್ಮ ರಾಜ್ಯಕ್ಕೆ ಬರಬೇಕಾಗಿರತಕ್ಕ ಅಥವಾ ನಾವು ಉಪಯೋಗಿಸಿಕೊಳ್ಳಬೇಕಾಗಿರತಕ್ಕ ನೀರಿನ ಪಾಲನ್ನು ಪೂರ್ಣ ಪ್ರಮಾಣದಲ್ಲಿ

ಉಪಯೋಗಿಸಿಕೊಳ್ಳಬೇಕಾದರೆ ವಿಧಿಯಿಲ್ಲದೆ ನಾವು ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ಹೆಚ್ಚು ಒತ್ತು ಕೊಡಬೇಕಾಗಿರತಕ್ಕದ್ದು ಅವಶ್ಯಕ. ಯಾವಾಗ ಭಾರಿ ನೀರಾವರಿ ಯೋಜನೆಗಳಿಗೆ ಹೆಚ್ಚು ಒತ್ತನ್ನು ಕೊಡುತ್ತೇವೆ ಆಗ ತಾನೇತಾನಾಗಿ ಸಣ್ಣ ನೀರಾವರಿ ಯೋಜನೆಗಳ ಪ್ರಿಯಾರಿಟಿ ಕೊಂಚಮಟ್ಟಿಗೆ ಕುಂಠಿತವಾಗುತ್ತದೆ ಅಥವಾ ಕಡಿಮೆಯಾಗುತ್ತದೆ. ಆದ್ದರಿಂದ ಇವೆರಡನ್ನೂ ಸಹ ಸಮನ್ವಯ ಮಾಡಬೇಕು ಎನ್ನತಕ್ಕದ್ದು ನಮ್ಮ ದೃಷ್ಟಿ. ಅದಕ್ಕೆ ನಮ್ಮ ಪ್ರಯತ್ನಗಳನ್ನು ಮುಂದುವರಿಸುತ್ತೇವೆ.

ಈ ಭೂಮಿ ಕಾರ್ಯಕ್ರಮದ ಬಗ್ಗೆ ಮಾನ್ಯ ಅರಗಜ್ಞಾನೇಂದ್ರರವರು ಹೇಳಿದರು, ಎರಡೂವರೆ ಮೂರು ರೂಪಾಯಿಗಳಲ್ಲಿ ವಿಲೇಜ್ ಅಕೌಂಟೆಂಟರು ಕೊಡುತ್ತಿದ್ದರು ಎಂದು. ನನ್ನ ಅನುಭವ ಅವರ ಅನುಭವಕ್ಕಿಂತ ವಿಭಿನ್ನವಾಗಿದೆ. ಅಥವಾ ಇಲ್ಲಿ ಕುಳಿತಿರತಕ್ಕ ಮಾನ್ಯ ಅರಗ ಜ್ಞಾನೇಂದ್ರರವರ ಅನುಭವಕ್ಕಿಂತ ನಮ್ಮ ಅನುಭವ ಕೊಂಚ ಭಿನ್ನವಾಗಿದೆ. 15 ರೂಪಾಯಿಗಳನ್ನು ಏನು ಇವತ್ತು ಈ ಭೂಮಿ ಕಾರ್ಯಕ್ರಮದ ಚೌಕಟ್ಟಿನಲ್ಲಿ ಸಾಮಾನ್ಯವಾದ ರೈತರಿಗೆ ಅದರಲ್ಲಿಯೂ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಪಹಣಿ ಎಕ್ಸ್‌ಟ್ರಾಕ್ಟ್ ಸಿಗುತ್ತದೆ, ಅವರ ಲ್ಯಾಂಡ್ ರೆವಿನ್ಯೂ ರೈಟ್ಸ್ ಪಟ್ಟಿಯನ್ನು ಕೊಡುತ್ತೇವೆ, ಅದು ಇನ್ನೂ ದೊಡ್ಡ ಪ್ರಮಾಣದ ಹಣವನ್ನು ಖರ್ಚು ಮಾಡಬೇಕಾದ ಪ್ರಸಂಗದ ಕಾರಣ ಈವೊಂದು ಭೂಮಿ ಎನ್ನತಕ್ಕ ಹೊಸ ಷಡ್ಯಂತರವನ್ನು, ಅನಿಷ್ಕಾರವನ್ನು ನಾವು ಜಾರಿಗೆ ತಂದೆವು. ಅದು ಯಶಸ್ವಿಯಾಗಿ ನಡೆಯುತ್ತಿದೆ. ಈಗ ಉತ್ತರೋತ್ತರವಾಗಿ ಈ 15 ರೂಪಾಯಿಗಳನ್ನು ಇಳಿಸಲಿಕ್ಕೆ ಸಾಧ್ಯವಾಗುವುದಾದರೆ ಕಂದಾಯ ಇಲಾಖೆಯವರು ಇದನ್ನು ಅಗತ್ಯವಾಗಿ ಪರಿಶೀಲನೆ ಮಾಡಬಹುದಾಗಿರತಕ್ಕ ವಿಚಾರ ಹಾಗೆಂದು ನಾನು ಭಾವನೆ ಮಾಡುತ್ತೇನೆ ಇವತ್ತು ನಾವು ಪೂರಕ ಅಂದಾಜುಗಳಲ್ಲಿ ಹೆಚ್ಚು ಒತ್ತು ಕೊಟ್ಟಿರತಕ್ಕದ್ದು ಎನರ್ಜಿ. ಅದು ಬುಕ್ ಅಡ್ಜೆಸ್ಟ್ ಮೆಂಟ್ಸ್. ಕರ್ನಾಟಕ ಪವರ್ ಕಾರ್ಪೊರೇಷನ್‌ನವರು ವಿದ್ಯುತ್ ಉತ್ಪಾದನೆ ಮಾಡುತ್ತಾರೆ. ಕೆಪಿಟಿಸಿಎಲ್‌ನವರು ಆ ವಿದ್ಯುತ್ ಅನ್ನು ಖರೀದಿ ಮಾಡುತ್ತಾರೆ ಮತ್ತು ಕೆಪಿಟಿಸಿಎಲ್‌ನವರು ಆ ವಿದ್ಯುತ್‌ನ್ನು ವಿತರಣೆ ಮಾಡುತ್ತಾರೆ. ಅವರು ಯಾರಿಗೆ ವಿತರಣೆ ಮಾಡುತ್ತಾರೆ ಅವರು ಕೆಪಿಟಿಸಿಎಲ್‌ಗೆ ಹಣ ತುಂಬಿಸುವುದಿಲ್ಲ. ಇದು ಇವತ್ತು ಇರತಕ್ಕ ಒಂದು ವಿಷ ಸುಳಿ. ಈ ವಿಷ ಸುಳಿಯಿಂದ ನಾವು ಹೇಗೆ ಪಾರಾಗಬೇಕು? ಆದ್ದರಿಂದಲೇ ಇಂತಹ ಏರುಪೇರುಗಳು ನಮ್ಮ ಬಜೆಟರಿ ಎಸ್ಟಿಮೇಟ್‌ಗಳಲ್ಲಿ ಆಗಿಂದಾಗ್ಗೆ ಕಂಡುಬರುತ್ತದೆಂದು ನಾನು ಭಾವಿಸುತ್ತೇನೆ.

ಇನ್ನು ಹೌಸಿಂಗ್ ಸ್ಕೀಮ್ ಮತ್ತು ಪಬ್ಲಿಕ್ ವರ್ಕ್ಸ್ ಬಳ್ಳಾರಿ ಪ್ಯಾಕೇಜ್ ಮತ್ತು ಕ್ರಾಪ್ ಇನ್‌ಷ್ಯೂರೆನ್ಸ್ ಬಗ್ಗೆ ಮಾನ್ಯ ಪಾಟೀಲರು ಬಹಳ ಒತ್ತು ಕೊಟ್ಟು ಭಾಷಣ ಮಾಡಿದರು. ಕ್ರಾಪ್ ಇನ್‌ಷ್ಯೂರೆನ್ಸ್ 132 ಕೋಟಿ ರೂಪಾಯಿಗಳು, ನಿಜ, ಇನ್‌ಷ್ಯೂರೆನ್ಸ್ ಕಂಪನಿಯವರು ಸುಲಭವಾಗಿ ನಮ್ಮ ರೈತರಿಗೆ ಹಣವನ್ನು ಕೊಟ್ಟು ಬಿಡುವುದಿಲ್ಲ. ಏಕೆಂದರೆ ಒಬ್ಬ ಲೈಫ್ ಇನ್ ಷ್ಯೂರೆನ್ಸ್ ಮಾಡಿದಾಗಲೂ ಕೂಡ 28 ತಕರಾರುಗಳನ್ನು ಲೈಫ್ ಇನ್‌ಷ್ಯೂರೆನ್ಸ್ ಕಾರ್ಪೋರೇಷನ್ ನವರು ಹಾಕತಕ್ಕದ್ದು ಅದು ನನ್ನ ಅನುಭವಕ್ಕೆ ಬಂದಿರತಕ್ಕದ್ದು. ಇದೆ. ಆದ್ದರಿಂದ ಈರೊಂದು ಹೊಸ ಆಯಾಮ ಏನಿದೆ, ರೈತರಿಗೆ ಮೊಟ್ಟಮೊದಲನೆಯ ಭಾರಿಗೆ ಇಷ್ಟೊಂದು ದೊಡ್ಡ ಪ್ರಮಾಣಧಲ್ಲಿ ಇನ್ ಷ್ಯೂರೆನ್ಸ್ ಕಂಪನಿಯವರು ಅವರಿಗೆ ಹಣವನ್ನು ಕೊಡಬೇಕು. ಆದ್ದರಿಂದ ಅಲ್ಲಲ್ಲಿ ಸ್ವಲ್ಪ ತೊಂದರೆಗಳಿವೆ. ಆ ತೊಂದರೆಗಳ ಬಗ್ಗೆ ನಮ್ಮ ಸ್ಥಳೀಯ ಅಧಿಕಾರಿಗಳು ವಿಶೇಷವಾಗಿ ಗಮನಹರಿಸಿ,

ಈ ಕಷ್ಟದ ಕಾಲದಲ್ಲಿ ಯಾರು ಇನ್‌ಷ್ಯೂರೆನ್ಸ್ ಹಣಕ್ಕೆ ಯಾರು ಭಾದ್ಯರಾಗಿದ್ದಾರೆ ಅವರಿಗೆ ಈ ಹಣವನ್ನು ಕೊಡಲಿಕ್ಕೆ ನಾವು ಪ್ರಯತ್ನಗಳನ್ನು ಮುಂದುವರಿಸುತ್ತೇವೆಂದು ತಮ್ಮಲ್ಲಿ ವಿನಂತಿ ಮಾಡಿಕೊಂಡು, ಕೇಂದ್ರ ಸರ್ಕಾರದವರು, ಮತ್ತೊಂದು ಭರವಸೆಯನ್ನು ನಿನ್ನೆ ಕೇಂದ್ರದ ಹಣಕಾಸಿನ ಸಚಿವರು ಕೊಟ್ಟರು. ಅದೇನೆಂದರೆ, ಜುಲೈ, 30ನೇ ತಾರೀಖು ಇನ್‌ಷ್ಯೂರೆನ್ಸ್ ಪ್ರೀಮಿಯಮ್ ಕಟ್ಟತಕ್ಕದ್ದು ಕೊನೆಯ ದಿವಸ ಆಗಿತ್ತು. ಅದನ್ನು ನಿನ್ನೆ ನಮ್ಮ ಕೋರಿಕೆ ಮೇರೆಗೆ ಆಗಸ್ಟ್ 31ರವರೆಗೆ ಎಕ್ಸ್ ಟೆಂಡ್ ಮಾಡಲಿಕ್ಕೆ ಬೇಕಾದಂಥ ಭರವಸೆಯನ್ನು ಕೊಟ್ಟಿರುವುದಕ್ಕೋಸ್ಕರ ಕೇಂದ್ರ ಸರ್ಕಾರಕ್ಕೆ ನಾನು ಈ ಸದನದ ಮೂಲಕ ನನ್ನ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ. ಆದ್ದರಿಂದ ನಮ್ಮ ಮಾನ್ಯ ಪಾಟೀಲರು ಕೆಲವು ವಿಚಾರಗಳನ್ನು ನನಗೆ ತಿಳಿಸಿದ್ದಾರೆ. ಮಾನ್ಯ ಹನುಮೇಗೌಡರು, ಮಾನ್ಯ ಕೃಷ್ಣಮೂರ್ತಿಯವರು ....

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಬರಗಾಲ ಪರಿಸ್ಥಿತಿಯಲ್ಲಿ ವಿದ್ಯುತ್ ದರವನ್ನು ಜಾಸ್ತಿ ಮಾಡಬೇಡಿ ಎಂದು ನಾವು ಹೇಳಿದ್ದೇವೆ.

ಶ್ರೀ ಎಸ್.ಎಂ. ಕೃಷ್ಣ : ನಿನ್ನೆ ಮತ್ತೊಂದು ವಿಚಾರ ನಮ್ಮ ಪ್ರಧಾನಮಂತ್ರಿಗಳು ಮತ್ತು ನಮ್ಮ ಕಾಂಗ್ರೆಸ್ ಮುಖ್ಯಮಂತ್ರಿಗಳ ಬೇಟಿಯಾದ ಕಾಲದಲ್ಲಿ ಚರ್ಚೆ ಆದಂಥಾದ್ದು ಎಂದರೆ ಈ ಬಡ್ಡಿ ಬಗ್ಗೆ ಒಂದು ವಿಶೇಷವಾದಂಥ ಪ್ಯಾಕೇಜ್‌ನ್ನು ನಮ್ಮ ರೈತಾಪಿ ಜನರಿಗೆ ಕೊಡುವ ವಿಚಾರ, ಬಡ್ಡಿಗಳ ಬಗ್ಗೆ ನಮ್ಮ ದೃಷ್ಟಿ ಏನಾಗಿರಬೇಕು? ರಾಜ್ಯಸರ್ಕಾರಗಳು ಏನು ಮಾಡಬೇಕು? ಏಕೆಂದರೆ ನಬಾರ್ಡ್ ನಮ್ಮ ಮೇಲೆ ನಿರ್ಬಂಧ ಹಾಕುತ್ತದೆ. ಹಾಗೆಯೇ ಕಮರ್ಷಿಯಲ್ ಬ್ಯಾಂಕ್‌ಗಳು ನಮ್ಮ ಮೇಲೆ ನಿರ್ಬಂಧ ಹಾಕುತ್ತದೆ. ಆದ್ದರಿಂದ ಒಂದು, A comprehensive policy towards rural credit, ಅದರ ಬಗ್ಗೆ ಕೇಂದ್ರ ಸರ್ಕಾರ ನಮಗೆ ಸೂಕ್ತ ಸಲಹೆಗಳನ್ನು ಕೊಡಬೇಕೆಂದು ನಾವು ಹೇಳಿದ್ದೇವೆ. ಅವರು 15ನೇ ತಾರೀಖು ಆದಮೇಲೆ ಇದರ ಬಗ್ಗೆ ನಮ್ಮ ಜೊತೆಯಲ್ಲಿ ಸಮಾಲೋಚನೆಯನ್ನು ಮುಂದುವರೆಸಿ ಅನಂತರ ಯಾವುದಾದರೂ ಒಂದು ರೀತಿಯಿಂದ ಇದಕ್ಕೆ ಪರಿಹಾರ ಕಂಡುಹಿಡಿಯಬೇಕು ಎಂದು ಅವರು ನಮಗೆ ತಿಳಿಸಿದ್ದಾರೆ. ಮಾನ್ಯ ಸದಸ್ಯರು ಏನು ಸಲಹೆ ಮಾಡಿದ್ದಾರೆ......

ಶ್ರೀ ಶಿವಾನಂದ ಎಸ್. ಪಾಟೀಲ್ : ಈಗ ಮೂರು ಕ್ರಾಪ್ ಗಳಲ್ಲಿ ಮುಖ್ಯವಾಗಿ ಶುಗರ್‌ಕೇನ್ ಮತ್ತು ಆನಿಯನ್ ಮೇಲೆ ಈ ಪ್ರೀಮಿಯಂ ಬಹಳ ಹೆಚ್ಚಾಗಿದೆ. ಒಂದು ಕಡೆ ಇಂಟೆರೆಸ್ಟ್ ರೇಟ್‌ನ್ನು ಕರ್ಟೇಲ್ ಮಾಡಿ ಎಂದು ಅಪೆಕ್ಸ್ ಬ್ಯಾಂಕ್, ಡಿ.ಸಿ.ಸಿ. ಬ್ಯಾಂಕಿಗೆ ಬೆನ್ನು ಹತ್ತಿದ್ದೀರಿ. ಅಲ್ಲಿ ಬಡ್ಡಿ ಪ್ರಮಾಣ 16 ಪರ್ಸೆಂಟ್ ಇದೆ. ಪ್ಲಸ್ ಕ್ರಾಪ್ ಇನ್ ಷ್ಯೂರೆನ್ಸ್ ಪ್ರೀಮಿಯಂ ಆಲೂಗೆಡ್ಡೆ ಮೇಲೆ 11 ಪರ್ಸೆಂಟ್ ಇದೆ. 16 ಪರ್ಸೆಂಟ್ ಬಡ್ಡಿ ಮತ್ತು 11 ಪರ್ಸೆಂಟ್ ಇನ್ ಷ್ಯೂರೆನ್ಸ್ ಪ್ರೀಮಿಯಂ ತುಂಬು ಅಂದರೆ ಅದು ರೈತರಿಗೆ ಸಾಧ್ಯವಿಲ್ಲ. ಮತ್ತೆ ಇದೇ ತರಹ ಶುಗರ್ ಕೇನ್ ಮೇಲೆ 4 ಪರ್ಸೆಂಟ್ ಇದೆ. 16 ಪರ್ಸೆಂಟ್ ರೇಟ್ ಆಫ್ ಇಂಟೆರೆಸ್ಟ್ ಪ್ಲಸ್ 4 ಪರ್ಸೆಂಟ್ ಎಂದರೆ ಇದು 20 ಪರ್ಸೆಂಟ್ ಆಗುತ್ತದೆ. ಹಾಗಾಗಿ 13 ರಿಂದ 15 ನೂರು ಕೋಟಿ ರೂಪಾಯಿಗಳ ವರೆಗೆ ಅಪೆಕ್ಸ್, ಡಿ.ಸಿ.ಸಿ. ಬ್ಯಾಂಕಿನಿಂದ ನೀವು ಸಾಲ ಕೊಡುತ್ತೀರಿ. ಆ ಬಡ್ಡಿಯನ್ನೇ ತೆಗೆದುಕೊಳ್ಳುವುದಕ್ಕೆ ರೈತರು ಬರುತ್ತಿಲ್ಲ. ಮತ್ತೆ ತೆಗೆದುಕೊಂಡಂಥ ಬಡ್ಡಿಯನ್ನು ಮರಳಿ ಕೊಟ್ಟರೆ ನಮಗೆ ಪುನಃ ಸಾಲ ಸಿಗುವುದಿಲ್ಲ ಎನ್ನತಕ್ಕಂಥ ಭಯವನ್ನು ಅವರು ವ್ಯಕ್ತಪಡಿಸಿದ್ದಾರೆ. ಅದಕ್ಕಾಗಿ ಜನರಲ್ ಇನ್‌ಷ್ಯೂರೆನ್ಸ್ ಕಂಪನಿ ಜೊತೆಗೆ ತಾವು ಮತ್ತು

ಕೃಷಿ ಮಂತ್ರಿಗಳು ಸ್ವಲ್ಪ ಮಾತನಾಡಿ. ಏಕೆಂದರೆ ಹೋದ ವರ್ಷ ಇದು ಇರಲಿಲ್ಲ. ಈ ವರ್ಷ ಇಧನ್ನು ಇನ್ ಕಾರ್ಪೊರೇಟ್ ಮಾಡಿದ್ದೀರಿ. ಆದ್ದರಿಂದ ಇದನ್ನು ಸ್ವಲ್ಪ ಕರ್ಟೇಲ್ ಮಾಡಬೇಕು. ಮುಖ್ಯವಾಗಿ ಶುಗರ್‌ಕೇನ್, ಆನಿಯನ್ ಮತ್ತು ಇನ್ನೊಂದು-ಈ ಮೂರು ಕ್ರಾಪ್‌ಗಳದ್ದು ಬಹಳ ಹೆಚ್ಚಾಗಿದೆ. ಅದನ್ನು ಪ್ರಯತ್ನಪಟ್ಟು ಸ್ವಲ್ಪ ಕರ್ಟೇಲ್ ಮಾಡಿಸಿದರೆ ಅನುಕೂಲವಾಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ : ಪ್ರತಿಯೊಂದು ಜಿಲ್ಲೆಗೆ ಕೂಡ ಒಂದು ಪ್ಯಾಕೇಜ್ ಕೊಡತಕ್ಕಂಥ ಸಾಧ್ಯತೆಯನ್ನು ಸಂಪನ್ಮೂಲಗಳು ನಮಗೆ ಕರುಣಿಸಿದರೆ ಅದನ್ನು ಮಾಡಲಿಕ್ಕೆ ಯಾವಲ್ಯ್ಯಂತರವೂ ಇಲ್ಲ. ಆದರೆ ಮಾನ್ಯ ಕರಡಿ ಸಂಗಣ್ಣನವರು ಕೊಪ್ಪಳ ಜಿಲ್ಲೆಯ ವಿಚಾರದಲ್ಲಿ ನನ್ನ ಗಮನ ಸೆಳೆದಿದ್ದಾರೆ. ಅದನ್ನು ನಾನು ಗಮನದಲ್ಲಿಟ್ಟುಕೊಂಡಿರುತ್ತೇನೆ ಎಂದು ಹೇಳುತ್ತೇನೆ ಮತ್ತು ಈ ಕೆ.ಪಿ.ಟಿ.ಸಿ.ಎಲ್. ಇವರ ಡಿಸ್‌ಕನೆಕ್ಷನ್ ಬಗ್ಗೆ ಮುಂದಿನ ಮೂರು-ನಾಲ್ಕು ದಿವಸಗಳಲ್ಲಿ ನಾವು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಏಕೆಂದರೆ .....

ಶ್ರೀ ಪಿ.ಜಿ.ಆರ್. ಸಿಂಧ್ಯಾ : ದಯವಿಟ್ಟು ತಾವು ಈಲ್ಡ್ ಆದರೆ ಒಂದು ಮಾತು ಹೇಳುತ್ತೇನೆ. ಈಗ ಪತ್ರಿಕೆಗಳಲ್ಲಿ ನಾವು ಓದಿದ್ದೇವೆ. ಮಾನ್ಯ ವೀರಕುಮಾರ ಪಾಟೀಲ್ ಅವರು ಕೆ.ಪಿ.ಟಿ.ಸಿ.ಎಲ್. ಅಧ್ಯಕ್ಷರು ಆವವು ಕಡಿತವನ್ನು ಅನೌನ್ಸ್ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಸದನ ನಡೆಯುವಾಗ ಅದು ಕನಿಷ್ಠ ಪಕ್ಷ ನಮಗೂ ಗೊತ್ತಾಗಬೇಕಲ್ಲವೇ? ಎಷ್ಟು ಹೊತ್ತು ಪವರ್ ಕಟ್ ಮಾಡುತ್ತಾರೆ ಎನ್ನತಕ್ಕದ್ದು ನಮಗೆ ಗೊತ್ತಾಗಬೇಕು. ಇನ್ನೊಂದು ನಾವು ಇನ್ಸಿಸ್ಟ್ ಮಾಡಿರತಕ್ಕದ್ದು ಎಂದರೆ, ಕೆ.ಇ.ಆರ್.ಸಿ. ಯವರು ಪರ್ಮಿಷನ್ ಕೊಟ್ಟಿದ್ದಾರೆ ಎಂದು ಹೇಳಿಬಿಟ್ಟು ಹದಿನೇಳೂವರೆ ಪರ್ಸೆಂಟ್ ವಿದ್ಯುತ್ ಬೆಲೆ ಜಾಸ್ತಿ ಮಾಡಿದ್ದೀರೆಂದು ಕೇಳಿದೆ. ಇದರ ಬಗ್ಗೆ ನಾನು ಪ್ರಮುಖವಾಗಿ ಹೇಳಿದ್ದೆ, ಏನೆಂದರೆ ದಯವಿಟ್ಟು ಅದನ್ನು ಆ ಬರಗಾಲ ಸಂದರ್ಭದಲ್ಲಿ ಮಾಡುವುದಕ್ಕೆ ಹೋಗಬೇಡಿ ಎಂದು. ಕೆಲವು ಸಾರಿ ನಾವು ಬೆಲೆಗಳನ್ನು ಜಾಸ್ತಿ ಮಾಡಿದಾಗ ಅದು ಬ್ಯಾಕ್ ಫೈರ್ ಆಗುತ್ತದೆ, ಅದನ್ನು ಕೊಡತಕ್ಕಂಥ ಪರಿಸ್ಥಿತಿಯಲ್ಲಿ ಜನರು ಇಲ್ಲ. ಅದನ್ನು ಮಾಡಬೇಡಿ ಎನ್ನತಕ್ಕದ್ದನ್ನು ಸಹಿತ ನಾನು ಒತ್ತಾಯ ಮಾಡಿದ್ದೇನೆ. ಇದರ ಬಗ್ಗೆ ಸರ್ಕಾರದ ಅಭಿಪ್ರಾಯ ಏನು ಎಂಬುದನ್ನು ತಿಳಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎ. ರಾಮದಾಸ್ : ಇದರ ಬಗ್ಗೆ ನಾನು ಒಂದು ಮಾತು ಹೇಳುತ್ತೇನೆ. ನಾನು ಕಳೆದಬಾರಿ ಬೇಡಿಕೆ ಮೇಲೆ ಚರ್ಚೆ ನಡೆದಂಥ ಸಂದರ್ಭದಲ್ಲಿ ಒಂದು ಮನವಿಯನ್ನು ಮಾಡಿದ್ದೆ. ಒಂದು ಆರ್ಥಿಕ ವರ್ಷದಲ್ಲಿ, ಅದೇ ರೀತಿಯಲ್ಲಿ ಒಂದು ವರ್ಷದಲ್ಲಿ ಒಂದು ಬಾರಿ ಪವರ್ ಹೈಕ್ ಮಾಡುವುದಕ್ಕೋಸ್ಕರವಾಗಿ ಪ್ರಾವಿಷನ್ ಇರುವ ಪ್ರಕಾರದಲ್ಲಿ ಮಾಡಲಾಗಿತ್ತು. ಅದರ ಪ್ರಕಾರ 16.5 ಪರ್ಸೆಂಟ್ ಹೈಕ್ ನ್ನು ಮಾಡಲಾಗಿದೆ. ಇದನ್ನು ಎಲ್ಲರಿಗೂ ಹಾಕಲಾಗಿದೆ. ಮತ್ತೊಂದು ಬಾರಿಗೆ ರಿವಿಜನ್ ಗೋಸ್ಕರವಾಗಿ ಕೆ.ಇ.ಆರ್.ಸಿ. ಮುಂದೆ ಕೆ.ಪಿ.ಟಿ.ಸಿ.ಎಲ್.ನವರು ರಾಜ್ಯಸರ್ಕಾರದ ಸೂಚನೆ ಪ್ರಕಾರ ಅರ್ಜಿಯನ್ನು ಹಾಕಿದ್ದಾರೆ. 487 ಕೋಟಿ ರೂಪಾಯಿಗಳನ್ನು ಅಡಿಷನಲ್ ಆಗಿ ತೆಗೆದುಕೊಳ್ಳುವುದಕ್ಕೋಸ್ಕರವಾಗಿ 12.5 ಪರ್ಸೆಂಟ್‌ನ್ನು ಇದೇ ಆರ್ಥಿಕ ವರ್ಷದಲ್ಲಿ ಮತ್ತೊಂದು ಬಾರಿ ಜಾಸ್ತಿ ಮಾಡಿಕೊಡಬೇಕೆಂದು ಹೇಳಿ ಒಂದು ಅರ್ಜಿಯನ್ನು ಹಾಕಿದ್ದಾರೆ. ಈಗ ಏನು ಎಸ್ಕಾಮ್ಸ್ ಮಾಡಿದ್ದೀರಿ. ಅವರು ಕೂಡ ಕಳೆದ ವರ್ಷ ಒಂದು ಮನವಿಯನ್ನು ಕೊಟ್ಟು, ನಮ್ಮ ಡಿಸ್ಟ್ರಿಬ್ಯೂಷನ್ ಕಂಪನಿಗಳೂ ಅದಕ್ಕೆ ಒಪ್ಪಿಕೊಳ್ಳುತ್ತವೆ. ಆ ದೃಷ್ಟಿಯಿಂದ 487 ಕೋಟಿ ರೂಪಾಯಿಗಳನ್ನು ಅಡಿಷಿನಲ್ ಆಗಿ ಜನರಮೇಲೆ ಅಂದರೆ

ಕನ್‌ಸ್ಯೂಮರ್ಸ್ ಮೇಲೆ ಹಾಕಬೇಕಾದ ಅವಶ್ಯಕತೆ ಇದೆಯೆಂದು ಕೇಳಿದರೆ ಅದು 12..5 ಪರ್ಸೆಂಟ್ ಬರುತ್ತಿದೆ. ದಯಮಾಡಿ ನಾನು ತಮ್ಮಲ್ಲಿ ಮನವಿ ಮಾಡುವಂಥಾದ್ದು ಏನೆಂದರೆ, ಈಗಾಗಲೇ ಒಂದು ಸಲ, ಈ ಆರ್ಥಿಕ ವರ್ಷದಲ್ಲಿ 16.5 ಪರ್ಸೆಂಟ್ ಹಾಕಿದ್ದೀರಿ. ಈಗ ಏನು ಪ್ರಪೋಸಲ್‌ನ್ನು ಸರ್ಕಾರದಿಂದ ಕೆ.ಇ.ಆರ್.ಸಿ. ಮುಂದೆ ಕೊಟ್ಟಿದ್ದೀರಿ. ಅದನ್ನು ದಯಮಾಡಿ ವಿತ್‌ಡ್ರಾ ಮಾಡುವಂಥಾದ್ದು ಆಗಬೇಕು. ಈ ಬಜೆಟ್‌ನಲ್ಲಿ ತಾವು ಅಲೋಕೇಟ್ ಮಾಡಿದ್ದೀರಿ. ಆ ದೃಷ್ಟಿಯಿಂದ ಕೊನೆಯಪಕ್ಷ ರಿವಿಷನ್ ಪಿಟಿಷನ್ ಏನು ಹಾಕಿದ್ದೀರಿ, ಅದನ್ನು ಸರ್ಕಾರ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ನಾನು ಈಗಾಗಲೇ ಈ ಸದನಕ್ಕೆ ಮನವಿ ಮಾಡಿದೆ, ಇದು ಒಂದು ವಿಷಸುಳಿ ಅಂತ ಹೇಳಿ. ಇದರಿಂದ ಹೊರಬರಬೇಕಾಗಿದ್ದರೆ ಎಲ್ಲಿಯಾದರೂ ಒಂದು ಕಡೆ - ಹಿತಕರವಲ್ಲದ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಹೋದ ವರ್ಷ ಏರಿಸಬೇಕೆಂದು ಪ್ರಯತ್ನ ಮಾಡಿದಾಗ ಒಂದು ವರ್ಷ ಮುಂದಕ್ಕೆ ಹಾಕಿ ಅಂತ ಹೇಳಿ ಒಟ್ಟಾರೆ ಅಭಿಪ್ರಾಯ ಬಂದಿತು. ಅದನ್ನು ಒಂದು ವರ್ಷ ಮುಂದಕ್ಕೆ ಹಾಕಿದೆವು. ಆದರೆ ಕಾಸ್ಟ್ ಆಫ್ ಪವರ್ ಪರ್ಚೇಸ್ ಜಾಸ್ತಿಯಾಗುತ್ತಿದೆ. ಕಾಸ್ಟ್ ಆಫ್ ಜನರೇಷನ್ ಏನಿದೆ ಇದೂ ಕೂಡ ಜಾಸ್ತಿಯಾಗುತ್ತಿದೆ. ಬಹುಶಃ ಮಾನ್ಯ ರಾಮದಾಸ್ ಅವರಿಗೆ ಗೊತ್ತಿರಬೇಕು. ಕಳೆದ ವರ್ಷ ನಮ್ಮ ಜಲಾಶಯಗಳು ತುಂಬಲಿಲ್ಲ. ನಿನ್ನೆ ಈ ವಿಚಾರವನ್ನು ಕೂಡ ನಾನು ಮೀಟಿಂಗ್‌ನಲ್ಲಿ ಪ್ರಸ್ತಾಪ ಮಾಡಿದ್ದೆ. ಹೇಗೆ ಕರ್ನಾಟಕ ರಾಜ್ಯಕ್ಕೆ ಅಡ್ವರ್ಸ್ ಆಗಿ ಅಫೆಕ್ಟ್ ಆಗುತ್ತದೆ ಎಂದರೆ, ನಮ್ಮದು 62 ರಿಂದ 72 ಪರ್ಸೆಂಟ್ ಹೈಡಲ್ ಪವರ್ ಸಪೋರ್ಟ್ ಮೇಲೆ ನಿಂತಿರತಕ್ಕಂಥ ರಾಜ್ಯ. ಯಾವಾಗ ಹೈಡಲ್ ಪವರ್‌ನ್ನು ನಾವು ಜನರೇಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಏಕೆಂದರೆ ಜಲಾಶಯಗಳಲ್ಲಿನೀರು ಇಲ್ಲದೇ ಇರುವ ಕಾರಣ, ಆ ಮಟ್ಟಿಗಾದರೂ ನಾವು ಹೊರಗಡೆಯಿಂದ ಇಂಡಿಪೆಂಡೆಂಟ್ ಪವರ್ ಪ್ರೊಡ್ಯೂಸರ್ಸ್ ಅಥವಾ ಸೆಂಟ್ರಲ್ ಇನ್ ಸ್ಟಾಲೇಷನ್ಸ್‌ನಿಂದ ನಾವು ಹಣ ಕೊಟ್ಟು ವಿದ್ಯುಚ್ಛಕ್ತಿ ವ್ಯಾಪಾರ ಮಾಡಬೇಕು. ಆದರೆ ಕರ್ನಾಟಕದ ಕ್ರೆಡಿಟ್ ಏನು ಎಂದರೆ, ಇಧುವರೆಗೂ ಕೂಡ ನಾವು ಯಾವ ಸೆಂಟ್ರಲ್ ಇನ್‌ಸ್ಟಲೇಷನ್ ಗೂ ಕೂಡ ಡಿಫಾಲ್ಟರ್ ಆಗಿಲ್ಲ, ಹಣ ಕೊಟ್ಟು ವಿದ್ಯುತ್ ಖರೀದಿ ಮಾಡಿದ್ದೇವೆ. ಆ ವಿದ್ಯುತ್‌ನ್ನು ವಿತರಣೆ ಮಾಡಿದ್ದೇವೆ. ಕೇಂದ್ರ ಸರ್ಕಾರದ ಜೊತೆಯಲ್ಲೂ ಹೀಗೆ ಕೊಟ್ಟು ತೆಗೆದುಕೊಂಡು ಬಂದಿದ್ದೇವೆ. ಟಾಟರವರ ಜೊತೆಯಲ್ಲಿ, ಜಿಂದಾಲ್ ಅವರ ಜೊತೆಯಲ್ಲೂ ಹೀಗೆ ಕೊಟ್ಟು ತೆಗೆದುಕೊಂಡು ಬಂದಿದ್ದೇವೆ. ನಮ್ಮದು ಈ ತರಹ ರೆಕಾರ್ಡ್ ಇರುವುದರಿಂದ ನಮಗೆ ಸುಲಭವಾಗಿ, ವಿದ್ಯುಚ್ಛಕ್ತಿಯನ್ನು ನೀವು ತೆಗೆದುಕೊಳ್ಳಿ, ನಾವು ಕೊಡುತ್ತೇವೆ ಎಂದು ಬಹಳ ಜನ ಬಂದು ಕೇಳುತ್ತಾರೆ. ಆದರೆ ನಾವು ಆಂತರಿಕವಾಗಿ ನಮ್ಮ ರಾಜ್ಯದೊಳಗೆ ಉದಾಹರಣೆಗೆ, ಕೋಜನರೇಷನ್, ನಮ್ಮ ಸಕ್ಕರೆ ಕಾರ್ಖಾನೆಗಳು ಏನಿವೆ, ಆ ಸಕ್ಕರೆ ಕಾರ್ಖಾನೆಗಳು ಏನು ವಿದ್ಯುತ್ ಉತ್ಪಾದನೆ ಮಾಡುತ್ತವೆ ಅದಕ್ಕೆ ಪ್ರೈಯಾರಿಟಿ ಕೊಟ್ಟು ತೆಗೆದುಕೊಳ್ಳಬೇಕೆಂಬುದು ರಾಜ್ಯಸರ್ಕಾರದ ಒಂದು ನಿಲುವು. ಏಕೆಂದರೆ ಇದಕ್ಕೂ ಚೀಪರ್ ಪವರ್ ನಮಗೆ ಸಿಗಬಹುದು. ಆದರೆ ನಮ್ಮನ್ನೇ ನಂಬಿಕೊಂಡಿರತಕ್ಕವರು, ನಮ್ಮ ಗ್ರಿಡ್ ನ್ನು ನಂಬಿಕೊಂಡಿರತಕ್ಕಂಥ ಈ ಸಕ್ಕರೆ ಕಾರ್ಖಾನೆಗಳು, ಈಗಾಗಲೇ ಸಿಕ್‌ಲಿಸ್ಟ್‌ಗೆ ಸೇರಿರತಕ್ಕಂಥ ಸಕ್ಕರೆ ಕಾರ್ಖಾನೆಗಳು. ಆದ್ದರಿಂದ ಇವುಗಳ ಬಗ್ಗೆ ಕೂಡ ಕೆ.ಪಿ.ಟಿ.ಸಿ.ಎಲ್. ಪರಿಗಣಿಸಿ, ಒಟ್ಟಾರೆ ನಮ್ಮ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು

ಒಂದು ತೀರ್ಮಾನವನ್ನು ಅವರು ಮಾಡಬೇಕಾಗುತ್ತದೆ. ಈ ಬರ ಪರಿಸ್ಥಿತಿ ಬಂದಿರತಕ್ಕಂಥ ಹಿನ್ನೆಲೆಯಲ್ಲಿ ಮುಂದಿನ ದಿವಸಗಳಲ್ಲಿ, ಈ ಬರದ ತೀವ್ರತೆಯನ್ನು ಗಮನಿಸಿ ನಂತರ ಇದರ ಬಗ್ಗೆ ಕೂಡ ನಾವು ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಮುಂದಿನ ದಿವಸಗಳಿಗೋಸ್ಕರ ನಾನು ಕಾಯುತ್ತೇನೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಕೊಟ್ಟಿರತಕ್ಕಂಥ ಸಲಹೆಗಳನ್ನು ನಾವು ಸ್ವೀಕರಿಸಿ, ಅವುಗಳನ್ನು ನಾವು ಪರ್ಯಾಲೋಚನೆ ಮಾಡುತ್ತೇವೆ. ಈಗ ಈ ಪೂರಕ ಅಂದಾಜುಗಳನ್ನು ಸಭೆಯ ಒಪ್ಪಿಗೆಗಾಗಿ ನಾನು ಮಂಡಿಸುತ್ತೇನೆ.

2002-2003ನೇ ಸಾಲಿನ ಪೂರಕ ಅಂದಾಜುಗಳು.

ಅಧ್ಯಕ್ಷರು : ನಾನು ಈಗ 2002-2003ನೇ ಸಾಲಿನ ಪೂರಕ ಅಂದಾಜುಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

"31-3-2003ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅಭಿಯಾಚನೆ ಸಂಖ್ಯೆ 01, 02, 03, 05, 07, 08, 09, 10, 12, 13, 24, 25, 27, 28, 29, 30, 31, 35, 36, 37, 39, 41, 42, 43, 44, 45, 46, 47, 48, 49, 50, 51, 52, 53 ಹಾಗೂ 61ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರಕಾರಕ್ಕೆ (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಪೂರಕ ಅಂದಾಜುಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಪೂರಕ ಅಂದಾಜುಗಳನ್ನು ಮಂಜೂರು ಮಾಡಲಾಯಿತು.

ಅನುಬಂಧ

(2002-2003ನೇ ಸಾಲಿನ ಪೂರಕ ಅಂದಾಜುಗಳ ಪಟ್ಟಿಯನ್ನು ಲಗತ್ತಿಸಲಾಗಿದೆ)

ಅಧ್ಯಕ್ಷರು : ಈಗ ಮಾನ್ಯ ಮುಖ್ಯಮಂತ್ರಿಗಳು 2002ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ-3) ವಿಧೇಯಕವನ್ನು ಮಂಡಿಸಬೇಕು.

(ಅ) 2002ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕ ಸಂಖ್ಯೆ (3)
ಮಂಡನೆಗೆ ಅನಮತಿ ಕೋರಿಕೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, "2002ರ ಕರ್ನಾಟಕ ಧನವಿನಿಯೋಗ ವಿಧೇಯಕ ಸಂಖ್ಯೆ-3 ಅನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "2002ನೇ ಸಾಲಿನ ಧನವಿನಿಯೋಗ ಸಂಖ್ಯೆ-(3) ಅನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್.ಎಂ. ಕೃಷ್ಣ : (ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೇ, "2002ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕ ಸಂಖ್ಯೆ-(3)ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : ಕರ್ನಾಟಕ ಧನವಿನಿಯೋಗ ಸಂಖ್ಯೆ (3) ಅನ್ನು ಮಂಡಿಸಲಾಗಿದೆ.